ಬುಧವಾರ, ಜೂನ್ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 175 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ತೇಜಸ್’ ಹಸ್ತಾಂತರ

2026ರ ಮಾರ್ಚ್ ಒಳಗಾಗಿ ಆರು ತೇಜಸ್ ಲಘು ಯುದ್ಧವಿಮಾನಗಳನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸಲಾಗುವುದು ಎಂದು ಎಚ್‌ಎಎಲ್ ತಿಳಿಸಿದೆ



ನ್ಯಾಯಾಂಗ ಬಂಧನ

ಡ್ರಗ್ಸ್ ಪ್ರಕರಣದಡಿ ಬಂಧಿತರಾಗಿರುವ ತಮಿಳು, ತೆಲುಗು ನಟ ಶ್ರೀಕಾಂತ್ ಅವರಿಗೆ ಜುಲೈ 7ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ



ಸೆನ್ಸೆಕ್ಸ್ 82,055 | ನಿಫ್ಟಿ 25,044 | $/₹ 86.05 | ಚಿನ್ನ (Std. 10g) ₹1.03 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13 ಲಕ್ಷ (ಬೆಂಗಳೂರು)

ಮಧ್ಯವರ್ತಿಗಳ ಪಾತ್ರ ಸಾಬೀತು

ಸೀಟ್ ಬ್ಲಾಕಿಂಗ್: ಕೋಚಿಂಗ್ ಕೇಂದ್ರಗಳ ಶುಲ್ಕ ಭರಿಸಿದ್ದ ಆರೋಪಿಗಳು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ 2024–25ನೇ ಸಾಲಿನ ಪ್ರವೇಶ ಪ್ರಕ್ರಿಯೆ ವೇಳೆ ನಡೆದಿದ್ದ ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಒಂಬತ್ತು ಮಧ್ಯವರ್ತಿಗಳು ಭಾಗಿಯಾಗಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕೆಲ ಸಿಬ್ಬಂದಿಯ ಸಹಕಾರ ಪಡೆದ ಮಧ್ಯವರ್ತಿಗಳು ವೈದ್ಯಕೀಯ ಕೋರ್ಸ್ ಪ್ರವೇಶದ ನಿರೀಕ್ಷೆಯಲಿದ್ದ ಪ್ರತಿಭಾವಂತ ವಿದ್ಯಾರ್ಥಿಗಳ ಸಿಇಟಿ ಸೀಟು ಹಂಚಿಕೆಯ ‘ಗೌಪ್ಯ ಕೀ’ ಪಡೆದು ವಂಚನೆ ಎಸಗಿದ್ದಾರೆ. ಕೆಲ ಪ್ರಕರಣಗಳಲ್ಲಿ ಸಿಇಟಿಯಲ್ಲಿ ಉನ್ನತ ಶ್ರೇಣಿ ಪಡೆದು ‘ನೀಟ್’ನಲ್ಲಿ ನಿರೀಕ್ಷೆಯಷ್ಟು ಅಂಕ ಬಾರದ ವಿದ್ಯಾರ್ಥಿಗಳಿಗೆ ಮಧ್ಯವರ್ತಿಗಳೇ ಹಣ ನೀಡಿ ಕೋಚಿಂಗ್ ಕೇಂದ್ರಗಳಿಗೆ ಮತ್ತೊಂದು ಅವಧಿ ನೀಟ್ ತರಬೇತಿಗಾಗಿ (ಲಾಂಗ್ ಟರ್ಮ್) ಕಳುಹಿಸಿದ್ದಾರೆ ಎಂಬ ಅಂಶಗಳನ್ನು ಪ್ರಕರಣದ ತನಿಖೆ ನಡೆಸಿದ ಮಲ್ಲೇಶ್ವರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆಯ (ಸೈಬರ್) ಅಧಿಕಾರಿಗಳು ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಮಧ್ಯವರ್ತಿಗಳು ಅಭ್ಯರ್ಥಿಗಳ ಲಾಗಿನ್, ಪಾಸ್‌ವರ್ಡ್, ಗೋಪ್ಯ ಕೀ ಅನ್ನು ಅನಧಿಕೃತವಾಗಿ ಪಡೆದುಕೊಂಡು ಅವರ ಪರವಾಗಿ ಆಯ್ಕೆ ನಮೂದಿಸಿದ್ದಾರೆ. ಕೆಲವು ಕಾಲೇಜುಗಳಿಗೆ ಲಾಭ ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಆದರೆ, ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾಗಿವೆ ಎಂದು ಶಂಕಿಸಲಾದ ಕಾಲೇಜುಗಳಲ್ಲಿ ಬಹುಬೇಡಿಕೆಯ ಸೀಟುಗಳು ಖಾಲಿ ಉಳಿದಿರುವ ಕಾರಣ ಅಂತಹ ಕಾಲೇಜುಗಳ ಪಾತ್ರವನ್ನು ಖಚಿತಪಡಿಸಲು ಸಾಧ್ಯವಾಗಿಲ್ಲ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

▶6

ಮುಖ್ಯಾಂಶಗಳು

- ಸಾಬೀತಾಗದ ವಿದ್ಯಾರ್ಥಿಗಳ ಪಾತ್ರ
- ಖಾಸಗಿ ಕಾಲೇಜುಗಳ ಪಾತ್ರ ಖಚಿತಪಡಿಸದ ತನಿಖೆ
- ಕೆಇಎ ಸಿಬ್ಬಂದಿ, ಮಧ್ಯವರ್ತಿಗಳೇ ಪ್ರಮುಖ ಆರೋಪಿಗಳು



ಪೊಲೀಸ್ ತನಿಖೆಯಲ್ಲಿ ಮಧ್ಯವರ್ತಿಗಳ ಪಾತ್ರ ಸಾಬೀತಾಗಿದೆ. ಭವಿಷ್ಯದಲ್ಲಿ ಇಂತಹ ದಂಧೆಗೆ ಅವಕಾಶ ಇಲ್ಲದಂತೆ ಪ್ರಾಧಿಕಾರ ಎಲ್ಲ ರೀತಿಯ ಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ

ಎಚ್. ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ

ಸೀಟ್ ಬ್ಲಾಕಿಂಗ್ ತಡೆಗೆ ಕ್ರಮಗಳು

- ಸಿಇಟಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ‘ಆಧಾರ್’ ದೃಢೀಕರಣ
- ಒಂದು ಮೊಬೈಲ್ ಸಂಖ್ಯೆಯಿಂದ ಒಂದು ಅರ್ಜಿ ಮಾತ್ರ ಸಲ್ಲಿಕೆಗೆ ಅವಕಾಶ
- ಒಟಿಪಿ ನಮೂದು, ಮುಖಚಹರೆ ದಾಖಲಿಸುವುದು ಕಡ್ಡಾಯ
- ಗ್ರಾಮ ಒನ್ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ
- ಚಾಯ್ಸ್ 4 ನಮೂದಿಸಿದರೂ ಮುಂದಿನ ಸುತ್ತಿಗೆ ಅವಕಾಶ (ದಂಡಸಹಿತ)

ಸೀಟು ಹಂಚಿಕೆಗೂ ಒಟಿಪಿ, ಮುಖಚಹರೆ

ಸಿಇಟಿ ಅರ್ಜಿ ಸಲ್ಲಿಕೆಗೆ ಒಟಿಪಿ ಕಡ್ಡಾಯ ಮಾಡಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ವಿವಿಧ ಕೋರ್ಸ್‌ಗಳ ಸೀಟು ಹಂಚಿಕೆಗೂ ಒಟಿಪಿ, ಮುಖಚಹರೆ ದೃಢೀಕರಣ ಬಳಸಿಕೊಳ್ಳುತ್ತಿದೆ.

‘ಹಿಂದಿನ ವರ್ಷಗಳಲ್ಲಿ ಸೀಟು ಹಂಚಿಕೆ ಮಾಡುವಾಗ ಗೌಪ್ಯ ಕೀ ಬಳಸಿಕೊಂಡು ಪ್ರಕ್ರಿಯೆ ನಡೆಸಲಾಗುತ್ತಿತ್ತು. ಕಚೇರಿಯ ಕೆಲ ಹೊರಗುತ್ತಿಗೆ ಸಿಬ್ಬಂದಿ ಮಧ್ಯವರ್ತಿಗಳಿಗೆ ಗೌಪ್ಯ ಕೀ ಸೋರಿಕೆ ಮಾಡಿರುವುದು ಪತ್ತೆಯಾದ ನಂತರ ಒಟಿಪಿ, ಮುಖಚಹರೆ ದೃಢೀಕರಣದ ವಿಧಾನ ಅಳವಡಿಸಿಕೊಂಡಿದ್ದೇವೆ. ಎರಡೂ ಅಂಶಗಳ ಆಧಾರದಲ್ಲಿ ಸೀಟು ಹಂಚಿಕೆ ಸಂಪೂರ್ಣ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದರು.

ಸಿಇಟಿಗೆ ಅರ್ಜಿ ಸಲ್ಲಿಸುವಾಗ ನಮೂದಿಸಿದ್ದ ಮೊಬೈಲ್ ನಂಬರ್ ಬಳಸಿಕೊಂಡು ಆಯಾ ವಿದ್ಯಾರ್ಥಿಗಳ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲಾಗುತ್ತದೆ. ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ಬದಲಾವಣೆ ಮಾಡಲು ವಿದ್ಯಾರ್ಥಿಗಳು ಲಿಖಿತವಾಗಿ ಮನವಿ ಸಲ್ಲಿಸಿ, ಬದಲಾವಣೆ ಮಾಡಿಕೊಳ್ಳಬಹುದು ಎಂದರು.

ಬ್ಲಾಕಿಂಗ್ ಏಕೆ?

ರಾಜ್ಯ ಸರ್ಕಾರ ಮತ್ತು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ನಡುವಿನ ಒಮ್ಮತದ ಒಪ್ಪಂದದ ಪ್ರಕಾರ, ಸಿಇಟಿ ಮೂಲಕ ಎಲ್ಲ ಸುತ್ತಿನ ಹಂಚಿಕೆಯ ನಂತರ ಉಳಿದ ಸೀಟುಗಳು ಹಾಗೂ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ನಂತರ ಪ್ರವೇಶ ಪಡೆಯದ ಸೀಟುಗಳನ್ನು ಆಡಳಿತ ಮಂಡಳಿ ಕೋಟಾದ ಮೂಲಕ ಭರ್ತಿ ಮಾಡಿಕೊಳ್ಳಬಹುದು. ಇದು ಸಿಟ್ ಬ್ಲಾಕಿಂಗ್ ದಂದೆಯ ಮೂಲ. ವೈದ್ಯಕೀಯ ಕೋರ್ಸ್ ಆಕಾಂಕ್ಷಿಯಾಗಿರುವ, ಸಿಇಟಿಯಲ್ಲಿ ಉನ್ನತ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳು ಎಂಜನಿಯರಿಂಗ್ ಸೀಟು ಹಂಚಿಕೆಯಲ್ಲಿ ಭಾಗ ವಹಿಸುವಂತೆ ಮಾಡಿ, ಕೊನೆಯ ಸುತ್ತಿನವರೆಗೂ ಪ್ರವೇಶ ಪಡೆಯದೇ ಸೀಟು ಕಾಯ್ದಿರಿಸಲಾಗುತ್ತದೆ. ಹೀಗೆ ಬೇಡಿಕೆ ಇರುವ ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಸೈನ್ಸ್ ಮೊದಲಾದ ಕೋರ್ಸ್‌ಗಳಿಗೆ ಆಡಳಿತ ಮಂಡಳಿಗಳು ಒಂದು ಸೀಟಿಗೆ ₹60 ಲಕ್ಷದವರೆಗೂ ಸೀಟು ಮಾರಾಟ ಮಾಡಿಕೊಳ್ಳುತ್ತವೆ.

ಲಂಚ ಹಗರಣ: ಹೈಕಮಾಂಡ್ ಗರಂ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಲಂಚ ಪಡೆಯಲಾಗುತ್ತಿದೆ’ ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ಹೈಕಮಾಂಡ್, ರಾಜ್ಯ ನಾಯಕರನ್ನು ತರಾಟೆಗೆ ತೆಗೆದುಕೊಂಡಿದೆ.

ರಾಷ್ಟ್ರಪತಿ ಹಾಗೂ ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಲು ನವದೆಹಲಿಗೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚಿಸಿದರು. ರಾಜ್ಯ ಸರ್ಕಾರದ ಕಾರ್ಯವೈಖರಿ ಬಗ್ಗೆ ಸ್ವಪಕ್ಷೀಯರೇ ಧ್ವನಿ ಎತ್ತಿರುವ ಬಗ್ಗೆ ಪ್ರಸ್ತಾಪಿಸಿದ ಹೈಕಮಾಂಡ್ ನಾಯಕರು, ‘ಬಿ.ಆರ್.ಪಾಟೀಲ ಅಸಮಾಧಾನವನ್ನು ಆರಂಭದಲ್ಲೇ ಶಮನ ಮಾಡಬೇಕಿತ್ತು. ಅವರನ್ನು ಕರೆಸಿ ಅಹವಾಲು ಆಲಿಸಬೇಕಿತ್ತು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ’ ಎಂದು ಕಿವಿಮಾತು ಹೇಳಿದರು.

ಆಗ ಸಿದ್ದರಾಮಯ್ಯ, ‘ಪಾಟೀಲ ಅವರಿಗೆ ಭಾನುವಾರವೇ ಕರೆ ಮಾಡಿ ಭೇಟಿ ಮಾಡುವಂತೆ ತಿಳಿಸಿದ್ದೆ. ಬುಧವಾರ ಬರುವುದಾಗಿ ತಿಳಿಸಿದ್ದಾರೆ. ಬೆಂಗಳೂರಿಗೆ ತೆರಳಿದ ಕೂಡಲೇ ಅವರೊಂದಿಗೆ ಚರ್ಚೆ ನಡೆಸುವೆ’ ಎಂದು ರಾಷ್ಟ್ರೀಯ ನಾಯಕರಿಗೆ ತಿಳಿಸಿದರು.

▶7

ಡೊನಾಲ್ಡ್ ಟ್ರಂಪ್ ಘೋಷಣೆ • ನಮಗೆ ಜಯ ಎಂದ ಇರಾನ್

ಇರಾನ್–ಇಸ್ರೇಲ್ ಕದನ ವಿರಾಮ

ದುಬೈ/ದೋಹಾ/ ಬಿರ್ಶೇಬಾ (ಎಪಿ/ಎಎಫ್‌ಪಿ/ರಾಯಿಟರ್ಸ್): ‘ಇಸ್ರೇಲ್ ಮತ್ತು ಇರಾನ್ ಪೂರ್ಣ ಪ್ರಮಾಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಮುಂಜಾನೆ (ಭಾರತೀಯ ಕಾಲಮಾನ) ಹೇಳಿದ್ದಾರೆ.

‘ಕತಾರ್ ಸರ್ಕಾರವು ಅಮೆರಿಕದ ಮನವಿಯ ಮೇರೆಗೆ ಇರಾನ್‌ನೊಂದಿಗೆ ಮಾತುಕತೆ ನಡೆಸಿ ಕದನ ವಿರಾಮಕ್ಕೆ ಒಪ್ಪಿಸಿದೆ’ ಎಂದು ಮೂಲಗಳು ಹೇಳಿವೆ. ಕತಾರ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ಸೋಮವಾರ ರಾತ್ರಿ ಇರಾನ್ ನಡೆಸಿದ ಕ್ಷಿಪಣಿ ದಾಳಿಯ ಬಳಿಕ ಈ ಕ್ಷಿಪ್ರ ಬೆಳವಣಿಗೆ ನಡೆದಿದೆ.

▶10


ಇಸ್ರೇಲ್ ಹೇಳಿದ್ದು	ಇರಾನ್ ಹೇಳಿದ್ದು
ನಮ್ಮ ‘ರೈಸಿಂಗ್ ಲಯನ್’ ಕಾರ್ಯಾಚರಣೆಯು ಸಂಪೂರ್ಣವಾಗಿ ಯಶಸ್ವಿಯಾಗಿದೆ. ಈ ಕಾರ್ಯಾಚರಣೆಯ ಉದ್ದೇಶಗಳು ಪೂರ್ಣಗೊಂಡಿವೆ. ‘ಅಣ್ವಸ್ತ್ರ ಮತ್ತು ಕ್ಷಿಪಣಿ’ ಎಂಬ ಎರಡು ಬೆದರಿಕೆಗಳನ್ನು ನಾವು ಇಲ್ಲವಾಗಿಸಿದ್ದೇವೆ. ಯಾವುದೇ ರೀತಿಯ ಕದನ ವಿರಾಮ ಉಲ್ಲಂಘನೆಗೆ ನಾವು ತಕ್ಕ ಪ್ರತ್ಯುತ್ತರ ನೀಡುತ್ತೇವೆ. ಕದನ ವಿರಾಮ ಘೋಷಣೆಯಾಗಿದ್ದರೂ ಅಪಾಯ ಇದ್ದೇ ಇದೆ	ಹೊಸ ಯುಗವೊಂದು ಆರಂಭಗೊಂಡಿದೆ. ಐತಿಹಾಸಿಕ ಜಯ ಇದು. ಅಮೆರಿಕ ಮತ್ತು ಪಶ್ಚಿಮದ ದೇಶಗಳ ಕೊಂಬನ್ನು ಇರಾನ್ ಮುರಿದಿದೆ. ಅವರಾಗಿಯೇ ಕದನ ವಿರಾಮ ಘೋಷಿಸುವಂತೆ ಇರಾನ್ ಮಾಡಿತು. ಈ ಜಯವು ನಮಗೆ ದೇವರ ಉಡುಗೊರೆ. ಶತ್ರುವು ತನ್ನ ದಾಳಿಯನ್ನು ತಾನಾಗಿಯೇ ನಿಲ್ಲಿಸುವಂತೆ ಮಾಡಿದ ಗೆಲುವಿದು

ನಿಜವಾಗಿ ನಮಗೆ ಸುಸ್ತಾಗಿ ಹೋಗಿದೆ. ನಾವೆಲ್ಲರೂ ದಣಿದಿದ್ದೇವೆ. ನಮಗೆ ಮನಶ್ಶಾಂತಿ ಬೇಕು. ನಮಗೆ, ಇರಾನ್‌ನ ಜನರಿಗೆ, ಪ್ಯಾಲೆಸ್ಟೀನಿಯನ್ನರಿಗೆ ಈ ಪ್ರದೇಶದ ಎಲ್ಲರಿಗೂ. ಎಲ್ಲಾ ಮಾನವ ಕುಲಕ್ಕೂ. ಕದನ ವಿರಾಮವನ್ನು ನಾವು ಸ್ವಾಗತಿಸುತ್ತೇವೆ

ಟಮ್ಮೀ ಶೆಲ್, ಟೆಲ್ ಅವೀವ್ ನಿವಾಸಿ

ಸಾಕು! ಇಡೀ ವಿಶ್ವವೇ ನಮ್ಮನ್ನು ಸೋಲಿಸಿದೆ. ನಮ್ಮನ್ನು ಬಿಟ್ಟು ಹಿಜ್ಬುಲ್ಲಾ ಕೂಡ ಕದನ ವಿರಾಮ ಘೋಷಿಸಿಕೊಂಡಿತು, ಈಗ ಇರಾನ್ ಕೂಡ ಹೀಗೆಯೇ ಮಾಡಿತು. ಬಹುಶಃ ಮುಂದಿನ ಬಾರಿ ಗಾಜಾದಲ್ಲಿಯೂ ಕದನ ವಿರಾಮ ಘೋಷಣೆಯಾಗಬಹುದು

ಆದಿಲ್ ಫಾರೂಕ್, ಗಾಜಾ ನಿವಾಸಿ



ಜುಲೈನಿಂದ ರೈಲು ಟಿಕೆಟ್ ದರ ತುಸು ಹೆಚ್ಚಳಕ್ಕೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಜುಲೈ 1ರಿಂದ ಅನ್ವಯವಾಗುವಂತೆ, ಮೇಲ್, ಎಕ್ಸ್‌ಪ್ರೆಸ್ ರೈಲುಗಳ ಎ.ಸಿ, ನಾನ್ ಎ.ಸಿ ಹಾಗೂ ಎರಡನೇ ದರ್ಜೆ ಪ್ರಯಾಣದ ಟಿಕೆಟ್ ದರಗಳನ್ನು ತುಸು ಹೆಚ್ಚಳ ಮಾಡಲು ರೈಲ್ವೆ ಇಲಾಖೆ ಮುಂದಾಗಿದೆ.

ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ನಾನ್ ಎ.ಸಿ ಪ್ರಯಾಣ ದರದಲ್ಲಿ ಪ್ರತಿ ಕಿ.ಮೀ.ಗೆ ಕನಿಷ್ಠ 1 ಪೈಸೆ ಹೆಚ್ಚಳ, ಎ.ಸಿ ದರ್ಜೆ ಪ್ರಯಾಣಕ್ಕೆ ಪ್ರತಿ ಕಿ.ಮೀ.ಗೆ 2 ಪೈಸೆ ಹೆಚ್ಚಿಸುವ ಪ್ರಸ್ತಾವ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಪನಗರ ರೈಲು, ಮಾಸಿಕ ಟಿಕೆಟ್ ದರಗಳಲ್ಲಿ ಯಾವುದೇ ಹೆಚ್ಚಳ ಇಲ್ಲ. ಎರಡನೇ ದರ್ಜೆ ಸಾಮಾನ್ಯ ಟಿಕೆಟ್‌ಗೆ ಸಂಬಂಧಿಸಿ 500 ಕಿ.ಮೀ.ವರೆಗಿನ ಪ್ರಯಾಣ ದರದಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. 500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ ಅರ್ಧಪೈಸೆಯಷ್ಟು ಹೆಚ್ಚಳ ಮಾಡುವ ಪ್ರಸ್ತಾವ ಇದೆ ಎಂದಿದ್ದಾರೆ.

‘ಲೋಕಾ’ ದಾಳಿ: ₹34.90 ಕೋಟಿ ಅಕ್ರಮ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಸಂಬಂಧ ವಿವಿಧ ಇಲಾಖೆಗಳ ಎಂಟು ಅಧಿಕಾರಿಗಳ ಮನೆ, ಕಚೇರಿ ಮತ್ತು ಸಂಬಂಧಿಕರ ಮನೆಗಳಲ್ಲಿ ಶೋಧ ನಡೆಸಿದ ಲೋಕಾಯುಕ್ತ ಪೊಲೀಸರು, ₹34.90 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಬೆಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ಗದಗ, ಧಾರವಾಡ, ಕಲಬುರಗಿ ಹಾಗೂ ಬೆಳಗಾವಿಯ ಒಟ್ಟು 45 ಸ್ಥಳಗಳಲ್ಲಿ ಪೊಲೀಸರ ತಂಡವು ಮಂಗಳವಾರ ಬೆಳಿಗ್ಗೆ ಏಕಕಾಲಕ್ಕೆ ಶೋಧ ನಡೆಸಿತು.

ಅಧಿಕಾರಿಗಳ ಮನೆಗಳನ್ನು ಜಾಲಾಡಿದ ತನಿಖಾಧಿಕಾರಿಗಳ ತಂಡ, ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿ, ಚಿನ್ನಾಭರಣ, ವಿದೇಶಿ ಕರೆನ್ಸಿ, ಜರ್ಮನ್ ಗಿಳಿ, ದುಬಾರಿ ವಾಚ್‌ಗಳನ್ನು ಪತ್ತೆ ಮಾಡಿದೆ. ಅಧಿಕಾರಿಗಳು ನಿವೇಶನ ಮತ್ತು ಕೃಷಿ ಜಮೀನುಗಳ ಮೇಲೆ ಹೂಡಿಕೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಶೋಧದ ವೇಳೆ ಪತ್ತೆಯಾಗಿವೆ.

ಆರೋಪಿಗಳ ಬಳಿ ₹23 ಕೋಟಿ ಮೌಲ್ಯದ ಸ್ಥಿರಾಸ್ತಿಗಳು, ₹27.55 ಲಕ್ಷ ನಗದು, ₹3.72 ಕೋಟಿ ಮೌಲ್ಯದ ಚಿನ್ನಾಭರಣ, ₹1.70 ಕೋಟಿ ಮೌಲ್ಯದ ವಾಹನಗಳು ಹಾಗೂ ₹6.18 ಕೋಟಿ ಇತರೆ ಸ್ವತ್ತುಗಳನ್ನು ಪತ್ತೆ ಮಾಡಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ವಿಭಾಗ ತಿಳಿಸಿದೆ.

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಹಾಗೂ ಸಹಾಯಕ ಸಂಶೋಧನಾ ನಿರ್ದೇಶಕ ಎಸ್.ಪ್ರದೀಪ್ ಬಳಿ ಅತ್ಯಧಿಕ ₹6.34 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಲಾಗಿದೆ. ಅವರು 5 ನಿವೇಶನಗಳು, ಒಂದು ಮನೆ, 16.7 ಎಕರೆ ಕೃಷಿ ಜಮೀನು ಹೊಂದಿರುವುದು ಪತ್ತೆಯಾಗಿದೆ.

▶4B



ಕೆ.ಜಿ.ಅಮರನಾಥ್ ಅವರ ಮನೆಯಲ್ಲಿ ಪತ್ತೆಯಾದ ನಗದು, ಚಿನ್ನಾಭರಣ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹಲವು ಲೋಪ ಗುರುತಿಸಿದ ಡಿಜಿಸಿಎ

ನವದೆಹಲಿ (ಪಿಟಿಐ): ವಿಮಾನಯಾನ ಕಂಪನಿಗಳು, ವಿಮಾನ ನಿಲ್ದಾಣಗಳು ಹಾಗೂ ವಿಮಾನ ನಿರ್ವಹಣೆ ಕೆಲಸಗಳಲ್ಲಿ ನಿಯಮ ಉಲ್ಲಂಘನೆಯ ಹಲವು ನಿದರ್ಶನಗಳನ್ನು ನಾಗರಿಕ ವಿಮಾನ ಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಪತ್ತೆ ಮಾಡಿದೆ. ದೇಶದ ಪ್ರಮುಖ ವಿಮಾನ ನಿಲ್ದಾಣಗಳ ತಪಾಸಣೆ ವೇಳೆ, ಲೋಪಗಳು ಮರುಕಳಿಸಿರುವುದನ್ನು ಕೂಡ ಡಿಜಿಸಿಎ ಪತ್ತೆ ಮಾಡಿದೆ.



ಇನ್ನಷ್ಟು ವಿವರ ▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ಜ್ಞಾನಭಾರತಿ: 419 ಮರ ಕಡಿಯಲು ಸಜ್ಜು

ಪಾರಂಪರಿಕ ತಾಣವನ್ನಾಗಿಸುವ ಪ್ರಯತ್ನದ ಮಧ್ಯೆ ಹಸಿರು ನಾಶಕ್ಕೆ ಸಿದ್ಧತೆ

• ಆರ್. ಮಂಜುನಾಥ್

ಬೆಂಗಳೂರು: ಜ್ಞಾನಭಾರತಿ ಆವರಣದಲ್ಲಿರುವ ಜೈವಿಕ ವನವನ್ನು ಪಾರಂಪರಿಕ ತಾಣವನ್ನಾಗಿ ಮಾಡಲು ಅರಣ್ಯ ಸಚಿವರು ಮುಂದಾಗಿರುವ ಸಂದರ್ಭದಲ್ಲೇ, ಈ ಪ್ರದೇಶದಲ್ಲಿ 419 ಮರಗಳನ್ನು ಕಡಿಯಲು ಬಿಬಿಎಂಪಿ ಮುಂದಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯಲ್ಲಿ ಪಿ.ಎಂ–ಉಷಾ ಯೋಜನೆಯಡಿ ಶೈಕ್ಷಣಿಕ ಬ್ಲಾಕ್ ಮತ್ತು ಸಂಶೋಧನಾ ಬ್ಲಾಕ್ ನಿರ್ಮಿಸಲು ₹100 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಿದ್ದು ಇದಕ್ಕಾಗಿ, ಸರ್ವೆ ನಂ. 6ರಲ್ಲಿರುವ 419 ಮರಗಳನ್ನು ತೆರವುಗೊಳಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಮನವಿ ಸ್ವೀಕರಿಸಿರುವ ಬಿಬಿಎಂಪಿ, ಜೂನ್ 20ರಂದು ಪ್ರಕಟಣೆ ಹೊರಡಿಸಿದ್ದು, ಮರಗಳನ್ನು ಕಡಿಯಲು ಅನುಮತಿ ನೀಡುವ ಮುನ್ನ ಆಕ್ಷೇಪಣೆಗೆ 10 ದಿನಗಳ ಅವಕಾಶ ನೀಡಿದೆ.

‘ಜ್ಞಾನಭಾರತಿ ಆವರಣದಲ್ಲಿ ಯಾವುದೇ ರೀತಿಯ ಕಟ್ಟಡ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬಾರದು. ಜೈವಿಕ ವನವನ್ನು ಉಳಿಸಿ, ಉಳಿದಿರುವ ಎಲ್ಲ ಪ್ರದೇಶವನ್ನು ‘ಪಾರಂಪರಿಕ ತಾಣ’ವನ್ನಾಗಿಸಬೇಕು’ ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಸದಸ್ಯರು ರಾಜ್ಯಪಾಲರಿಗೂ ಮನವಿ ಮಾಡಿದ್ದಾರೆ. ಅಲ್ಲದೆ, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಪಾರಂಪರಿಕ ತಾಣವನ್ನಾಗಿ ಘೋಷಿಸುವ ಬಗ್ಗೆ ಕಡತ ಮಂಡಿಸಲು ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಪಾರಂಪರಿಕ ತಾಣವಾಗುವ ಹಂತದಲ್ಲಿರುವ ಜ್ಞಾನಭಾರತಿಯಲ್ಲಿ ಈಗ ನೂರಾರು ಮರಗಳನ್ನು ಕಡಿಯಲು ಹೊರಟಿರುವುದು ಆಕ್ಷೇಪಕ್ಕೆ ಕಾರಣವಾಗಿದೆ. ನೂರಾರು ವರ್ಷಗಳಿಂದ ಬೆಳೆದಿರುವ ಮರಗಳನ್ನು ತೆರವುಗೊಳಿಸುವುದು ಸರಿಯಲ್ಲ. ವೃಷಭಾವತಿ ನದಿಯ ಕಾಲುವೆಯೂ ಇಲ್ಲಿದೆ. ಇಂತಹ ಪರಿಸರ ನಾಶಕ್ಕೆ ಅವಕಾಶ ನೀಡಬಾರದು. ಈಗಾಗಲೇ ಕೆಲವು ಅಪರೂಪದ ಪುಷ್ಪಗಳ ಗಿಡಗಳನ್ನು ತೆರವುಮಾಡಿದ್ದಾರೆ’ ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಅಧ್ಯಕ್ಷ ಟಿ.ಜೆ. ರೇಣುಕಾಪ್ರಸಾದ್ ಅಸಮಾಧಾನ ವ್ಯಕ್ತಪಡಿಸಿದರು.

ಮರಗಳನ್ನು ತೆರವುಗೊಳಿಸುವ ಸಂಬಂಧ ಹಲವು ಆಕ್ಷೇಪಣೆಗಳು ಬಂದಿದ್ದು, ವೈಜ್ಞಾನಿಕ ವರದಿಯೊಂದಿಗೆ ಪ್ರತಿಕ್ರಿಯಿಸಲಿದ್ದೇವೆ

ಎಸ್.ಎಂ. ಜಯಕರ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ



ಜ್ಞಾನಭಾರತಿಯಲ್ಲಿ 419 ಮರಗಳನ್ನು ತೆರವುಗೊಳಿಸಲು ಉದ್ದೇಶಿಸಿರುವ ಪ್ರದೇಶ

‘ಬಫರ್ ಝೋನ್‌ನಲ್ಲಿ ಥೀಮ್ ಪಾರ್ಕ್’

‘ಜ್ಞಾನಭಾರತಿ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ‘ಅಂಬೇಡ್ಕರ್ ಥೀಮ್ ಪಾರ್ಕ್’ ನಿರ್ಮಿಸಲು ಗುರುತಿಸಿರುವ ಜಾಗ ವೃಷಭಾವತಿ ನದಿಯ ಬಫರ್ ಝೋನ್‌ನಲ್ಲಿದ್ದು, ಜೈವಿಕ ವನ–1ರ ಭಾಗವಾಗಿದೆ’ ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಸದಸ್ಯರು ಹೇಳಿದರು.

‘ಥೀಮ್ ಪಾರ್ಕ್‌ಗೆ ಗುರುತಿಸಿರುವ 25 ಎಕರೆ ಪ್ರದೇಶದಲ್ಲಿ ವೃಷಭಾವತಿ ನದಿಯ ಹರಿವಿದ್ದು, ಒಂದು ದೊಡ್ಡ ಚೆಕ್ ಡ್ಯಾಂ ಕಟ್ಟಲಾಗಿದೆ. ಚಿಟ್ಟೆಗಳು ಇರುವ ಪ್ರದೇಶವೂ ಆಗಿದೆ. ಈಗಾಗಲೇ ಅಂಬೇಡ್ಕರ್ ಅಧ್ಯಯನ ಕೇಂದ್ರ ಒಂದು ಸುಂದರ ತೋಟದಲ್ಲಿ ಅರಳಿ ನಿಂತಿದೆ. ಅಲ್ಲಿಯೇ ಗ್ರಂಥಾಲಯ, ಆಡಿಟೋರಿಯಂ ಇದೆ. ಹೀಗಾಗಿ, ಮತ್ತೆ ಥೀಂ ಪಾರ್ಕ್‌ಗಾಗಿ ಸಾವಿರಾರು ಮರಗಳನ್ನು ಕಡಿಯುವುದು ಬೇಡ. ನದಿಯ ಬಫರ್ ಝೋನ್ ಉಳಿಯಬೇಕು’ ಎಂದು ಸಂಘದ ಅಧ್ಯಕ್ಷ ಪ್ರೊ. ಟಿ.ಜೆ.ರೇಣುಕಾ ಪ್ರಸಾದ್ ಆಗ್ರಹಿಸಿದರು.

ಈ ಮರಗಳಿಗೆ ಕತ್ತರಿ

ಅಶೋಕ ಮರ, ಬಾಗೆಮರ, ತಾರೆಮರ, ಮತ್ತಿ, ತುಪರೆಮರ, ಹೊನ್ನೆ, ಕಕ್ಕೆ, ಬನ್ನಿ, ಹುಣಸೆ, ಕಮರ, ಬಸವನಪಾದ, ಬೇಲದಮರ, ಬೀಟೆಮರ

‘ಮರಗಳನ್ನು ಕಡಿದೇ ಅಭಿವೃದ್ಧಿ ಮಾಡುತ್ತೇವೆ ಎಂಬ ಅಧಿಕಾರಿಗಳ ಮನೋಭಾವ ಸರಿಯಲ್ಲ. ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಮರಗಳನ್ನು ಕಡಿಯುವುದರಿಂದ ಪರಿಸರ ನಾಶ ಮಾಡಿದಂತಾಗುತ್ತದೆ’ ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಹೇಳಿದರು.

‘419 ಮರಗಳನ್ನು ಕಡಿಯಲು ಉದ್ದೇಶಿಸಿರುವ ಸರ್ವೆ ನಂ.6ರ ಪ್ರದೇಶದಲ್ಲಿ ಜೈವಿಕ ವನ ನಿರ್ಮಿಸಲಾಗಿದ್ದು, ‘ಸಹ್ಯಾದ್ರಿ ವನ’ ಎಂದು ಹೆಸರಿಡಲಾಗಿದೆ. ಇಲ್ಲಿ ಪಾರಂಪರಿಕ ಮರಗಳಿದ್ದು, ಅವುಗಳನ್ನು ಉಳಿಸಬೇಕು’ ಎಂದು ಸ್ವಯಂ ಜಾಗೃತಿಯ ಪರಿಸರ ಕಾರ್ಯಕರ್ತರು ಆಗ್ರಹಿಸಿದರು.

ಆರು ಲಕ್ಷ ಸಸಿ ನೆಟ್ಟಿದ್ದೇವೆ: ವಿಶ್ವವಿದ್ಯಾಲಯ ಜ್ಞಾನಭಾರತಿಯ ಆವರಣದಲ್ಲಿ ಆರು ಲಕ್ಷ ಸಸಿಗಳನ್ನು ನೆಟ್ಟಿದ್ದು, ಜೈವಿಕ–ವನವನ್ನು ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ಮಾಹಿತಿ ನೀಡಿದರು.

29ಕ್ಕೆ ‘ಶರ್ಮಿಷ್ಠೆ’ ನಾಟಕ ಪ್ರದರ್ಶನ



ಉಮಾಶ್ರೀ

ಬೆಂಗಳೂರು: ರಂಗಸಂಪದ ಕಲಾ ತಂಡವು ಇದೇ 29ರಂದು ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ ಜೆ.ಪಿ. ನಗರದ ರಂಗಶಂಕರದಲ್ಲಿ ‘ಶರ್ಮಿಷ್ಠೆ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ನಟಿ ಉಮಾಶ್ರೀ ಅವರು ಈ ನಾಟಕದಲ್ಲಿ ಅಭಿನಯಿಸಲಿದ್ದಾರೆ. ಬೇಲೂರು ರಘುನಂದನ್ ಅವರು ಈ ನಾಟಕ ರಚಿಸಿದ್ದು, ಚಿದಂಬರರಾವ್ ಜಂಬೆ ಅವರು ನಿರ್ದೇಶಿಸಿದ್ದಾರೆ. ಈ ನಾಟಕ ₹200 ಪ್ರವೇಶ ಶುಲ್ಕ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಕೆಎಸ್‌ಆರ್‌ಟಿಸಿ ಬಸ್ ಚಕ್ರ ಹರಿದು ಯುವಕ ಸಾವು

ಬೆಂಗಳೂರು: ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಓಕಳಿಪುರದಲ್ಲಿ ಸ್ಕೂಟರ್ ನಿಯಂತ್ರಣ ತಪ್ಪಿ ರಸ್ತೆಯ ಮೇಲೆ ಬಿದ್ದಿದ್ದ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಯುವಕನ ಮೇಲೆ ಕೆಎಸ್‌ಆರ್‌ಟಿಸಿ ಬಸ್‌ನ ಚಕ್ರಗಳು ಹರಿದು ಅವರು ಮೃತಪಟ್ಟಿದ್ದಾರೆ.

ಮಾಗಡಿ ರಸ್ತೆ ನಿವಾಸಿ ಕೃಷ್ಣನ್ (23) ಮೃತಪಟ್ಟ ಫುಡ್ ಡೆಲಿವರಿ ಯುವಕ. ಕೃಷ್ಣನ್ ಅವರು ತಮಿಳುನಾಡಿನವರು. ನಗರದಲ್ಲಿ ಕೆಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು.

ಸೋಮವಾರ ರಾತ್ರಿ 8.15ರ ಸುಮಾರಿಗೆ ಕೃಷ್ಣನ್ ಅವರು ಪ್ಲಾಟ್‌ಫಾರ್ಮ್ ರಸ್ತೆಯ ಮೂಲಕ ಸ್ಕೂಟರ್‌ನಲ್ಲಿ ಓಕಳಿಪುರಂ ಸೇತುವೆ ಕಡೆಯಿಂದ ಕೆಎಂಎಫ್ ಜಂಕ್ಷನ್ ಕಡೆಗೆ ಫುಡ್ ಡೆಲಿವರಿ ಮಾಡಲು ತೆರಳುತ್ತಿದ್ದರು. ಚರ್ಚ್ ಹತ್ತಿರ ನಿಯಂತ್ರಣ ತಪ್ಪಿ ಸ್ಕೂಟರ್ ಸಮೇತ ರಸ್ತೆಗೆ ಉರುಳಿ ಬಿದ್ದಿದ್ದರು. ಅದೇ ಮಾರ್ಗವಾಗಿ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಚಕ್ರಗಳು ಕೃಷ್ಣನ್ ಅವರ ಮೇಲೆಯೇ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯುವ ದಾರಿಯಲ್ಲಿ ಮೃತಪಟ್ಟರು ಎಂದು ಸಂಚಾರ ಪೊಲೀಸರು ತಿಳಿಸಿದರು.

ಬಸ್ ನಿಲ್ಲಿಸದೇ ಚಾಲಕ ತೆರಳಿದ್ದಾನೆ. ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಬಸ್‌ನ ನೋಂದಣಿ ಸಂಖ್ಯೆ ಪತ್ತೆಯಾಗಿದೆ. ಅಪಘಾತ ನಡೆಸಿದ ಚಾಲಕನ ಪತ್ತೆ ಮಾಡಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಜಾರಿ ನಿರ್ದೇಶನಾಲಯದಿಂದ ಐಶ್ವರ್ಯಾ ವಿರುದ್ಧ ದೂರು ದಾಖಲು

ಬೆಂಗಳೂರು: ಜಾರಿ ನಿರ್ದೇಶನಾಲಯ ಬೆಂಗಳೂರು ವಲಯವು ಐಶ್ವರ್ಯಾಗೌಡ ಮತ್ತು ಇತರೆ 17 ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯ (ಪಿಎಂಎಲ್‌ಎ)ದಲ್ಲಿ ದೂರು ದಾಖಲಿಸಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯಾ ಗೌಡ ಅವರ ಸುಮಾರು ₹3.98 ಕೋಟಿ ಮೌಲ್ಯದ ಆಸ್ತಿಯನ್ನು ಎರಡು ದಿನದ ಹಿಂದೆಯಷ್ಟೇ ಇ.ಡಿ. ಮುಟ್ಟುಗೋಲು ಹಾಕಿಕೊಂಡಿತ್ತು.

ಐಶ್ವರ್ಯಾ ಮತ್ತು ಅವರ ಪತಿ ಕೆ.ಎನ್.ಹರೀಶ್ ವಿರುದ್ಧ ಬೆಂಗಳೂರು ನಗರ ಹಾಗೂ ಮಂಡ್ಯದಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ಇ.ಡಿ. ತನಿಖೆ ಕೈಗೊಂಡಿತ್ತು.

ಆಹಾರ ಅರಸುತ್ತಾ...

ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಮೈಸೂರು ರಸ್ತೆಯ ಓಲ್ಡ್ ಪೆನ್ಷನ್ ಮೊಹಲ್ಲಾದ ರಸ್ತೆ ಬದಿ ಬಿಸಾಡಲಾದ ಪ್ಲಾಸ್ಟಿಕ್ ತ್ಯಾಜ್ಯಗಳ ನಡುವೆ ಆಹಾರಕ್ಕಾಗಿ ಹಸುಗಳ ಗುಂಪೊಂದು ಪರಿತಪಿಸುತ್ತಿದ್ದ ದೃಶ್ಯ ಕ್ಯಾಮೆರಾ ಕಣ್ಣಿಗೆ ಮಂಗಳವಾರ ಕಂಡುಬಂದಿತು.

ಕೆ.ಪಿ. ಅಗ್ರಹಾರ ಠಾಣೆಯ ಪೊಲೀಸರ ಕಾರ್ಯಾಚರಣೆ– ವ್ಯಕ್ತಿಯ ರಕ್ಷಣೆ; ಕಾರು ವಶ

ಹಣ ವಸೂಲಿಗಾಗಿ ಅಪಹರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕಾಸು ವಿಚಾರಕ್ಕೆ ಉಂಟಾದ ವೈಷಮ್ಯದಿಂದ ಪರಿಚಿತ ವ್ಯಕ್ತಿಯನ್ನು ಅಪಹರಿಸಿದ್ದ ಇಬ್ಬರನ್ನು ಕೆ.ಪಿ.ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಶಿರಾದ ಸೈಯದ್ ಮುಜಾಹಿದ್ (39) ಹಾಗೂ ಸೈಯದ್ ಜಾಕಿರ್ (29) ಬಂಧಿತ ಆರೋಪಿಗಳು.

‘ಸೈಯದ್ ಮುಜಾಹಿದ್ ಹಾಗೂ ಇಮ್ರಾನ್ ಖಾನ್ ಇಬ್ಬರೂ ಹಳೆಯ ಕಾರುಗಳನ್ನು ವ್ಯಾಪಾರ ಮಾಡುತ್ತಿದ್ದರು. ಇಬ್ಬರ ಮಧ್ಯೆ ₹2.50 ಲಕ್ಷ ಹಣದ ವ್ಯವಹಾರ ನಡೆದಿತ್ತು. ಹಣ ವಾಪಸ್ ಕೇಳಿದಾಗ ಕಾರಣ ಹೇಳಿ ಇಮ್ರಾನ್ ಖಾನ್ ಸತಾಯಿಸುತ್ತಿದ್ದ. ಇಮ್ರಾನ್ ಖಾನ್‌ನನ್ನು ಅಪಹರಿಸಿ ಹಣ ವಸೂಲಿ ಮಾಡಲು ಸೈಯದ್ ಮುಜಾಹಿದ್ ಸಂಚು ರೂಪಿಸಿದ್ದ. ಈ ವಿಚಾರವನ್ನು ತನ್ನ ಸ್ನೇಹಿತ ಸೈಯದ್ ಜಾಕಿರ್‌ಗೂ ತಿಳಿಸಿದ್ದ. ಆರೋಪಿಗಳಿಬ್ಬರೂ ಸೇರಿಕೊಂಡು ಭಾನುವಾರ ಮಧ್ಯಾಹ್ನ ಸ್ಕಾರ್ಪಿಯೊ ಕಾರಿನಲ್ಲಿ ಇಮ್ರಾನ್ ಖಾನ್ ಅಪಹರಣ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇಮ್ರಾನ್ ಖಾನ್‌ನನ್ನು ಅಪಹರಿಸಿ ಆರೋಪಿಗಳು ತುಮಕೂರಿಗೆ ಕರೆದೊಯ್ದು ಕೊಠಡಿಯಲ್ಲಿ ಇರಿಸಿದ್ದರು. ಇಮ್ರಾನ್ ಖಾನ್ ಅವರ ಪತ್ನಿ ಕೆಪಿ ಅಗ್ರಹಾರ ಠಾಣೆಗೆ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು. ಇಮ್ರಾನ್‌ನನ್ನು ರಕ್ಷಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಯಿತು. ಕಾರು ವಶಕ್ಕೆ ಪಡೆದುಕೊಳ್ಳಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ತಿಳಿಸಿದರು.



ಸೈಯದ್ ಜಾಕಿರ್



ಸೈಯದ್ ಮುಜಾಹಿದ್

ಯುವತಿಗೆ ಕಿರುಕುಳ: ಟೆಕಿ ಸೆರೆ

ಬೆಂಗಳೂರು: ಸ್ನೇಹಿತೆಯನ್ನು ಪಬ್‌ಗೆ ಕರೆದೊಯ್ದು ಆಕೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದ ಟೆಕಿಯನ್ನು ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನುರಾಗ್(36) ಬಂಧಿತ ಆರೋಪಿ.

ಜಿಗಣಿಯ ಬಾಡಿಗೆ ಮನೆಯಲ್ಲಿ ಆರೋಪಿ ನೆಲಸಿದ್ದ. ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

‘ಆರೋಪಿ ಅನುರಾಗ್ ಹಾಗೂ ಆತನ ಸ್ನೇಹಿತೆ ಬೇರೆ ಬೇರೆ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರಿಗೂ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಇತ್ತು. ಕಬ್ಬನ್ ಪಾರ್ಕ್ ಸಮೀಪದಲ್ಲಿರುವ ಪಬ್‌ವೊಂದಕ್ಕೆ ಸ್ನೇಹಿತೆಯನ್ನು ಆರೋಪಿ ಕರೆದೊಯ್ದಿದ್ದ. ಈ ವೇಳೆ ಆಕೆಯೊಂದಿಗೆ ಅನುರಾಗ್ ಅನುಚಿತವಾಗಿ ವರ್ತಿಸಿದ್ದ. ಯುವತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಪುತ್ರಿಯ ಮದುವೆಗೆ ಮಾಡಿದ್ದ ಸಾಲ ತೀರಿಸಲು ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ಪುತ್ರಿಯ ಮದುವೆಗೆಂದು ಮಾಡಿದ್ದ ಸಾಲ ತೀರಿಸಲು ಕೆಲಸಕ್ಕಿದ್ದ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಮಹಿಳೆಯನ್ನು ಜೆ.ಪಿ. ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಶಾಂತಿ

ಶಾಂತಿ ಅಲಿಯಾಸ್ ಶಾಂತಮ್ಮ ಬಂಧಿತ ಆರೋಪಿ.

ಜೆ.ಪಿ. ನಗರದ ಎರಡನೇ ಹಂತದ ನಿವಾಸಿ, ಶಿಕ್ಷಕಿ ಆಯಿಷಾ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ₹14.30 ಲಕ್ಷ ಮೌಲ್ಯದ 143 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

‘ಆಯಿಷಾ ಅವರು ಜನವರಿಯಲ್ಲಿ ಸಂಬಂಧಿಕರ ಮದುವೆಗೆಂದು ಚಿನ್ನಾಭರಣ ಧರಿಸಿ ಹೋಗಿದ್ದರು. ವಾಪಸ್ ಬಂದು, ನಾಲ್ಕು ಬಂಗಾರದ ಬಳೆಗಳು ಹಾಗೂ ಒಂದು ಬಂಗಾರದ ಸರವನ್ನು ಬೀರುವಿನಲ್ಲಿ ಇಟ್ಟಿದ್ದರು. ಮೇ 17ರಂದು ಮತ್ತೊಂದು ಮದುವೆ ಸಮಾರಂಭ ಇತ್ತು. ಆ ಮದುವೆ ಸಮಾರಂಭಕ್ಕಾಗಿ ಚಿನ್ನಾಭರಣ ಧರಿಸಿಕೊಳ್ಳಲು ಬೀರು ತೆರೆದಿದ್ದರು. ಆಗ ಚಿನ್ನಾಭರಣ ಕಳ್ಳತನ ಆಗಿರುವುದು ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದ ಶಾಂತಿ ಮೇಲೆ ಅನುಮಾನ ವ್ಯಕ್ತಪಡಿಸಿ ಆಯಿಷಾ ದೂರು ನೀಡಿದ್ದರು. ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದು ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಪುತ್ರಿಯ ಮದುವೆಗೆಂದು ಆರೋಪಿ ₹5 ಲಕ್ಷ ಸಾಲ ಮಾಡಿದ್ದಳು. ಅದನ್ನು ತೀರಿಸಲು ಕೆಲಸಕ್ಕಿದ್ದ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದಳು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಕಳ್ಳತನ ಮಾಡಿದ್ದ ಚಿನ್ನವನ್ನು ಕೋಣನಕುಂಟೆ ಹಾಗೂ ಮೈಕೊ ಲೇಔಟ್‌ನ ಚಿನ್ನಾಭರಣ ಅಂಗಡಿಗೆ ಆರೋಪಿ ಮಾರಾಟ ಮಾಡಿದ್ದಳು. ಆ ಚಿನ್ನವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವಿಲಾಸಿ ಜೀವನಕ್ಕಾಗಿ ಆಟೊ, ಚಿನ್ನಾಭರಣ ಕದಿಯುತ್ತಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಿಗೆ ನುಗ್ಗಿ ಚಿನ್ನಾಭರಣ ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಆಟೊಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪರಪ್ಪನ ಅಗ್ರಹಾರದ ನಿವಾಸಿ ನಾಗೇಶ್ ಅಲಿಯಾಸ್ ವಿನಿತ್ (22) ಬಂಧಿತ ಆರೋಪಿ.

ಆರೋಪಿಯಿಂದ ₹33.35 ಲಕ್ಷ ಮೌಲ್ಯದ 208 ಗ್ರಾಂ ಚಿನ್ನಾಭರಣ, 358 ಗ್ರಾಂ ಬೆಳ್ಳಿಯ ಸಾಮಗ್ರಿ, ಎರಡು ಆಟೊಗಳು, ಎರಡು ಕ್ಯಾಮೆರಾ ಹಾಗೂ 6 ಲೆನ್ಸ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಹೆಗ್ಗನಹಳ್ಳಿ ಕ್ರಾಸ್‌ನಲ್ಲಿರುವ ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ಆಟೊವೊಂದನ್ನು ಆರೋಪಿ ಇತ್ತೀಚೆಗೆ ಕಳ್ಳತನ ಮಾಡಿದ್ದ. ಈ ಸಂಬಂಧ ಆಟೊ ಮಾಲೀಕರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿ ಸುಳಿವು ಸಿಕ್ಕಿತ್ತು. ನಂತರ, ಆತನ ಬಗ್ಗೆ ಮಾಹಿತಿ ಸಂಗ್ರಹಿಸಿ ಲಗ್ಗೆರೆ ಮುಖ್ಯರಸ್ತೆಯಲ್ಲಿ ಇರುವ ಆಲದಮರ ವೃತ್ತದ ಬಳಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕಳವು ಮಾಡಿದ ಆಟೊಗಳಲ್ಲಿ ಸುತ್ತಾಟ ನಡೆಸುತ್ತಿದ್ದ ಆರೋಪಿ, ಮನೆಗಳಿಗೆ ನುಗ್ಗಿ ಚಿನ್ನಾಭರಣವನ್ನು ಕಳ್ಳತನ ಮಾಡುತ್ತಿದ್ದ. ಕದ್ದ ಚಿನ್ನಾಭರಣಗಳನ್ನು ಮಾರಾಟ ಮಾಡಿ ವಿಲಾಸಿ ಜೀವನ ನಡೆಸುತ್ತಿದ್ದ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಜಾಪುರ, ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ಮನೆಗಳಲ್ಲಿ ಆರೋಪಿ ಕಳ್ಳತನ ನಡೆಸಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಪಿಎಸ್‌ಐ ನೇತೃತ್ವದಲ್ಲಿ ಕಾಲ್ನಡಿಗೆ ಗಸ್ತು

ನಗರದಲ್ಲಿ ವಿಶೇಷ ಗಸ್ತು ವ್ಯವಸ್ಥೆ ಜಾರಿಗೆ ಸೂಚನೆ: ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಪರಾಧ ಪ್ರಕರಣಗಳನ್ನು ತಗ್ಗಿಸುವ ಉದ್ದೇಶದಿಂದ ವಿಶೇಷ ಗಸ್ತು ವ್ಯವಸ್ಥೆ ಜಾರಿಗೆ ತರಲಾಗಿದೆ. ಪಿಎಸ್‌ಐ ಶ್ರೇಣಿಯ ಅಧಿಕಾರಿಗಳು ಕಾಲ್ನಡಿಗೆ ಮೂಲಕ ಗಸ್ತು ನಡೆಸಲಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

‘ನಗರದಾದ್ಯಂತ ಬೆಳಿಗ್ಗೆ ಹಾಗೂ ಸಂಜೆ ಇ-ಬೀಟ್ ವ್ಯವಸ್ಥೆಗೆ ಸಿಬ್ಬಂದಿಯನ್ನು ನೇಮಿಸಲಾಗಿದೆ. ಹೊಯ್ಸಳ ಹಾಗೂ ಚೀತಾ ವಾಹನಗಳಲ್ಲಿ ಸಿಬ್ಬಂದಿ ತೆರಳಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾಗರಿಕರ ನಂಬಿಕೆ ಬಲಪಡಿಸಲು ಹಾಗೂ ಬಡಾವಣೆಗಳಲ್ಲಿ ಪೊಲೀಸ್ ಉಪಸ್ಥಿತಿ ಹೆಚ್ಚಿಸಲು ಬೀಟ್ ಸಿಬ್ಬಂದಿಯ ಜತೆಗೆ ಹೊಯ್ಸಳ ಸಿಬ್ಬಂದಿ, ಚೀತಾ ವಾಹನದ ಸಿಬ್ಬಂದಿ ಹಾಗೂ ಪಿಎಸ್‌ಐ ಶ್ರೇಣಿಯ ಅಧಿಕಾರಿಗಳು ಕಾಲ್ನಡಿಗೆ ಮೂಲಕ ಗಸ್ತು ಕರ್ತವ್ಯ ನಿರ್ವಹಣೆ ಮಾಡಲಿದ್ದಾರೆ’ ಎಂದು ಪತ್ರಿಕಾ ಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

‘ಪ್ರತಿದಿನ ಸಂಜೆ, ವಾರಾಂತ್ಯದ ದಿನಗಳು, ಸೂಕ್ಷ್ಮ ಪ್ರದೇಶಗಳು, ಪ್ರಾರ್ಥನಾ ಮಂದಿರಗಳು, ಮಾಲ್‌ಗಳು ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ಹೆಚ್ಚಿನ ದಟ್ಟಣೆ ಕಂಡುಬರುತ್ತಿದೆ. ಈ ಸ್ಥಳಗಳಲ್ಲಿ ಕಾಲ್ನಡಿಗೆ ಮೂಲಕ ಸಿಬ್ಬಂದಿ ಗಸ್ತು ಕರ್ತವ್ಯ ನಿರ್ವಹಣೆ ಮಾಡಲಿದ್ದಾರೆ. ಯಾವುದೇ, ಘರ್ಷಣೆ ಹಾಗೂ ಕಾನೂನುಬಾಹಿರ ಚಟುವಟಿಕೆಗಳು ನಡೆದರೆ ತಕ್ಷಣವೇ ಸ್ಪಂದಿಸುವಂತೆ ಅಧಿಕಾರಿ ಹಾಗೂ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ತಮ್ಮ ವ್ಯಾಪ್ತಿಯ ಕುಂದು-ಕೊರತೆಗಳನ್ನು ತಿಳಿಸಬಹುದು’ ಎಂದು ತಿಳಿಸಿದರು.

‘ರೌಡಿ ಶೀಟರ್‌ಗಳು, ರೂಢಿಗತ ಆರೋಪಿಗಳು, ಯಾವ ಅವಧಿ ಹಾಗೂ ಯಾವ ಪ್ರದೇಶಗಳಲ್ಲಿ ಹೆಚ್ಚಾಗಿ ಅಪರಾಧ ಕೃತ್ಯಗಳು ನಡೆಯುತ್ತಿವೆ ಎನ್ನುವ ಮಾಹಿತಿಯು ಠಾಣಾಧಿಕಾರಿಗಳು ಹಾಗೂ ಎಸಿಪಿ ಮಟ್ಟದ ಅಧಿಕಾರಿಗಳಿಗೆ ಇರಬೇಕು. ಅಂತಹ ಪ್ರದೇಶದಲ್ಲಿ ಗಸ್ತು ಹೆಚ್ಚಿಸುವಂತೆ ಸೂಚನೆ ನೀಡಲಾಗಿದೆ’ ಎಂದು ಸೀಮಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಜುಲೈ 1–2ಕ್ಕೆ ‘ಮೃಚ್ಛಕಟಿಕಮ್’ ನಾಟಕ ಪ್ರದರ್ಶನ

ಬೆಂಗಳೂರು: ಭೂಮಿಜಾ ಟ್ರಸ್ಟ್ ವತಿಯಿಂದ ಜುಲೈ 1 ಮತ್ತು 2 ರಂದು ಸಂಜೆ 7.30ಕ್ಕೆ ಜೆ.ಪಿ.ನಗರದ ರಂಗಶಂಕರದಲ್ಲಿ ಶೂದ್ರಕನ ‘ಮೃಚ್ಛಕಟಿಕಮ್’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಈ ಸಂಸ್ಕೃತ ನಾಟಕವನ್ನು ಜಿ. ವೇಣು ನಿರ್ದೇಶಿಸಿದ್ದಾರೆ. ಈ ಪ್ರದರ್ಶನವನ್ನು ಪ್ರಾಚೀನ ಸಾಂಪ್ರದಾಯಿಕ ರಂಗಕಲೆ ‘ಕುಟಿಯಾಟ್ಟಂ’ ಪ್ರಕಾರದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಇಂಗ್ಲಿಷ್ ಉಪ ಶೀರ್ಷಿಕೆ ಇರಲಿದ್ದು, ನಟನಾ ಕೈರಳಿ ಸಂಸ್ಥೆ ನಾಟಕ ನಿರ್ಮಿಸಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

ಕ್ಯಾನ್ಸರ್ ತಡೆ: ರಾಷ್ಟ್ರವ್ಯಾಪಿ ಅರಿವಿನ ಅಭಿಯಾನ

‘ಎಚ್‌ಪಿವಿ ಲಸಿಕೆ ಪಡೆಯಿರಿ; ಕ್ಯಾನ್ಸರ್‌ನಿಂದ ದೂರವಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌ಪಿವಿ ಲಸಿಕೆ ಪಡೆಯುವ ಮೂಲಕ ‘ಎಚ್‌ಪಿವಿ’ (ಹ್ಯೂಮನ್ ಪ್ಯಾಪಿಲ್ಲೋಮಾ ವೈರಸ್) ನಿಂದ ಹರಡುವ ಗರ್ಭ ಕಂಠದ ಕ್ಯಾನ್ಸರ್ ಮತ್ತು ಇತರ ಕೆಲವು ಕ್ಯಾನ್ಸರ್‌ಗಳಿಂದ ರಕ್ಷಿಸಿಕೊಳ್ಳಬಹುದು. ಈ ಕುರಿತು ನಿರಂತರವಾಗಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ’ ಎಂದು ವೈದ್ಯಕೀಯ ಕ್ಷೇತ್ರದ ತಜ್ಞರು ಅಭಿಪ್ರಾಯಪಟ್ಟರು.

ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ‘ಕಾನ್‌ಕ್ವೇರ್; ಎಚ್‌ಪಿವಿ ಆ್ಯಂಡ್ ಕ್ಯಾನ್ಸರ್ ಕಾನ್‌ಕ್ಲೇವ್ 2025’ ಸಮಾವೇಶದಲ್ಲಿ ವಿವಿಧ ಸಂಸ್ಥೆಗಳ ತಜ್ಞರು, ಲಸಿಕೆ ಪಡೆಯುವುದರಿಂದ ಆಗುವ ಉಪಯೋಗಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

‘ಎಚ್‌ಪಿವಿಯಿಂದ ಗರ್ಭಕೊರಳಿನ ಕ್ಯಾನ್ಸರ್ ಅಲ್ಲದೇ, ಯೋನಿ, ಗುದ, ಶಿಶ್ನ ಮತ್ತು ಗಂಟಲ ನಾಳದ ಕ್ಯಾನ್ಸರ್‌ಗೂ ಕಾರಣವಾಗುತ್ತದೆ. ಇದು ಲಿಂಗ ಭೇದವಿಲ್ಲದೇ ಬಾಧಿಸುತ್ತದೆ. ಪ್ರಾರಂಭಿಕ ಅರಿವು, ನಿರಂತರ ತಪಾಸಣೆ ಮತ್ತು ಲಸಿಕೆ ತೆಗದುಕೊಳ್ಳುವಂತಹ ಮುಂಜಾಗ್ರತಾ ಕ್ರಮಗಳಿಂದ, ಪ್ರತಿ ವ್ಯಕ್ತಿಯನ್ನು ಕ್ಯಾನ್ಸರ್‌ನಿಂದ ರಕ್ಷಿಸಬಹುದು. ಈ ಎಲ್ಲ ವಿಷಯಗಳ ಕುರಿತು ಜಾಗೃತಿ ಮೂಡಿಸುವುದು ಅಗತ್ಯ’ ಎಂದು ಡಾ. ಭಾಸ್ಕರ್ ಶೆಣೈ ತಿಳಿಸಿದರು.

‘9ರಿಂದ 14 ವರ್ಷದ ಬಾಲಕರು ಮತ್ತು ಬಾಲಕಿಯರು ಇಬ್ಬರೂ ಲಸಿಕೆ ತೆಗೆದುಕೊಂಡಾಗ, ರೋಗ ನಿಯಂತ್ರಣ ಪರಿಪೂರ್ಣವಾಗುತ್ತದೆ. ಈ ವಯಸ್ಸಿನಲ್ಲಿ ಲಸಿಕೆ ಪಡೆಯುವುದರಿಂದ ಪರಿಣಾಮ ಅಧಿಕ. ಲಸಿಕೆ ತೆಗೆದುಕೊಂಡರೂ ತಪಾಸಣೆ ಮಾಡಿಸುವುದನ್ನು ನಿಲ್ಲಿಸಬಾರದು. ಲಸಿಕೆ ತೆಗೆದುಕೊಳ್ಳುವಷ್ಟೇ ತಪಾಸಣೆಯೂ ಮುಖ್ಯ’ ಎಂದು ಕಿದ್ವಾಯಿ ಆಸ್ಪತ್ರೆಯ ಡಾ. ಶೋಭಾ ಅಭಿಪ್ರಾಯಪಟ್ಟರು.

‘ಲಸಿಕೆಯಿಂದ ಯಾವುದೇ ಅಡ್ಡಪರಿಣಾಮವಿಲ್ಲ. ಆದರೆ, ಗರ್ಭಿಣಿಯರಿದ್ದಾಗ ಲಸಿಕೆ ಪಡೆಯಬೇಕೇ ಬೇಡವೇ ಎಂಬುದರ ಬಗ್ಗೆ ಇನ್ನೂ ಅಧ್ಯಯನವಾಗಿಲ್ಲ’ ಎಂದು ಸಪ್ತಗಿರಿ ವೈದ್ಯಕೀಯ ವಿಜ್ಞಾನಗಳು ಮತ್ತು ಸಂಶೋಧನಾ ಕೇಂದ್ರದ ಡಾ. ರಜನಿ ಉದಯ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ದೇಶದಲ್ಲಿ ನಿತ್ಯ ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಈ ಕ್ಯಾನ್ಸರ್‌ನಿಂದ ವಾರ್ಷಿಕವಾಗಿ 77 ಸಾವಿರಕ್ಕೂ ಹೆಚ್ಚಿನ ಮಂದಿ ಮೃತಪಡುತ್ತಿದ್ದಾರೆ. ಸೀರಂ ಇನ್‌ಸ್ಟಿಟ್ಯೂಟ್ ಕೈಗೆಟಕುವ ಬೆಲೆಯಲ್ಲಿ ಎಚ್‌ಪಿವಿ ಲಸಿಕೆ ಅಭಿವೃದ್ಧಿಪಡಿಸಿದೆ. ಲಸಿಕೆ ಪಡೆಯುವ ಕುರಿತು ದೇಶದಾದ್ಯಂತ ಅಭಿಯಾನ ಕೈಗೊಳ್ಳುವ ಅಗತ್ಯವಿದೆ’ ಎಂದು ತಜ್ಞರು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- ಲಸಿಕೆ ಪಡೆದರೆ ಪರಿಣಾಮ ಅಧಿಕ
- ಲಸಿಕೆ ತೆಗೆದುಕೊಂಡ-ನಂತರ ತಪಾಸಣೆಯೂ ಮುಖ್ಯ
- ನಿರಂತರವಾಗಿ ಜಾಗೃತಿ ಮೂಡಿಸುವುದು ಅಗತ್ಯ: ತಜ್ಞರ ಅಭಿಪ್ರಾಯ



ಸಮಾವೇಶದಲ್ಲಿ ಡಾ. ಭಾಸ್ಕರ್ ಶಣೈ ಮಾತನಾಡಿದರು. ಡಾ. ಶೋಭಾ, ಡಾ. ಚಿದಾನಂದ್, ಡಾ.ರಜನಿ ಉದಯ್, ಡಾ. ಪ್ರಶಾಂತ್ ಎಂ.ವಿ ಉಪಸ್ಥಿತರಿದ್ದರು

ಸೈಬರ್ ವಂಚನೆ: ಒಡಿಶಾ ಸಿಐಡಿಯಿಂದ ಮೂವರು ಆರೋಪಿಗಳ ಬಂಧನ

ಭುವನೇಶ್ವರ (ಪಿಟಿಐ): ಒಡಿಶಾದ ಅಪರಾಧ ತನಿಖಾ ಇಲಾಖೆ (ಸಿಐಡಿ) ಅಧಿಕಾರಿಗಳು ಎರಡು ಪ್ರತ್ಯೇಕ ಸೈಬರ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಮತ್ತು ಮಹಾರಾಷ್ಟ್ರದಿಂದ ಒಟ್ಟು ಮೂವರನ್ನು ಬಂಧಿಸಿದ್ದಾರೆ.

₹6 ಕೋಟಿ ವಂಚನೆಗೆ ಸಂಬಂಧಿಸಿ ಮಹಾರಾಷ್ಟ್ರದಿಂದ ಸ್ವಪ್ನಿಲ್ ಗೋರಕ್ಷಾ ಧೋಖಲೆ, ಅಜಾಜ್ ಶಫೀಕ್ ಹಾಗೂ ₹1 ಕೋಟಿ ವಂಚನೆಗೆ ಸಂಬಂಧಿಸಿ ಬೆಂಗಳೂರಿನಿಂದ ಗಣೇಶ್ ಕೆ.ಶೆಟ್ಟಿ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳೆಗೆ ಲೈಂಗಿಕ ಕಿರುಕುಳ; ಬಂಧನ

ರಾಮನಗರ: ಕೂಲಿ ಹಣ ಕೇಳಲು ಮಗನೊಂದಿಗೆ ಫಿಲೇಚರ್ ಫ್ಯಾಕ್ಟರಿಗೆ ಬಂದಿದ್ದ ಮಹಿಳೆ ಮೇಲೆ ಹಲ್ಲೆ ನಡೆಸಿ, ರಸ್ತೆಯಲ್ಲಿ ಸೀರೆ ಹಿಡಿದು ಎಳೆದಾಡಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ, ಫಿಲೇಚರ್ ಫ್ಯಾಕ್ಟರಿ ಮಾಲೀಕ ನಾಸೀರ್ ಎಂಬಾತನನ್ನು ಐಜೂರು ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಒಂದು ತಿಂಗಳಿಂದ ಮಹಿಳೆ ಫ್ಯಾಕ್ಟರಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಇತ್ತೀಚೆಗೆ ನಾಸೀರ್ ಮಹಿಳೆಗೆ ಕೆಟ್ಟದಾಗಿ ಕೈ ಸನ್ನೆ ಮಾಡುತ್ತಿದ್ದ. ಅದಕ್ಕೆ ಪ್ರತಿರೋಧ ತೋರಿದಾಗ ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಲು ಮುಂದಾಗಿದ್ದ. ಇದರಿಂದ ಬೇಸರಗೊಂಡ ಮಹಿಳೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದರು ಎಂದು ಪೊಲೀಸರು ಹೇಳಿದರು.

ಕೂಲಿ ಹಣ ಕೇಳುವುದಕ್ಕಾಗಿ ಮಹಿಳೆ ಸೋಮವಾರ ಸಂಜೆ ಮಗನೊಂದಿಗೆ ಮತ್ತೆ ಫ್ಯಾಕ್ಟರಿಗೆ ಹೋಗಿದ್ದರು. ಈ ವೇಳೆ ಕೆಟ್ಟದಾಗಿ ನಿಂದಿಸಿದ ನಾಸೀರ್, ಕಬ್ಬಿಣದ ರಾಡಿನಿಂದ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾನೆ. ಮಹಿಳೆ ಜೋರಾಗಿ ಕೂಗಿಕೊಂಡು ಫ್ಯಾಕ್ಟರಿಯಿಂದ ಹೊರಕ್ಕೆ ಬಂದರೂ ಅಟ್ಟಿಸಿಕೊಂಡು ಬಂದು ಸೀರೆ ಎಳೆದು ದೇಹ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

‘ಮಕ್ಕಳನ್ನು ಮೂಡಲಪಾಯಕ್ಕೆ ಕರೆತನ್ನಿ’

ಕರ್ನಾಟಕ ಯಕ್ಷಗಾನ ಅಕಾಡೆಮಿ ವತಿಯಿಂದ ಅಗತ್ಯ ಪ್ರೋತ್ಸಾಹದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಡಲಪಾಯ ಯಕ್ಷಗಾನ ಪ್ರಕಾರ ಬೆಳವಣಿಗೆ ಹೊಂದಲು ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಈ ಕಲೆಯ ಬಗ್ಗೆ ಆಸಕ್ತಿ ಮೂಡಿಸಿ, ತರಬೇತಿ ಒದಗಿಸಬೇಕು’ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಅಭಿಪ್ರಾಯಪಟ್ಟರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯು ನಗರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ‘ಮೂಡಲಪಾಯ ಯಕ್ಷೋತ್ಸವ’ಕ್ಕೆ ಮಂಗಳವಾರ ಚಾಲನೆ ದೊರೆಯಿತು.

ಈ ವೇಳೆ ಮಾತನಾಡಿದ ಶಿವರಾಮ ಶೆಟ್ಟಿ, ‘ಮೂಡಲಪಾಯ ಕಲಾ ಪ್ರಕಾರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಿರಿಯ ಕಲಾವಿದರಿದ್ದಾರೆ. ಆದರೆ, ಹೊಸಬರು ಅಷ್ಟಾಗಿ ಬರುತ್ತಿಲ್ಲ. ಕರಾವಳಿ ಭಾಗದಲ್ಲಿ ಜನಪ್ರಿಯವಾಗಿರುವ ಯಕ್ಷಗಾನ ಕಲಾ ಪ್ರಕಾರಕ್ಕೆ ಮಕ್ಕಳೂ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಜನಪ್ರತಿನಿಧಿಗಳು ಕೂಡ ಪ್ರೋತ್ಸಾಹ ನೀಡುತ್ತಿದ್ದಾರೆ. ಉಡುಪಿ ಜಿಲ್ಲೆಯೊಂದರಲ್ಲಿಯೇ 90 ಶಾಲೆಗಳಲ್ಲಿ ಯಕ್ಷಗಾನ ಕಲಿಸಲಾಗುತ್ತಿದೆ. ಇದರಿಂದ ಯಕ್ಷಗಾನ ಬೆಳವಣಿಗೆ ಹೊಂದುತ್ತಿದೆ. ಮೂಡಲಪಾಯದ ಹಿರಿಯ ಕಲಾವಿದರು ಮಕ್ಕಳಿಗೆ ಕಲೆಯ ಬಗ್ಗೆ ತರಬೇತಿ ಒದಗಿಸಬೇಕು’ ಎಂದರು.

‘ಮೂಡಲಪಾಯದ ಕಲಾವಿದರನ್ನು ಗುರುತಿಸಲು ಸಮ್ಮೇಳನ ನಡೆಸಬೇಕಾದ ಅಗತ್ಯವಿದೆ. ಸ್ಥಳೀಯ ಶಾಸಕರು, ದಾನಿಗಳು ಕೂಡ ಈ ಕಲಾ ಪ್ರಕಾರವನ್ನು ಪ್ರೋತ್ಸಾಹಿಸಬೇಕು. ಮಕ್ಕಳಿಗೆ ಮೂಡಲಪಾಯದಲ್ಲಿ ಆಸಕ್ತಿ ಮೂಡಿಸಿದರೆ ಕರಾವಳಿ ಭಾಗದ ಯಕ್ಷಗಾನದಷ್ಟೇ ಈ ಕಲೆಯೂ ಜನಪ್ರಿಯವಾಗುತ್ತದೆ. ದೈವ ಕಲೆಯಾಗಿ ಯಕ್ಷಗಾನ ಸ್ವೀಕರಿಸಲ್ಪಟ್ಟ ಪರಿಣಾಮ, ಕೆಲ ಮೇಳಗಳಿಗೆ 10–20 ವರ್ಷಗಳು ಪ್ರದರ್ಶನ ಮುಂಚಿತವಾಗಿ ಕಾಯ್ದಿರಿಸಲ್ಪಟ್ಟಿವೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಗಾಯಿತ್ರಿ ಕೆ.ಎಂ., ‘ಮೂಡಲಪಾಯ ಯಕ್ಷಗಾನ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಚರ್ಚೆಗಳು ನಡೆಯಬೇಕು. ಯಕ್ಷಗಾನ ಎಂದರೆ ಕರಾವಳಿ ಪ್ರದೇಶ ಎಂಬ ಭಾವನೆ ಇದೆ. ಬಯಲುಸೀಮೆಯ ಕಲೆಯಾಗಿರುವ ಮೂಡಲಪಾಯವನ್ನು ಗ್ರಾಮ ದೇವತೆಗಳ ಹಬ್ಬದಲ್ಲಿ ಕಾಣಬಹುದು. ಇದು ಹವ್ಯಾಸಿ ಕಲೆಯಾಗಿದ್ದು, ತಿರುಗಾಟ ಇಲ್ಲದಿರುವುದರಿಂದ ಕೆಲ ಪ್ರದೇಶಕ್ಕೆ ಸೀಮಿತಗೊಂಡಿದೆ. ವಿವಿಧ ಜಿಲ್ಲೆಗಳಲ್ಲಿ ಮೂಡಲಪಾಯವನ್ನು ಗಟ್ಟಿಗೊಳಿಸುವ ಕಾರ್ಯ ನಡೆಯುತ್ತಿದೆ’ ಎಂದರು.

ಯಕ್ಷಗಾನ ಕಲಾವಿದ ಹಾಗೂ ವಿದ್ವಾಂಸ ಶ್ರೀನಿವಾಸ ಸಾಸ್ತಾನ, ‘25 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕರಾವಳಿಯ ಯಕ್ಷಗಾನ ಹಾಗೂ ಮೂಡಲಪಾಯ ಯಕ್ಷಗಾನದ ಜುಗಲ್‌ ಬಂದಿ ನಡೆಸಲಾಗಿತ್ತು. ಈ ಎರಡೂ ಪ್ರಕಾರಗಳಲ್ಲಿ ಸಾಮ್ಯತೆಯಿದೆ’ ಎಂದರು.

ಇದಕ್ಕೆ ಪೂರಕವಾಗಿ ಮಾತನಾಡಿದ ಅಕಾಡೆಮಿ ಸದಸ್ಯ ವಿದ್ಯಾಧರ ಜಲವಳ್ಳಿ, ‘ಕರಾವಳಿಯ ಯಕ್ಷಗಾನ ಹಾಗೂ ಮೂಡಲಪಾಯ ಯಕ್ಷಗಾನದ ಜುಗಲ್‌ ಬಂದಿಯನ್ನು ಉಡುಪಿ ಅಥವಾ ಬೆಂಗಳೂರಿನಲ್ಲಿ ಈಗ ಮತ್ತೆ ನಡೆಸಬೇಕು’ ಎಂದು ಅಕಾಡೆಮಿ ಅಧ್ಯಕ್ಷರಿಗೆ ಮನವಿ ಮಾಡಿದರು.

ಬಳಿಕ ಮೂಡಲಪಾಯ ತಾಳಮೇಳ, ವಿಚಾರಸಂಕಿರಣ ಹಾಗೂ ಬೊಂಬೆಯಾಟ ನಡೆಯಿತು.



ಕಾರ್ಯಕ್ರಮದಲ್ಲಿ ತಲ್ಲೂರು ಶಿವರಾಮ ಶೆಟ್ಟಿ ಅವರೊಂದಿಗೆ ಗಾಯಿತ್ರಿ ಕೆ.ಎಂ. ಸಮಾಲೋಚನೆ ನಡೆಸಿದರು. ಮೂಡಲಪಾಯ ಯಕ್ಷಗಾನ ಕಲಾವಿದ ಕಲ್ಮನೆ ಎ.ಎಸ್‌. ನಂಜಪ್ಪ, ಶ್ರೀನಿವಾಸ ಸಾಸ್ತಾನ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕರಾವಳಿಯ ಯಕ್ಷಗಾನಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯ, ಮಹತ್ವವು ಮೂಡಲಪಾಯ ಯಕ್ಷಗಾನಕ್ಕೂ ಸಿಗಬೇಕು
ಚಿಕ್ಕಣ್ಣ ಯಣ್ಣೆಕಟ್ಟೆ, ಮೂಡಲಪಾಯ ಯಕ್ಷಗಾನ ವಿದ್ವಾಂಸ

ಸಮಯದ ಇಳಿಕೆ, ವೇಷ–ಭೂಷಣದಲ್ಲಿ ಸಣ್ಣಪುಟ್ಟ ಬದಲಾವಣೆಯೊಂದಿಗೆ ಕಲೆಯನ್ನು ಬೆಳೆಸಬೇಕು. ರಾಜ್ಯದ ವಿವಿಧೆಡೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು
ಶ್ರೀನಿವಾಸ ಸಾಸ್ತಾನ, ಯಕ್ಷಗಾನ ವಿದ್ವಾಂಸ

ವಿ.ವಿ ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಆರೋಗ್ಯ ವಿಮೆಯನ್ನು ಕಡ್ಡಾಯವಾಗಿ ಮಾಡಿಸಲು ವಿಶ್ವವಿದ್ಯಾಲಯದ ಸಿಂಡಿಕೇಟ್‌ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿ ಹಾಗೂ ವೈದ್ಯಕೀಯ ವೆಚ್ಚದಿಂದ ಪೋಷಕರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ವಿಮೆ ಮಾಡಿಸುವ ನಿರ್ಧಾರವನ್ನು ಸಭೆ ಕೈಗೊಂಡಿದೆ.

> **ವಿಶ್ವವಿದ್ಯಾಲಯ ಬಹುತೇಕ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ವಿಮೆ ಮಾಡಿಸುವುದು ತೀರ ಕಷ್ಟಕರವಾಗಿದೆ. ಹಾಗಾಗಿ ಪ್ರಧಾನಮಂತ್ರಿ ಜನ ಸುರಕ್ಷಾ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ವಿಮೆ ಮಾಡಿಸಲು ಸೂಚಿಸಲಾಗಿದೆ.**
> **ಜಯಕರ ಎಸ್‌.ಎಂ.,** ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ

ವಿದ್ಯಾರ್ಥಿಗಳಿಂದ ಪಡೆಯುವ ವಾರ್ಷಿಕ ಶುಲ್ಕದ ಜೊತೆಗೇ ವಿಮೆಯ ಶುಲ್ಕವನ್ನೂ ಸೇರಿಸಲು ಸಿಂಡಿಕೇಟ್‌ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಅದೇ ರೀತಿ ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳು ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಜನ ಸುರಕ್ಷಾ ಯೋಜನೆಯಡಿ ವಿಮೆಗೆ ಕಡ್ಡಾಯವಾಗಿ ನೋಂದಾಯಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಪಾವನ ಕುಟುಂಬಕ್ಕೆ ₹3 ಲಕ್ಷ ನೆರವು: ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಓದುತ್ತಿದ್ದ ವಿದ್ಯಾರ್ಥಿನಿ ಎಚ್‌.ಎನ್‌.ಪಾವನ ಫೆ.3ರಂದುವಿ.ವಿ ವಸತಿನಿಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪಾವನ ಕುಟುಂಬವು ಆರ್ಥಿಕ ಸಂಕಷ್ಟದಲ್ಲಿದ್ದು, ಸೂಕ್ತ ಪರಿಹಾರ ನೀಡುವಂತೆ ವಿದ್ಯಾರ್ಥಿಗಳು ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ ಕುಲಪತಿ ಜಯಕರ್‌ ಅವರು, ಪಾವನ ಕುಟುಂಬಕ್ಕೆ ‘ಕುಲಪತಿ ವಿವೇಚನಾ ವಿದ್ಯಾರ್ಥಿ ನಿಧಿ’ ಅಡಿಯಲ್ಲಿ ₹3 ಲಕ್ಷ ಪರಿಹಾರ ನೀಡಿದ್ದಾರೆ.

ಸಿಂಡಿಕೇಟ್‌ ಸಭೆಯಲ್ಲಿ ಈ ಪ್ರಕರಣದ ಕುರಿತು ಚರ್ಚೆ ನಡೆಯಿತು. ಇಂಥ ಪ್ರಕರಣಗಳನ್ನು ಗಮನದಲ್ಲಿಟ್ಟು‑ಕೊಂಡೇ ವಿದ್ಯಾರ್ಥಿಗಳಿಗೆ ಆರೋಗ್ಯ, ಅಪಘಾತ, ಜೀವ ವಿಮೆಗಳನ್ನು ನೋಂದಾಯಿಸಲು ವಿಶ್ವವಿದ್ಯಾಲಯ ಕ್ರಮ ಕೈಗೊಳ್ಳುತ್ತಿದೆ.

ಕೆಆರ್‌ ಪುರ ರೈಲು ನಿಲ್ದಾಣ: ಆಯತಪ್ಪಿ ಬಿದ್ದ ವ್ಯಕ್ತಿಯ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ರೈಲು ಹತ್ತುವ ವೇಳೆ ಆಯತಪ್ಪಿ ಬಿದ್ದು, ಅಪಾಯಕ್ಕೆ ಸಿಲುಕಿದ್ದ ಪ್ರಯಾಣಿಕನನ್ನು ಮಾಜಿ ಸೈನಿಕ ಹಾಗೂ ರೈಲ್ವೆ ಇಲಾಖೆ ಸಿಬ್ಬಂದಿ ಕೆ.ಆರ್‌.ಪುರ ರೈಲು ನಿಲ್ದಾಣದಲ್ಲಿ ರಕ್ಷಿಸಿದ್ದಾರೆ.

ರಕ್ಷಣೆ ಮಾಡುತ್ತಿರುವ ದೃಶ್ಯವು ನಿಲ್ದಾಣದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಕೆ.ಆರ್‌. ಪುರ ನಿಲ್ದಾಣದಿಂದ ಸೋಮವಾರ ರಾತ್ರಿ ರೈಲು ಮಂಗಳೂರಿನತ್ತ ಹೊರಟಿತ್ತು. ರೈಲು ವೇಗ ಪಡೆದುಕೊಂಡಾಗ ಪ್ರಯಾಣಿಕನೊಬ್ಬ ರೈಲು ಹತ್ತಲು ಮುಂದಾಗಿದ್ದ. ಆಗ ಆಯತಪ್ಪಿ ಬಿದ್ದಿದ್ದು, ರೈಲು ಆತನನ್ನು ಎಳೆದುಕೊಂಡು ಮುಂದಕ್ಕೆ ಸಾಗಿತು. ಸ್ಥಳದಲ್ಲಿದ್ದ ಮಾಜಿ ಸೈನಿಕ ಸತೀಶ್‌ ಮತ್ತು ರೈಲ್ವೆ ಇಲಾಖೆಯ ಸಿಬ್ಬಂದಿ ಪ್ರದೀಪ್‌ ಕುಮಾರ್‌ ಅವರು ಸಿನಿಮೀಯ ಶೈಲಿಯಲ್ಲಿ ವ್ಯಕ್ತಿಯನ್ನು ರಕ್ಷಿಸಿದ್ದಾರೆ. ಪ್ರಯಾಣಿಕ ಅಪಾಯದಿಂದ ಪಾರಾಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಕನ್ನಡ ಜಾನಪದ ಸಮ್ಮೇಳನ: ಸಾನ್ನಿಧ್ಯ: ಅಲ್ಲಮಪ್ರಭು ಸ್ವಾಮೀಜಿ, ಪ್ರಭು ಚನ್ನಬಸವ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಪ್ರಿಯಕೃಷ್ಣ, ಸಮ್ಮೇಳನಾಧ್ಯಕ್ಷ: ಸಿ. ಸೋಮಶೇಖರ್‌, ಸೋಬಾನ ಸ್ಮರಣ ಸಂಚಿಕೆ ಬಿಡುಗಡೆ: ಕೆ.ಎಚ್‌. ಮುನಿಯಪ್ಪ, ಜಾನಪದ ವಸ್ತು ಪ್ರದರ್ಶನದ ಉದ್ಘಾಟನೆ: ಎನ್‌. ಚಲುವರಾಯಸ್ವಾಮಿ, ನೂರೊಂದು ಪುಸ್ತಕ ಬಿಡುಗಡೆ: ಎನ್‌.ಎ. ಹ್ಯಾರಿಸ್‌, ಆಯೋಜನೆ: ಕನ್ನಡ ಜಾನಪದ ಪರಿಷತ್‌, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಮೂಡಲಪಾಯ ಯಕ್ಷೋತ್ಸವ: ‘ಮೂಡಲಪಾಯ ಯಕ್ಷಗಾನದ ಇತ್ತೀಚಿನ ಸ್ಥಿತ್ಯಂತರಗಳು’ ವಿಚಾರಸಂಕಿರಣ: ಎಚ್‌.ಆರ್‌. ಚೇತನಾ, ಬಿ.ಎಂ. ಗುರುನಾಥ್‌, ಅಧ್ಯಕ್ಷತೆ: ಚಕ್ಕೆರೆ ಶಿವಶಂಕರ್‌, ‘ತ್ರಿಪುರ ಸಂಹಾರ’ ಮೂಡಲಪಾಯ ಯಕ್ಷಗಾನ: ಸೋಮಶೇಖರ್‌ ಮತ್ತು ತಂಡ, ಸಮಾರೋಪ ಸಮಾರಂಭ: ಅತಿಥಿಗಳು: ಅಶೋಕ ಎನ್‌. ಛಲವಾದಿ, ಅಧ್ಯಕ್ಷತೆ: ತಲ್ಲೂರು ಶಿವರಾಮ ಶೆಟ್ಟಿ, ಶ್ರೀನಿವಾಸ ಸಾಸ್ತಾನ, ಚಿಕ್ಕಣ್ಣ ಯಣ್ಣೆಕಟ್ಟೆ, ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ, ಆಯೋಜನೆ: ಕರ್ನಾಟಕ ಯಕ್ಷಗಾನ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಎಸ್‌.ಕೆ. ಪ್ರೇಮಾ, ಜಿ.ಎಸ್‌. ಸಿದ್ಧಲಿಂಗಯ್ಯ ದತ್ತಿ ‘ಅಲಕ್ಷಿತ ವಚನಕಾರ್ತಿಯರ ವಚನಗಳೊಂದಿಗೆ–ಒಂದು ಅನುಸಂಧಾನ’ ಉಪನ್ಯಾಸ: ಟಿ. ಯಲ್ಲಪ್ಪ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್‌.ಆರ್‌. ಕಾಲೊನಿ, ಸಂಜೆ 5

ಎಸ್‌. ರಂಗನಾಥ್‌ ಅವರ ‘ಕರ್ನಾಟಕದ ಶತಾಯುಷಿಗಳು’ ಪುಸ್ತಕ ಬಿಡುಗಡೆ: ಮಹೇಶ ಜೋಶಿ, ಅಧ್ಯಕ್ಷತೆ: ಟಿ.ವಿ. ವೆಂಕಟಾಚಲಶಾಸ್ತ್ರಿ, ಪುಸ್ತಕ ಪರಿಚಯ: ಪುರುಷೋತ್ತಮ ಬಿಳಿಮಲೆ, ಉಪಸ್ಥಿತಿ: ಎಂ.ಎನ್‌. ವೆಂಕಟಾಚಲಯ್ಯ, ಆಯೋಜನೆ: ಸ್ನೇಹ ಪ್ರಿಂಟರ್ಸ್‌, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

‘ಭುಗಿಲು’ ಮರುಮುದ್ರಿತ ಪುಸ್ತಕ ಬಿಡುಗಡೆ: ಎಚ್‌.ಡಿ. ದೇವೇಗೌಡ, ಮುಖ್ಯ ಭಾಷಣ: ಪ್ರಭಾಕರ ಭಟ್‌ ಕಲ್ಲಡ್ಕ, ಅಧ್ಯಕ್ಷತೆ: ಎಸ್‌. ಸುರೇಶ್‌ ಕುಮಾರ್‌, ಉಪಸ್ಥಿತಿ: ಎಂ.ಪಿ. ಕುಮಾರ್‌, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಆರ್‌.ವಿ. ಡೆಂಟಲ್‌ ಕಾಲೇಜಿನ ಸಭಾಂಗಣ, ಜೆ.ಪಿ. ನಗರ, ಸಂಜೆ 6

‘ಗುರುದಕ್ಷಿಣೆ’ ಯಕ್ಷಗಾನ ಪ್ರದರ್ಶನ: ಪ್ರಸಂಗ ಕರ್ತರು: ಮಂಜುನಾಥ ಭಾಗವತ ಹೊಸ್ತೋಟ, ಭಾಗವತರು: ಲಂಬೋದರ ಹೆಗಡೆ ನಿಟ್ಟೂರು, ಮದ್ದಳೆ: ಶ್ರೀಧರ್‌ ಸುಬ್ಬರಾಯ ಹೆಗಡೆ, ಚೆಂಡೆ: ಶಿಶಿರ್‌ ಸುವರ್ಣ ಬನ್ನಂಜೆ, ನಿರ್ದೇಶನ: ಬನ್ನಂಜೆ ಸಂಜೀವ ಸುವರ್ಣ, ಆಯೋಜನೆ: ನ್ಯಾಷನಲ್‌ ಸ್ಕೂಲ್‌ ಆಫ್‌ ಡ್ರಾಮಾ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ವಿಶ್ವಾಮಿತ್ರ ಮೇನಕೆ ಡಾನ್ಸ್‌ ಮಾಡೋದು ಏನಕೆ ಆಸ್ಕ್‌ ಮಿಸ್ಟರ್‌ ವೈಎನ್‌ಕೆ’ ನಾಟಕ ಪ್ರದರ್ಶನ: ರಚನೆ: ಜೋಗಿ, ನಿರ್ದೇಶನ: ಚಿತ್ರಶೇಖರ್‌ ಎನ್‌. ಎಸ್‌., ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕೃತಕ ಬುದ್ಧಿಮತ್ತೆ(ಎಐ)ಗೂ ಅಣುವಿದ್ಯುತ್‌ಗೂ ಬಲವಾದ ನಂಟು ಉಂಟಾಗಲಿದೆಯಂತೆ! 'ಎಐ ಡೇಟಾ ಸೆಂಟರ್'ಗಳ ಹೆಚ್ಚಳದಿಂದ ಎದುರಾಗುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಣು ವಿದ್ಯುತ್‌ನ ಬಳಕೆಯೂ ಹೆಚ್ಚಬಹುದು ಎಂದು ಸಂಶೋಧಕರು ಅಂದಾಜಿಸಿದ್ದಾರೆ.





ಬೆಳೆ ಇಳುವರಿಯನ್ನು ಅಂದಾಜಿಸುವ ಎಐ

• ಸುಧೀರ ಎಚ್.ಎಸ್.

ಹವಾಮಾನದ ಸವಾಲುಗಳನ್ನು ಎದುರಿಸುತ್ತಿರುವ ಪ್ರದೇಶಗಳ ಆಹಾರದ ಸಮಸ್ಯೆಯನ್ನು ಪರಿಹರಿಸಲು ಎಐ ತಂತ್ರಜ್ಞಾನದ 'ಭವಿಷ್ಯ'ಕ್ಕೆ ನೆರವಾಗಲಿದೆ

ಭಾರತದ ಆರ್ಥಿಕತೆಗೆ ಕೃಷಿಕ್ಷೇತ್ರ ಪ್ರಮುಖ ಆಧಾರ. ಕೃಷಿ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ. ಬೆಳೆಯನ್ನು ಬಿತ್ತುವ ಮೊದಲು ಅಥವಾ ಬೆಳವಣಿಗೆಯ ಆರಂಭದಲ್ಲೇ ಎಷ್ಟು ಇಳುವರಿ ನಿರೀಕ್ಷಿಸಬಹುದು ಎಂದು ತಿಳಿದರೆ, ಉತ್ಪಾದನೆ ಮತ್ತು ಲಾಭಗಳು ಹೆಚ್ಚುತ್ತವೆ. ಇದರಿಂದ ರೈತರು ನೀರು, ಗೊಬ್ಬರದಂತಹ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಬಹುದು ಮತ್ತು ಯಾವ ಬೆಳೆಗಳನ್ನು ಬೆಳೆಯಬೇಕು ಎಂದು ನಿರ್ಧರಿಸಬಹುದು.

ಸಾಂಪ್ರದಾಯಿಕವಾಗಿ, ರೈತರು ಮತ್ತು ತಜ್ಞರು ತಮ್ಮ ಅನುಭವದ ಮೂಲಕ ಹೊಲಗಳನ್ನು ನೋಡಿ, ಮಣ್ಣು, ಬೀಜ, ಬೆಳೆ, ನೀರು ಮತ್ತು ಹವಾಮಾನವನ್ನು ಪರಿಶೀಲಿಸಿ ಇಳುವರಿಯನ್ನು ಅಂದಾಜು ಮಾಡುತ್ತಾರೆ. ಇದು ಹೆಚ್ಚು ಸಮಯ ತೆಗೆದುಕೊಳ್ಳುವ ಮತ್ತು ಅನಿಶ್ಚಿತ ಪ್ರಕ್ರಿಯೆ. ಈಗ, ಸಂಶೋಧಕರು ಕೃತಕಬುದ್ಧಿಮತ್ತೆ (AI) ಬಳಸಿ ಈ ಅಂದಾಜುಗಳನ್ನು ಹೆಚ್ಚು ನಿಖರ ಮತ್ತು ಸಮಯಕ್ಕೆ ಸರಿಯಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಸೂರತ್‌ನ ಸರ್ದಾರ್ ವಲ್ಲಭಭಾಯಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸೇರಿದಂತೆ ಕೆಲವು ಸಂಸ್ಥೆಗಳ ಸಂಶೋಧಕರು, ಎಎನ್‌ಎಫ್‌ಐಎಸ್ ANFIS - Adaptive Neuro-Fuzzy Inference System) ಎಂಬ ವಿಶೇಷ ಎಐ ತಂತ್ರಜ್ಞಾನವನ್ನು ರೂಪಿಸಿದ್ದಾರೆ. ಮಹಾರಾಷ್ಟ್ರದ ನಾಸಿಕ್ ಪ್ರದೇಶದಲ್ಲಿ ಪ್ರಮುಖ ಐದು ಬೆಳೆಗಳಾದ ಭತ್ತ, ಜೋಳ, ಮೆಕ್ಕೆಜೋಳ, ನೆಲಗಡಲೆ ಮತ್ತು ಕಬ್ಬಿನ ಇಳುವರಿಯನ್ನು ಅಂದಾಜಿಸಲು ಬಳಸಲಾಗಿದೆ.

ನಾಸಿಕ್ ಅರೆ-ಶುಷ್ಕ ಪ್ರದೇಶ; 'ಭಾರತದ ವೈನ್ ರಾಜಧಾನಿ' ಎಂದೂ ಪ್ರಸಿದ್ಧವಾಗಿದೆ. ಈ ಅಧ್ಯಯನದಲ್ಲಿ ಕೇವಲ ಐದು ಹವಾಮಾನ ಅಂಶಗಳನ್ನು ಮಾತ್ರ ಬಳಸಲಾಯಿತು: ಸರಾಸರಿ ಮಳೆ, ಕನಿಷ್ಠ ಮತ್ತು ಗರಿಷ್ಠ ತಾಪಮಾನ, ಸರಾಸರಿ ಸಾಪೇಕ್ಷ ಆರ್ದ್ರತೆ ಮತ್ತು ಸರಾಸರಿ ಆವಿಯಾಗುವಿಕೆ. ಇವು ಬೆಳೆಗಳ ಬೆಳವಣಿಗೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ.

ಎಎನ್‌ಎಫ್‌ಐಎಸ್ ಮಾದರಿಗಳಿಗೆ ತರಬೇತಿ ನೀಡಲು, ಸಂಶೋಧಕರು 1987ರಿಂದ 2020ರವರೆಗಿನ ನಾಸಿಕ್ ಪ್ರದೇಶದ ಹವಾಮಾನ ಮತ್ತು ಬೆಳೆ ಇಳುವರಿಯ ದತ್ತಾಂಶವನ್ನು ಬಳಸಿದರು. 33 ವರ್ಷಗಳ ದತ್ತಾಂಶವು ಎ.ಐ. ಮಾದರಿಗಳಿಗೆ ಬೇಕಾದಷ್ಟು ನಿಖರತೆಯನ್ನು ಪಡೆಯಲು ಸಾಕಾಗದ ಕಾರಣ, ಅವರು ಗಣಿತದ ತಂತ್ರಗಳನ್ನು ಬಳಸಿ ಹೆಚ್ಚು ವಾಸ್ತವಿಕವಾದ ಕೃತಕ ದತ್ತಾಂಶವನ್ನು ಸೃಷ್ಟಿಸಿದರು. ಇದು ಎಐಗೆ ಕಲಿಯಲು ಹೆಚ್ಚು ಅವಕಾಶ ನೀಡಿ, ಹವಾಮಾನ ಮತ್ತು ಇಳುವರಿ ನಡುವಿನ ಸಂಬಂಧವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡಿತು. ಸಂಗ್ರಹಿಸಿದ ದತ್ತಾಂಶದಲ್ಲಿ, ಶೇ 70ರಷ್ಟು ಭಾಗವನ್ನು ಎಐ ಮಾದರಿಗಳಿಗೆ ತರಬೇತಿ ನೀಡಲು ಬಳಸಲಾಯಿತು ಮತ್ತು ಉಳಿದ ಶೇ 30ರಷ್ಟು ಭಾಗವನ್ನು ಮಾದರಿಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಲು ಮೀಸಲಿಡಲಾಯಿತು. ಎಎನ್‌ಎಫ್‌ಐಎಸ್ ಎರಡು ರೀತಿಯ ಎಐಗಳ ಸಂಯೋಜನೆಯಾಗಿದೆ. ಒಂದು ಭಾಗವು ನರಜಾಲದ (neural network) ತರಹ ಕೆಲಸ ಮಾಡುತ್ತದೆ; ಇದು ಸಂಕೀರ್ಣ ಮಾದರಿಗಳನ್ನು ಕಲಿಯುವಲ್ಲಿ ಅತ್ಯುತ್ತಮವಾಗಿದೆ. ಮತ್ತೊಂದು ಭಾಗವು 'ಫಜಿ ಲಾಜಿಕ್' (fuzzy logic) ಎಂಬ ಪರಿಕಲ್ಪನೆಯನ್ನು ಆಧರಿಸಿದೆ, ಇದು ಮಾನವನ ಚಿಂತನೆಯನ್ನು ಅನುಕರಿಸುತ್ತದೆ. ಫಜಿ ಲಾಜಿಕ್ 'ಹೆಚ್ಚಿನ ತಾಪಮಾನ' ಅಥವಾ 'ಕಡಿಮೆ ಮಳೆ'ಯಂಥ ಪದಗಳನ್ನು ಬಳಸಿ 'ಹಾಗಾದರೆ–ಹೀಗೆ' ('ಇಫ್-ದೆನ್', if-Then) ಎಂಬಂತೆ ನಿಯಮಗಳನ್ನು ರಚಿಸುತ್ತದೆ, ಉದಾಹರಣೆಗೆ 'ಮಳೆ ಕಡಿಮೆ ಇದ್ದರೆ ಮತ್ತು ತಾಪಮಾನ ಹೆಚ್ಚಿದ್ದರೆ, ನಿರೀಕ್ಷಿತ ಇಳುವರಿ ಕಡಿಮೆಯಿರುತ್ತದೆ'. ನರಜಾಲದ ಭಾಗವು ಈ ನಿಯಮಗಳನ್ನು ಸ್ವಯಂಚಾಲಿತವಾಗಿ ಸರಿಪಡಿಸಲು ಸಹಾಯ ಮಾಡುತ್ತದೆ.

ಈ ಅಧ್ಯಯನದ ಪ್ರಕಾರ, ಅವರ ಎಎನ್‌ಎಫ್‌ಐಎಸ್ ಮಾದರಿಗಳು ಸ್ವೀಕಾರಾರ್ಹ ನಿಖರತೆಯೊಂದಿಗೆ ಬೆಳೆ ಇಳುವರಿಯನ್ನು ಊಹಿಸಿದವು. ಕಬ್ಬಿನ ಇಳುವರಿಯ ಅಂದಾಜು ಅತ್ಯಂತ ನಿಖರವಾಗಿತ್ತು. ಆದರೆ, ಜೋಳದ ಇಳುವರಿ ಅಂದಾಜಿನಲ್ಲಿ ನಿಖರತೆ ಕಡಿಮೆ ಇತ್ತು. ಬಹುಶಃ ಜೋಳವು ಅಧ್ಯಯನ ಮಾಡಿದ ಹವಾಮಾನ ಅಂಶಗಳ ಮೇಲೆ ಕಡಿಮೆ ಅವಲಂಬಿತವಾಗಿರಬಹುದು. ಇದಕ್ಕೆ ಇನ್ನಷ್ಟು ಮಾಹಿತಿಯ ಅವಶ್ಯಕತೆ ಇರಬಹುದು.

ಈ ಅಧ್ಯಯನವು ಭರವಸೆದಾಯಕವಾಗಿದ್ದರೂ, ಕೆಲವು ಮಿತಿಗಳಿವೆ. ಹೆಚ್ಚು ಮಾಹಿತಿ (ಉದಾಹರಣೆಗೆ, ಹೆಚ್ಚು ಹವಾಮಾನ ಅಂಶಗಳು) ಸೇರಿಸಿದಾಗ, ಎಎನ್‌ಎಫ್‌ಐಎಸ್ ವ್ಯವಸ್ಥೆಯು ಕ್ಲಿಷ್ಟಕರವಾಗಬಹುದು ಮತ್ತು ತರಬೇತಿ ಪ್ರಕ್ರಿಯೆಯು ನಿಧಾನವಾಗಬಹುದು. ಅಲ್ಲದೆ, ಓವರ್‌ಫಿಟ್ಟಿಂಗ್ ಅನ್ನು ತಡೆಗಟ್ಟಲು ದತ್ತಾಂಶ ಮೌಲ್ಯೀಕರಣ (data validation) ಮುಖ್ಯವಾಗಿದೆ. ಈ ಅಧ್ಯಯನ ಕೇವಲ ಹವಾಮಾನ ದತ್ತಾಂಶವನ್ನು ಮಾತ್ರ ಬಳಸಿದೆ ಎಂಬುದು ಒಂದು ಪ್ರಮುಖ ಮಿತಿ. ಮಣ್ಣಿನ ಪ್ರಕಾರ, ಬಳಸಿದ ಗೊಬ್ಬರದ ಪ್ರಮಾಣ, ನೀರಾವರಿ ಪದ್ಧತಿಗಳು ಮತ್ತು ಕೀಟಗಳಂತಹ ಇತರ ಅಂಶಗಳು ಇಳುವರಿಯ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ. ಇವುಗಳನ್ನು ಸೇರಿಸಿದರೆ ಭವಿಷ್ಯದ ಅಂದಾಜುಗಳ ನಿಖರತೆಯನ್ನು ಮತ್ತಷ್ಟು ಸುಧಾರಿಸಬಹುದು.

ಈ ಮಿತಿಗಳ ಹೊರತಾಗಿಯೂ, ಹವಾಮಾನ ದತ್ತಾಂಶದೊಂದಿಗೆ ಎಎನ್‌ಎಫ್‌ಐಎಸ್ ಅನ್ನು ಬಳಸುವುದು ಕಾಲೋಚಿತ ಬಹು-ಬೆಳೆ ಇಳುವರಿಯನ್ನು ಮೊದಲೇ ಊಹಿಸಲು ಒಂದು ಭರವಸೆಯ ವಿಧಾನ ಎಂದು ಈ ಅಧ್ಯಯನ ತೋರಿಸುತ್ತದೆ.

ಸಂಶೋಧಕರು ಸಾಕಷ್ಟು ಐತಿಹಾಸಿಕ ದತ್ತಾಂಶದ ಕೊರತೆಯ ಸಾಮಾನ್ಯ ಸಮಸ್ಯೆಯನ್ನು ನಿವಾರಿಸಲು ದತ್ತಾಂಶ ಸಂಶ್ಲೇಷಣೆಯನ್ನು (data synthesis) ಯಶಸ್ವಿಯಾಗಿ ಬಳಸಿದರು. ಹವಾಮಾನದ ಸವಾಲುಗಳನ್ನು ಎದುರಿಸುತ್ತಿರುವ ಪ್ರದೇಶಗಳ ಆಹಾರದ ಸಮಸ್ಯೆಯನ್ನು ಪರಿಹರಿಸಲು ನವೀನ ತಂತ್ರಜ್ಞಾನವನ್ನು ಬಳಸುವಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ.

ಎಐ ಬಳಕೆಯಲ್ಲಿ ಇಂಗಾಲವೇ ದರ!

• ಅಮೃತೇಶ್ವರಿ ಬಿ.

'ಎ.ಐ.' ಮುಂದೆ ಯಾವುದೇ ಪ್ರಶ್ನೆಯಿಟ್ಟರೂ, ಏನಾದರೂ ಒಂದು ಉತ್ತರ ನಿಮಗೆ ಖಂಡಿತವಾಗಿ ಸಿಕ್ಕೀತು; ಅದು ನೀಡುವ ಉತ್ತರ ಸರಿಯೋ ತಪ್ಪೋ ಅದು ಬೇರೆ.

ವಾಸ್ತವವಾಗಿ ಯಾವುದೇ ಉತ್ತರವನ್ನು ಹುಡುಕಲು ಕೃತಕ ಬುದ್ಧಿಮತ್ತೆಯು (ಎಐ) ಟೋಕನ್ನುಗಳನ್ನು ಬಳಸಿಕೊಳ್ಳುತ್ತದೆ. ಇಲ್ಲಿ 'ಟೋಕನ್' ಎಂದರೆ ರೀಚಾರ್ಜೋ ಅಥವಾ ಸಬ್‌ಸ್ಕ್ರಿಪ್‌ಷನ್ನೋ ಅಲ್ಲದೆ, ಒಂದಿಷ್ಟು ಪಠ್ಯವೋ ಅಥವಾ ಸಂಖ್ಯೆಗಳಾಗಿ ಪರಿವರ್ತಿಸಲ್ಪಟ್ಟ ಪಠ್ಯದ ಒಂದು ಭಾಗವೋ ಆಗಿರುತ್ತದೆ. ಈ ರೀತಿಯ ಪಠ್ಯಗಳನ್ನು ಮುಂಚಿತವಾಗಿ ಫೀಡ್ ಮಾಡಿ ಎಐ ಮಾಡೆಲ್‌ಗಳಿಗೆ ಉತ್ತರಿಸುವಂತೆ ತರಬೇತಿಯನ್ನು ನೀಡಲಾಗಿರುತ್ತದೆ. ಆ ಸಂಖ್ಯೆಗಳನ್ನೇ ನಮ್ಮ ಕೃತಕ ಬುದ್ಧಿಮತ್ತೆಯ ಒಂದು ವಿಧವಾದ 'ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್' (ಎಲ್.ಎಲ್.ಎಂ.) ಬಳಸಿಕೊಳ್ಳುವುದು. ಹೀಗೆ, ಪಠ್ಯವನ್ನು ಸಂಖ್ಯೆಗಳಾಗಿ ಪರಿವರ್ತಿಸುವ ಹಾಗೂ ಇತರೆ ಕಂಪ್ಯೂಟಿಂಗ್ ವಿಧಾನಗಳು ಪ್ರಕ್ರಿಯೆಯುದ್ದಕ್ಕೂ ಇಂಗಾಲದ ಡೈ ಆಕ್ಸೈಡ್ ಅನ್ನು ಹೊರಸೂಸುತ್ತದೆ! ಬಹಳಷ್ಟು ಬಳಕೆದಾರರಿಗೆ, ನಾವು ಬಳಸುತ್ತಿರುವ ತಂತ್ರಜ್ಞಾನಗಳಿಂದ ಉಂಟಾಗುತ್ತಿರುವ ಇಂಗಾಲದ ಹೆಜ್ಜೆಗುರುತು (Carbon Footprint), ಅರ್ಥಾತ್ ಅವು ಹೊರ ಸೂಸುತ್ತಿರುವ ಇಂಗಾಲದ ಪ್ರಮಾಣದ ಬಗ್ಗೆ ಅರಿವೇ ಇರುವುದಿಲ್ಲ. ನಮಗೆ ತಿಳಿದಿರುವ ಹಾಗೆ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನಾಧರಿಸಿಯೇ ವಾತಾವರಣದ ಮೇಲಿನ ವಿವಿಧ ಹಸಿರುಮನೆ ಅನಿಲಗಳ ಪರಿಣಾಮವನ್ನು ಅಳೆಯುವುದು. ಜರ್ಮನಿಯ ಸಂಶೋಧಕರು, ಇಂತಹ ವಿವಿಧ ಎಲ್.ಎಲ್.ಎಂ. ಮಾದರಿಗಳು ಹೊರಸೂಸುವ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣವನ್ನು ಅಳೆದು, ಹೋಲಿಸಿ, ನಾವು ಪಡೆಯುತ್ತಿರುವ ಉತ್ತರ ಉಚಿತವಾಗಿ ದೊರೆಯುತ್ತಿದೆಯೇ? ಅಥವಾ ಇನ್ನಾವುದೋ ರೂಪದಲ್ಲಿ ನಾವು ಅದಕ್ಕಾಗಿ ಬೆಲೆಯನ್ನು ಪಾವತಿ ಮಾಡುತ್ತಿದ್ದೇವೆಯೇ? ಎಂದು ಪತ್ತೆ ಮಾಡಿದ್ದಾರೆ.

ಇದಕ್ಕಾಗಿ ಸಂಶೋಧಕರು, ವಿವಿಧ ವಿಷಯಗಳಿಗೆ ಸಂಬಂಧಿಸಿದ ಸುಮಾರು ಒಂದು ಸಾವಿರ 'ಮಾನದಂಡ ಪ್ರಶ್ನೆ'ಗಳನ್ನು 14 ಲಾರ್ಜ್ ಲ್ಯಾಂಗ್ವೇಜ್ ಮಾದರಿಗಳ ಬಳಿ ಕೇಳಿದ್ದಾರೆ. ಆಗ ತಿಳಿದ ವಿಚಾರವೇ, ತಾರ್ಕಿಕತೆ (Reasoning) ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದಾಗ ಇವು ಹೆಚ್ಚಿನ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಅನ್ನು ಹೊರಸೂಸುತ್ತವೆ ಎಂಬುದು! ನಾವು ಕೇಳುವ ಪ್ರಶ್ನೆ ಯಾವ ವಿಷಯದ್ದು ಎಂಬುದೂ, ಪರಿಸರದ ಮೇಲೆ ಇವು ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನಿರ್ಧರಿಸುತ್ತದೆ ಎಂದಾಯ್ತು. ಈ ಎಲ್.ಎಲ್.ಎಂ.ಗಳಲ್ಲಿ ತಾರ್ಕಿಕ ವಿಷಯಗಳನ್ನು ಪರಿಹರಿಸುವ ಸಾಮರ್ಥ್ಯವಿರುವಂತಹವು ಹಾಗೂ ಸಂಕ್ಷಿಪ್ತವಾದ ಮಾದರಿಗಳು ಎಂದು ಎರಡು ಬಗೆ. ಅಮೂರ್ತವಾದದನ್ನು ಅರ್ಥ ಮಾಡಿಕೊಳ್ಳುವ, ಬಹುಹಂತದ ಪ್ರಶ್ನೆಗಳಿಗೆ ಉತ್ತರಿಸಬಲ್ಲ ಹಾಗೂ ಸಾಂಧರ್ಭಿಕ ವಿಷಯಗಳನ್ನು ವಿಶ್ಲೇಷಿಸುವುದರಲ್ಲಿ ಎರಡೂ ಮಾದರಿಗಳು ಭಿನ್ನವಾಗುತ್ತವೆ. ಆದರೆ ಈ ರೀತಿ ಕ್ಲಿಷ್ಟ ಕಾರ್ಯಗಳನ್ನು ಮಾಡುತ್ತಾ ತಾರ್ಕಿಕ ಉತ್ತರಗಳನ್ನು ನೀಡಬಲ್ಲಂತಹ ಮಾದರಿಗಳು ಸುಮಾರು 50 ಪಟ್ಟು ಹೆಚ್ಚಿನ ಇಂಗಾಲದ ಡೈ ಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತವಂತೆ! ಉದಾಹರಣೆಗೆ, ನೀವು ಪ್ರೌಢಶಾಲಾ ಮಟ್ಟದ ಇತಿಹಾಸ ಪ್ರಶ್ನೆಗಳನ್ನು ಕೇಳಿದಾಗ ಆಗುವ ಇಂಗಾಲದ ಹೊರಸೂಸುವಿಕೆ, ತಾರ್ಕಿಕವಾದ ಪುಟಗಟ್ಟಲೆ ಉತ್ತರವನ್ನು ನೀಡಬೇಕಾದ ಬೀಜಗಣಿತ ಅಥವಾ ತತ್ವಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದಾಗ ಆರು ಪಟ್ಟು ಹೆಚ್ಚಿರುತ್ತದೆ!

ತಾರ್ಕಿಕ ಮಾದರಿಗಳು ಒಂದು ಪ್ರಶ್ನೆಗೆ ಉತ್ತರಿಸಲು ಸುಮಾರು 543.5 ಆಲೋಚನಾ (ಥಿಂಕಿಂಗ್) ಟೋಕನ್ನುಗಳನ್ನು ಬಳಸಿದರೆ, ಸಂಕ್ಷಿಪ್ತ ಮಾದರಿಗಳು ಕೇವಲ 37.7 ಟೋಕನ್ನುಗಳನ್ನು ಬಳಸಿಕೊಳ್ಳುತ್ತವೆಯಂತೆ. ಈ ಆಲೋಚನಾ ಟೋಕನ್ನುಗಳು ಎಂದರೆ ಇನ್ನೇನಲ್ಲ, ಎಐ ಮಾದರಿಗಳು ಪ್ರಶ್ನೆಗೆ ಉತ್ತರಿಸುವ ಮುನ್ನ ಉತ್ಪಾದಿಸಿಕೊಳ್ಳುವ ಹೆಚ್ಚುವರಿ ಟೋಕನ್ನುಗಳು, ಅಂದರೆ ಹೆಚ್ಚುವರಿ ಪಠ್ಯವನ್ನು ಹುಡುಕುವ ಕಾರ್ಯ! ಹೆಚ್ಚುವರಿ ಟೋಕನ್ನುಗಳು ಬಳಕೆಯಾಗಿವೆ ಎಂದರೆ ಹೆಚ್ಚಿನ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಉತ್ಪಾದನೆಯಾಗಿದೆ ಎಂದರ್ಥ. ಆದಾಗ್ಯೂ,



ಹೆಚ್ಚಿನ ಟೋಕನ್ನುಗಳನ್ನು ಬಳಸಿಕೊಂಡು, ಸವಿವರವಾದ ಉತ್ತರವನ್ನು ನೀಡಿದ ಮಾತ್ರಕ್ಕೆ ಉತ್ತರ ಯಾವಾಗಲೂ ಸ್ಪಷ್ಟ ಹಾಗೂ ನಿಖರವಾಗಿರುತ್ತದೆ ಎಂದೇನಲ್ಲ! ತಾರ್ಕಿಕ ಮಾದರಿ ನೀಡುವ ಅತ್ಯಂತ ನಿಖರವಾದ ಉತ್ತರ ಕೇವಲ ಪ್ರತಿಶತ 84.9 ಇರುತ್ತದೆಯಂತೆ. ಆದರೂ ಇವು, ಸಂಕ್ಷಿಪ್ತ ಉತ್ತರವನ್ನು ನೀಡುವ ಮಾದರಿಗಳಿಗಿಂತಲೂ ಮೂರು ಪಟ್ಟು ಹೆಚ್ಚಿನ ಇಂಗಾಲದ ಡೈ ಆಕ್ಸೈಡ್ ಅನ್ನು ಹೊರಚೆಲ್ಲುತ್ತವೆಯಂತೆ.

ಅರ್ಥಾತ್, ಸದ್ಯ ಈ ಎಲ್.ಎಲ್.ಎಂ. ತಂತ್ರಜ್ಞಾನಗಳಲ್ಲಿ ನಿಖರತೆ ಮತ್ತು ಸುಸ್ಥಿರತೆ ಇವುಗಳ ನಡುವೆ ರಾಜಿ ಮಾಡಿಕೊಳ್ಳಬೇಕಿದ್ದು, ನಿಖರತೆ ಬೇಕಿದ್ದಲ್ಲಿ ಸುಸ್ಥಿರತೆ ಸಿಗದಿದೆ. ಅಂದರೆ, 500 ಗ್ರಾಂಗಳಿಗಿಂತ ಕಡಿಮೆ ಇಂಗಾಲವನ್ನು ಹೊರಸೂಸುವ ಯಾವುದೇ ಮಾದರಿಗಳು, ಒಂದು ಸಾವಿರ ಪ್ರಶ್ನೆಗಳಿಗೆ ಉತ್ತರಿಸಿದರೆ ಅವುಗಳ ನಿಖರತೆ ಹೆಚ್ಚೆಂದರೆ ಶೇ 80ಷ್ಟು ಇರುತ್ತದೆ ಎನ್ನುತ್ತಾರೆ, ಸಂಶೋಧಕರಾದ ಡಾನರ್.

ಹೀಗಾಗಿ ಬಳಕೆದಾರರು ಆದಷ್ಟೂ ಕೃತಕ ಬುದ್ದಿಮತ್ತೆಯ ತಂತ್ರಜ್ಞಾನಗಳಿಂದ ಸಂಕ್ಷಿಪ್ತ ಉತ್ತರಗಳನ್ನು ಮಾತ್ರವೇ ಪಡೆದುಕೊಳ್ಳಲು ಬಳಸಿದರೆ ಅಥವಾ ನಿಜವಾಗಿಯೂ ಆ ಕಾರ್ಯಕ್ಕೆ ತಕ್ಕಂತೆ ನಿಖರವಾದ, ಹೆಚ್ಚಿನ ಸಾಮರ್ಥ್ಯದ ಮಾದರಿಗಳ ಮೊರೆ ಹೋಗುವುದು ಅನಿವಾರ್ಯವಿದ್ದಾಗ ಮಾತ್ರವೇ ಬಳಸುವುದರಿಂದ ಇಂಗಾಲದ ಹೊರಸೂಸುವಿಕೆಯನ್ನು ಮಹತ್ತರವಾಗಿ ಕಡಿತಗೊಳಿಸಬಹುದು ಎನ್ನುತ್ತಾರೆ, ಸಂಶೋಧಕರು.

ಜೊತೆಗೆ ಮೇಲೆ ಹೇಳಿದಂತೆ, ಮಾದರಿಯ ಆಯ್ಕೆ ಕೂಡ ಇಂಗಾಲದ ಹೊರಸೂಸುವಿಕೆಯಲ್ಲಿ ಬೃಹತ್ ವ್ಯತ್ಯಾಸವನ್ನು ಮಾಡುತ್ತದೆ. ಉದಾಹರಣೆಗೆ, DeepSeek R1 ಎನ್ನುವ ಮಾದರಿಯು ಆರು ಲಕ್ಷ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಬಿಡುಗಡೆಯಾಗುವ ಇಂಗಾಲದ ಪ್ರಮಾಣವು, ಲಂಡನ್ನಿನಿಂದ ನ್ಯೂಯಾರ್ಕಿಗೆ ಹೋಗಿ ಬರುವುದರಲ್ಲಿ ಒಂದು ವಿಮಾನವು ಹೊರಸೂಸುವಷ್ಟು ಇಂಗಾಲಕ್ಕೆ ಸಮನಾಗಿರುತ್ತದೆಯಂತೆ! ಅದೇ ಸಮಯದಲ್ಲಿ, Qwen 2.5 ಎನ್ನುವ ಮಾದರಿಯು ಮೇಲಿನದಕ್ಕಿಂತ ಸುಮಾರು ಮೂರು ಪಟ್ಟು ಹೆಚ್ಚಿನ ಪ್ರಶ್ನೆಗಳಿಗೆ ಅಷ್ಟೇ ಪ್ರಮಾಣದ ಇಂಗಾಲವನ್ನು ಹೊರಸೂಸುವುದರೊಂದಿಗೆ ಅಷ್ಟೇ ನಿಖರವಾಗಿ ಉತ್ತರಿಸಬಲ್ಲದಂತೆ!

ಹೀಗಾಗಿ, ಬಳಕೆದಾರರು ಅವರು ಬಳಸುವ ಎಐ ಉತ್ಪನ್ನಗಳಿಗೆ ತಗಲುವ ಇಂಗಾಲದ ಡೈ ಆಕ್ಸೈಡ್ ವೆಚ್ಚವನ್ನು ಅರಿತರೆ, ಅಂತಹ ತಂತ್ರಜ್ಞಾನಗಳನ್ನು ಬಳಸುವಾಗ ಅವರ ಆಯ್ಕೆಯ ಬಗ್ಗೆ ಗಮನ ವಹಿಸಿ, ಚಿಂತನಶೀಲರಾಗಿ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

23) ಸಾಮಾನ್ಯವಾಗಿ ಜನರು ಯಾವಾಗ ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಬಳಸುತ್ತಾರೆ?

ಉತ್ತರ:– ಅಜೀರ್ಣತೆಯ ಸಂದರ್ಭದಲ್ಲಿ ಜಠರ ಅಗತ್ಯಕ್ಕಿಂತ ಅಧಿಕ ಆಮ್ಲ ಉತ್ಪಾದಿಸುತ್ತದೆ ಮತ್ತು ಇದು ನೋವು ಮತ್ತು ಉರಿಗೆ ಕಾರಣವಾಗುತ್ತದೆ. ಈ ನೋವಿನಿಂದ ಮುಕ್ತಿ ಪಡೆಯಲು ಜನರು ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಬಳಸುತ್ತಾರೆ.

24) ಯಾವುದನ್ನು ಪ್ರಬಲ ಆಮ್ಲ ಮತ್ತು ದುರ್ಬಲ ಆಮ್ಲಗಳೆಂದು ಕರೆಯುತ್ತಾರೆ?

ಉತ್ತರ:– ಹೆಚ್ಚು H+ ಅಯಾನುಗಳನ್ನು ಉತ್ಪತ್ತಿ ಮಾಡುವ ಆಮ್ಲಗಳನ್ನು ಪ್ರಬಲ ಆಮ್ಲಗಳೆಂದೂ ಮತ್ತು ಕಡಿಮೆ H+ ಅಯಾನುಗಳನ್ನು ಉತ್ಪತ್ತಿ ಮಾಡುವ ಆಮ್ಲಗಳನ್ನು ದುರ್ಬಲ ಆಮ್ಲಗಳೆಂದೂ ಕರೆಯುತ್ತಾರೆ.

25) ಮಾನವನ ದೇಹದಲ್ಲಿ ಅತಿ ಗಟ್ಟಿಯಾದ ವಸ್ತು ಯಾವುದು?

ಉತ್ತರ:– ಹಲ್ಲಿನ ಎನಾಮಲ್

26) ಹಲ್ಲಿನ ಸವೆತವನ್ನು ಹೇಗೆ ತಡೆಯಬಹುದು?

ಉತ್ತರ:– ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಸಾಮಾನ್ಯವಾಗಿ ಪ್ರತ್ಯಾಮ್ಲೀಯವಾಗಿರುವ ಟೂತ್‌ಪೇಸ್ಟ್‌ಗಳನ್ನು ಬಳಸುವುದರಿಂದ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಬಹುದು ಮತ್ತು ಹಲ್ಲಿನ ಸವೆತ ತಡೆಗಟ್ಟಬಹುದು.

27) ಹಲ್ಲಿನ ಸವೆತಕ್ಕೆ ಸಂಬಂಧಿಸಿದಂತೆ ಬರೆಯಿರಿ

ಉತ್ತರ:– ಬಾಯಿಯ pH 5.5ಕ್ಕಿಂತ ಕಡಿಮೆಯಾದಾಗ ಹಲ್ಲಿನ ಸವೆತ ಪ್ರಾರಂಭವಾಗುತ್ತದೆ. ಕ್ಯಾಲ್ಸಿಯಂ ಹೈಡ್ರಾಕ್ಸಿಅಪಟೈಟ್‌ನಿಂದ (ಕ್ಯಾಲ್ಸಿಯಂ ಫಾಸ್ಫೇಟ್‌ನ ಒಂದು ಸ್ಫಟಿಕ ರೂಪ) ಮಾಡಲ್ಪಟ್ಟಿರುವ ಹಲ್ಲಿನ ಎನಾಮಲ್ ದೇಹದ ಅತ್ಯಂತ ಕಠಿಣ ವಸ್ತುವಾಗಿದೆ. ಇದು ನೀರಿನಲ್ಲಿ ವಿಲೀನವಾಗುವುದಿಲ್ಲ, ಆದರೆ ಬಾಯಿಯಲ್ಲಿನ pH 5.5 ಕ್ಕಿಂತ ಕಡಿಮೆಯಾದಾಗ ಇದು ಸವೆತಕ್ಕೊಳಗಾಗುತ್ತದೆ. ಆಹಾರ ಸೇವನೆಯ ನಂತರ ಬಾಯಿಯಲ್ಲಿ ಉಳಿದ ಸಕ್ಕರೆ ಮತ್ತು ಆಹಾರದ ಕಣಗಳ ವಿಘಟನೆಯಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ಆಮ್ಲಗಳನ್ನು ಉತ್ಪತ್ತಿ ಮಾಡುತ್ತವೆ. ಇದನ್ನು ತಡೆಗಟ್ಟುವ ಅತ್ಯುತ್ತಮ ವಿಧಾನವೆಂದರೆ ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಸಾಮಾನ್ಯವಾಗಿ ಪ್ರತ್ಯಾಮ್ಲೀಯವಾಗಿರುವ ಟೂತ್‌ಪೇಸ್ಟ್‌ಗಳನ್ನು ಬಳಸುವುದರಿಂದ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಬಹುದು ಮತ್ತು ಹಲ್ಲಿನ ಸವೆತ ತಡೆಗಟ್ಟಬಹುದು.

28) ನಿಸರ್ಗವು ತಟಸ್ಥೀಕರಣದ ಆಯ್ಕೆ ನೀಡುತ್ತದೆ. ಈ ಹೇಳಿಕೆಗೆ ಉದಾಹರಣೆ ನೀಡಿ

ಉತ್ತರ:– ನಿಜ! ನಿಸರ್ಗವು ತಟಸ್ಥೀಕರಣ ಆಯ್ಕೆ ನೀಡುತ್ತದೆ, ಉದಾ:– ತುರಿಕೆ ಗಿಡ ಮೂಲಿಕೆಯು ಕಾಡು ಸಸ್ಯವಾಗಿದೆ. ಇದರ ಎಲೆಗಳು ಚುಚ್ಚುವ ಕೂದಲುಗಳನ್ನು ಹೊಂದಿದ್ದು ಆಕಸ್ಮಿಕವಾಗಿ ಮುಟ್ಟಿದಾಗ ನೋವುಳ್ಳ ಕಡಿತಕ್ಕೆ ಕಾರಣವಾಗುತ್ತವೆ. ಇದಕ್ಕೆ ಕಾರಣ ಅವುಗಳಿಂದ ಸ್ರವಿಸಲ್ಪಡುವ ಮೆಥನೋಯಿಕ್ ಆಮ್ಲ! ಇದಕ್ಕೆ ಸಾಂಪ್ರದಾಯಿಕ ಪರಿಹಾರವೆಂದರೆ ಪುಲ್ಲಂಪುರುಚಿ(dock plant) ಸಸ್ಯದ ಎಲೆಗಳಿಂದ ತುರಿಕೆಯಾಗುವ ಭಾಗವನ್ನು ಉಜ್ಜುವ ಮೂಲಕ ಪರಿಹರಿಸಿಕೊಳ್ಳಬಹುದು., ಪುಲ್ಲಂಪುರುಚಿ(dock plant) ಸಸ್ಯವು ಸಾಮಾನ್ಯವಾಗಿ ತುರಿಕೆ ಗಿಡದ ಬದಿಯಲ್ಲೇ ಬೆಳೆಯುವ ಕಾಡು ಸಸ್ಯವಾಗಿದೆ. ಹೀಗಾಗಿಯೇ ನಿಸರ್ಗವು ತಟಸ್ಥೀಕರಣ ಆಯ್ಕೆ ನೀಡುತ್ತದೆ ಎನ್ನಬಹುದು.

29) ಯಾವುದಕ್ಕೆ ಸೋಡಿಯಂ ಕ್ಲೋರೈಡ್ ಎಂದು ಕರೆಯುತ್ತಾರೆ?

ಉತ್ತರ:– ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣಗಳ ಸಂಯೋಗದಿಂದ ಉತ್ಪತ್ತಿಯಾಗುವ ಲವಣವನ್ನು ಸೋಡಿಯಂ ಕ್ಲೋರೈಡ್ ಎಂದು ಕರೆಯುತ್ತಾರೆ

30) ಕಲ್ಲುಪ್ಪಿನ ಬಗ್ಗೆ ಬರೆಯಿರಿ

ಉತ್ತರ:– ಘನ ಉಪ್ಪಿನ ಸಂಗ್ರಹಗಳೂ ವಿಶ್ವದ ಅನೇಕ ಭಾಗಗಳಲ್ಲಿ ಕಂಡುಬರುತ್ತವೆ. ಈ ದೊಡ್ಡ ಹರಳುಗಳು ತಮ್ಮಲ್ಲಿರುವ ಕಶ್ಮಲಗಳಿಂದ ಸಾಮಾನ್ಯವಾಗಿ ಕಂದು ಬಣ್ಣ ಹೊಂದಿರುತ್ತವೆ. ಇದನ್ನು ಕಲ್ಲುಪ್ಪು(rock salt) ಎನ್ನುತ್ತಾರೆ.

ಆದಿಜೀವಕಲ್ಪದ (bygone ages) ಸಮುದ್ರಗಳು ಒಣಗಿಹೋದಾಗ ಕಲ್ಲುಪ್ಪಿನ ಪದರಗಳು ಉಂಟಾಗಿವೆ. ಕಲ್ಲಿದ್ದಲಿನಂತೆ ಕಲ್ಲುಪ್ಪಿನ ಗಣಿಗಾರಿಕೆ ನಡೆಸಲಾಗುತ್ತದೆ.

31) ಅಡುಗೆ ಸೋಡಾ, ವಾಷಿಂಗ್ ಸೋಡಾ, ಚೆಲುವೆ ಪುಡಿಯಂತಹ ಅನೇಕ ದಿನಬಳಕೆ ವಸ್ತುಗಳಿಗೆ ಯಾವುದು ಪ್ರಮುಖ ಕಚ್ಚಾವಸ್ತುವಾಗಿದೆ?

ಉತ್ತರ:– ಸಾಮಾನ್ಯ ಉಪ್ಪು / ಸೋಡಿಯಂ ಹೈಡ್ರಾಕ್ಸೈಡ್

32) ಯಾವುದಕ್ಕೆ ಬ್ರೈನ್ ದ್ರಾವಣ ಎನ್ನುತ್ತಾರೆ?

ಉತ್ತರ:– ಸೋಡಿಯಂ ಕ್ಲೋರೈಡ್‌ನ ಜಲೀಯ ದ್ರಾವಣವನ್ನು ಬ್ರೈನ್ ದ್ರಾವಣ ಎನ್ನುತ್ತಾರೆ.

33) ಯಾವುದರಿಂದ ಚಲುವೆ ಪುಡಿ ತಯಾರಿಸಲಾಗುತ್ತದೆ?

ಉತ್ತರ:– ಶುಷ್ಕ ಅರಳಿದ ಸುಣ್ಣ[$Ca(OH)_2$]ದೊಂದಿಗಿನ ಕ್ಲೋರಿನ್‌ನ ವರ್ತನೆಯಿಂದ ಚಲುವೆ ಪುಡಿ ತಯಾರಿಸಲಾಗುತ್ತದೆ.

ನಿಮಗಿದು ಗೊತ್ತಿರಲಿ

ಪ್ರಬಲ ಆಮ್ಲ ಮತ್ತು ಪ್ರಬಲ ಪ್ರತ್ಯಾಮ್ಲಗಳ ಲವಣಗಳು ತಟಸ್ಥವಾಗಿದ್ದು ಅವುಗಳ **pH** ಮೌಲ್ಯ 7. ಪ್ರಬಲ ಆಮ್ಲ ಮತ್ತು ದುರ್ಬಲ ಪ್ರತ್ಯಾಮ್ಲದ ಲವಣಗಳು 7 ಕ್ಕಿಂತ ಕಡಿಮೆ **pH** ಮೌಲ್ಯ ಹೊಂದಿದ್ದು ಆಮ್ಲೀಯವಾಗಿವೆ ಮತ್ತು ಪ್ರಬಲ ಪ್ರತ್ಯಾಮ್ಲ ಮತ್ತು ದುರ್ಬಲ ಆಮ್ಲದ ಲವಣಗಳ **pH** ಮೌಲ್ಯ 7ಕ್ಕಿಂತ ಹೆಚ್ಚಿದ್ದು ಪ್ರತ್ಯಾಮ್ಲೀಯ ಸ್ವಭಾವ ಹೊಂದಿವೆ.

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

chemistry

ELECTROCHEMISTRY

5. Mention some of the applications of electrolysis.

ns:- (……Contd)

(c) In electrorefining of metals - The metals like copper, silver, gold, aluminium, tin etc. are refined or purified by the process of electrorefining.

(d) In electroplating– It is the process of coating a layer of superior metal over the surface of interior metal.

7. What are the main aims of electroplating?

ns:- The main aims of electroplating are –

a) To check corrosion or rusting of the inferior metal.

b) To impart lustre or brightness to the inferior metal.

3. What is Conductance of an electrolyte?

ns:- Conductance of an electrolyte is an ease with which e current flows through the electrolyte.

It is the reciprocal of the resistance of ectrolyte and is denoted by C.

$$\text{Conductance}\ (C) = \frac{1}{R}$$

It is expressed in ohm^{-1} or mho or siemen (S).

). What is specific resistance of the material?

ns:- The specific resistance of the material is the sistance of a material whose length is one metre and area f cross section is one square metre.

). What is specific conductance?

ns:- The Specific conductance (k), is defined as the onductance of the material whose length is one metre and e area of cross section in one square metre.

$$C = k\left(\frac{a}{l}\right)\ (or)\ k = C.\left(\frac{l}{a}\right)$$

Where, `C' is the conductance, `l' is the length and `a' is e area of cross section.

Unit of specific conductance is iemen $(metre)^{-1}$

1. What is molar conductance?

ns:- The molar conductance (μ) of a solution is efined as the conductance due to all the ions resent in a solution which contains one mole of the ectrolyte.

2. What is the unit of molar conductance?

ns:- The unit of molar conductance,

$$\mu = kV = (Sm^{-1})\left(\frac{m^3}{mol}\right) = Sm^2/mol$$

3. How is the molar conductance (μ) of a olution related to the molarity (C')?

ns:- The molar conductance (μ) of a solution elated to the molarity (C') as

$$\mu = \frac{k}{1000\,C'}$$

4. Why is the alternating current used in the lace of direct current in measuring the lectrolytic conduction?

ns:- The alternating current is used in the place of irect current in measuring the electrolytic onduction because direct current results in the lectrolysis of the electrolytic solution.

5. A solution is placed in two different cells aving cell constant 0.1 and 0.5 cm^{-1} respectively. Which of the two will have the greater value of the specific conductance?

Ans:- The specific conductance of both the cells will be same.

46. State Kohlrausch's law.

Ans:- *Kohlrausch's law states that* – At infinite dilution when the dissociation is complete, each ion of the electrolyte makes a definite contribution of its own towards the molar conductivity of the electrolyte and it is quite independent of the presence of the other ion of the electrolyte.

47. Mention some important applications of the Kohlrausch's law.

Ans:- The following are the important applications of the Kohlrausch's law –

(a) It is used in the calculation of Molar Conductance at infinite dilution for Weak Electrolytes.


(b) It is used in the calculation of degree of dissociation of Weak Electrolytes.

48. Define electrochemical equivalent?

Ans:- The electrochemical equivalent is defined as the mass of a substance deposited when one ampere current flows for one second.

The unit of electrochemical equivalent is gram per coulomb.

49. Consider the following diagram in which an electrochemical cell is coupled to an electrolytic cell. What will be the polarity of electrodes 'A' and 'B' in the electrolytic cell?



Ans:- In the electrolytic cells coupled with an electrochemical cell, electrode 'A' will have negative polarity since it is connected to copper plate in the electrochemical cell which has positive polarity. At the same time electrode 'B' will have positive polarity.

50. Why is alternating current used for measuring resistance of an electrolytic solution?

Ans:- Alternating current is used for measuring the resistance of an electrolytic solution because direct current (DC) will cause the electrolysis of the electrolyte. As a result, the concentration of the ions in solution will change.

(Contd…….)

495 ಎಕರೆ ಭೂಮಿ ಸ್ವಾಧೀನ ಇಲ್ಲ

ದೇವನಹಳ್ಳಿ: ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿಗಾಗಿ ದೇವನಹಳ್ಳಿ ತಾಲ್ಲೂಕಿನ ವ್ಯಾಪ್ತಿಯ 495 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳದಿರಲು ತೀರ್ಮಾನಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಗೆ ಸೇರಿದ ಚನ್ನರಾಯಪಟ್ಟಣ, ಮಟ್ಟಬಾರ್ಲು ಹಾಗೂ ಶ್ರೋತ್ರೀಯ ತೆಲ್ಲೋಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ ಎಂದರು.

ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕಿಗೆ 13 ಗ್ರಾಮಗಳ 1,777.2 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 2021ರಲ್ಲಿ ಪ್ರಾಥಮಿಕ ಅಧಿಸೂಚನೆ, 2022ರಲ್ಲಿ ಆದೇಶ ಹೊರಡಿಸಲಾಗಿತ್ತು. ಹೋಬಳಿಯ ರೈತರು ಈಗಾಗಲೇ ಎರಡು ಬಾರಿ ಕೈಗಾರಿಕಾ ಉದ್ದೇಶಗಳಿಗಾಗಿ ಜಮೀನು ಕಳೆದುಕೊಂಡಿದ್ದಾರೆ. ಜತೆಗೆ ಚನ್ನರಾಯಪಟ್ಟಣ, ಮಟ್ಟಬಾರ್ಲು ಮತ್ತು ಶ್ರೋತ್ರೀಯ ತೆಲ್ಲೋಹಳ್ಳಿಗಳಲ್ಲಿನ ನೀರಾವರಿ, ಕೃಷಿ ಮತ್ತು ಜನವಸತಿಗಳನ್ನು ಪರಿಗಣಿಸಿ, 231.23 ಎಕರೆ, 185.18 ಎಕರೆ ಮತ್ತು 78.21 ಎಕರೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ ಎಂದು ಮಾಹಿತಿ ನೀಡಿದರು.

ಚನ್ನರಾಯಪಟ್ಟಣ ಹೋಬಳಿಯಲ್ಲಿ ಇನ್ನು ಮುಂದೆ ಕೈಗಾರಿಕಾ ಉದ್ದೇಶಗಳಿಗೆ ಯಾವುದೇ ಜಮೀನನ್ನು ವಶಪಡಿಸಿಕೊಳ್ಳುವುದಿಲ್ಲ. ರೈತರು ಹೋರಾಟವನ್ನು ಕೈಬಿಡಬೇಕು ಎಂದು ವಿನಂತಿಸಿದರು.

ಉಳಿದ ಹತ್ತು ಗ್ರಾಮಗಳಾದ ಪಾಳ್ಯ, ಹರಳೂರು, ಪೋಲನಹಳ್ಳಿ, ಗೋಕರೆ ಬಚ್ಚೇನಹಳ್ಳಿ, ನಲ್ಲೂರು, ಮಲ್ಲೇಪುರ, ನಲ್ಲಪ್ಪನಹಳ್ಳಿ, ಚೀಮಾಚನಹಳ್ಳಿ, ಮುದ್ದೇನಹಳ್ಳಿ ಮತ್ತು ಹಾಡ್ಯಾಳ ವ್ಯಾಪ್ತಿಯ 1,232 ಎಕರೆ ಭೂಸ್ವಾಧೀನ ನಡೆಯಲಿದೆ. ಭೂಮಿ ಕಳೆದುಕೊಳ್ಳಲಿರುವ ರೈತರಿಗೆ ಜಿಲ್ಲಾಧಿಕಾರಿ ಸೂಕ್ತ ಪರಿಹಾರ ಮೊತ್ತ ನಿಗದಿ ಮಾಡುವರು. ಸಂತ್ರಸ್ತ ರೈತರು ಬೇಡಿಕೆ ಸಲ್ಲಿಸಿದರೆ ಅಭಿವೃದ್ಧಿಪಡಿಸಿದ 1 ಎಕರೆ ಭೂಮಿಯಲ್ಲಿ 10,771 ಚದರ ಅಡಿ ಜಾಗ ಕೊಡಲು ಅವಕಾಶವಿದೆ. ಈ ಜಾಗವನ್ನು ರೈತರು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಬಹುದು ಎಂದು ಹೇಳಿದರು.

ಮುಖ್ಯಾಂಶಗಳು

- 1,777.2 ಎಕರೆ ಜಮೀನನ್ನು ಸ್ವಾಧೀನಕ್ಕೆ 2022ರಲ್ಲಿ ಆದೇಶ
- ಹೋರಾಟ ಕೈಬಿಡಲು ರೈತರಲ್ಲಿ ಮನವಿ

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಂ.ಬಿ.ಪಾಟೀಲ ರೈತರ ಪರ ತೀರ್ಮಾನ ತೆಗೆದುಕೊಂಡಿದ್ದಾರೆ. ರೈತರು ಸರ್ಕಾರದ ತೀರ್ಮಾನ ಗೌರವಿಸಿ, ಪ್ರತಿಭಟನೆ ಕೈಬಿಡಬೇಕು

ಕೆ.ಎಚ್.ಮುನಿಯಪ್ಪ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ

ಹೋರಾಟ ನಿಲ್ಲದು: ರೈತರ ಗುಡುಗು

ದೇವನಹಳ್ಳಿ (ಬೆಂ.ಗ್ರಾಮಾಂತರ): ಚನ್ನರಾಯಪಟ್ಟಣ ಭೂಸ್ವಾಧೀನ ವಿರುದ್ಧ ಬುಧವಾರ (ಜೂನ್ 25) ಹಮ್ಮಿಕೊಂಡಿರುವ 'ದೇವನಹಳ್ಳಿ ಚಲೋ'ವನ್ನು ಪ್ರಬಲ ಹೋರಾಟವಾಗಿ ರೂಪಿಸಲು ರೈತ ಮುಖಂಡರು ನಿರ್ಧರಿಸಿದ್ದಾರೆ.

ಮಂಗಳವಾರ ದೇವನಹಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಯುಕ್ತ ಹೋರಾಟ ಕರ್ನಾಟಕ ಹಾಗೂ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಮುಖಂಡರು ಯಾವುದೇ ಕಾರಣಕ್ಕೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ರೈತರ ಹೋರಾಟದ ದಿಕ್ಕು ತಪ್ಪಿಸಲು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಬೆಂಗಳೂರಿನಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದ್ದಾರೆ ಎಂದು ಹೋರಾಟಗಾರರು ಹರಿಹಾಯ್ದರು.

ಉದ್ದೇಶಿತ 13 ಹಳ್ಳಿಗಳ 1,777 ಎಕರೆ ಪೈಕಿ ಮೂರು ಹಳ್ಳಿಯ ಐದು ನೂರು ಎಕರೆ ಭೂಮಿಯನ್ನು ಉದ್ದೇಶಿತ ಭೂ ಸ್ವಾಧೀನದಿಂದ ಕೈ ಕೈಬಿಡಲಾಗುವುದು. ಈ ಷರತ್ತಿಗೆ ಒಪ್ಪಿ, ಭೂ ಸ್ವಾಧೀನಕ್ಕೆ ಅಡ್ಡಿ ಪಡಿಸದಿದ್ದರೆ ರೈತರಿಗೆ ಒಂದು ಎಕರೆಗೆ ಪರ್ಯಾಯವಾಗಿ ಅಭಿವೃದ್ಧಿ ಪಡಿಸಿದ 10,781 ಚದರ ಅಡಿ ಜಮೀನು ನೀಡಲು ಬದ್ಧ ಎಂಬ ಉಭಯ ಸಚಿವರ ಆಶ್ವಾಸನೆಗೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಆದರೆ, ಸರ್ಕಾರ ಪೂರ್ಣ ಪ್ರಮಾಣದಲ್ಲಿ ಭೂಸ್ವಾಧೀನ ಕೈಬಿಡುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ತಿಳಿಸಿದರು.

ರೈತರ ಹೋರಾಟವೇ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಕಾರ್ಪೊರೇಟ್ ಕಂಪನಿಗಳಿಗೆ ರೈತರ ಭೂಮಿಯನ್ನು ನೀಡಲು ಸಚಿವರು ರಿಯಲ್ ಎಸ್ಟೇಟ್ ದಲ್ಲಾಳಿಗಳಂತೆ ಮಾತನಾಡುತ್ತಿದ್ದಾರೆ ಎಂದು ರೈತ ಮುಖಂಡ ಬಡಗಲಪುರ ನಾಗೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಹಾಯಕ ಸ್ಥಿತಿಯಿಂದ ಹೊರಬಂದು ರೈತರನ್ನು ರಕ್ಷಿಸಬೇಕು. ವಿರೋಧ ಪಕ್ಷದಲ್ಲಿದ್ದಾಗ ಇದೇ ರೈತರ ಬಳಿ ಬಂದು ಪಕ್ಷ ಅಧಿಕಾರಕ್ಕೆ ಬಂದರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವುದಾಗಿ ನೀಡಿದ್ದ ಆಶ್ವಾಸನೆ ಉಳಿಸಿಕೊಳ್ಳಲಿ ಎಂದು ಸಂಯುಕ್ತ ಹೋರಾಟ ಕರ್ನಾಟಕ ಮುಖಂಡ ಟಿ.ಯಶವಂತ್ ಆಗ್ರಹಿಸಿದರು.

ಯುಪಿಎ ನೇತೃತ್ವದ ಕೇಂದ್ರ ಸರ್ಕಾರ 2013 ಜಾರಿಗೆ ತಂದಿದ್ದ ಭೂಸ್ವಾಧೀನ ಕಾಯ್ದೆಯನ್ನು ರಾಜ್ಯ ಪಾಲಿಸುತ್ತಿಲ್ಲ. ಕಾಯ್ದೆ ಪ್ರಕಾರ ಭೂಸ್ವಾಧೀನವನ್ನು ಶೇ 50ರಷ್ಟು ಜನರು ಬೆಂಬಲಿಸಬೇಕು. ಆದರೆ, ಚನ್ನರಾಯಪಟ್ಟಣ ಭೂಸ್ವಾಧೀನಕ್ಕೆ ಶೇ 80ರಷ್ಟು ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಫಲವತ್ತಾದ ಕೃಷಿ ಭೂಮಿ ಹಾಗೂ ನೀರಾವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಾರದು ಎಂದು ಕಾನೂನು ಹೇಳುತ್ತದೆ. ಆದರೆ, ಸಚಿವರು ಆರ್ಥಿಕ ದೃಷ್ಟಿಕೋನದಲ್ಲಿ ಮಾತ್ರ ಯೋಚಿಸುತ್ತಿದ್ದಾರೆ ಎಂದು ಸಂಯುಕ್ತ ಹೋರಾಟ ಕರ್ನಾಟಕ ಮುಖಂಡ ನೂರ್ ಶ್ರೀಧರ್ ತರಾಟೆಗೆ ತೆಗೆದುಕೊಂಡರು.

ಚನ್ನರಾಯಪಟ್ಟಣ ಭೂ ಸ್ವಾಧೀನ ಹೋರಾಟ ಸಮಿತಿ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್, ಚಂದ್ರ ತೇಜಸ್ವಿ,ಪ್ರಭಾ ಎನ್. ಬೆಳವಂಗಲ,ನಂಜಪ್ಪ,-ರಮೇಶ್ ಚೀಮಾಚನಹಳ್ಳಿ, ರಘು ನಾಯಕನಹಳ್ಳಿ, ರಮೇಶ್, ಪ್ರಮೋದ್, ಮಾರೇಗೌಡ ಸುದ್ದಿಗೋಷ್ಠಿಯಲ್ಲಿದ್ದರು.

ಅಂತರಿಕ್ಷ ಯಾನಕ್ಕೆ ಆಂಧ್ರ ಯುವತಿ ಆಯ್ಕೆ

ಅಮರಾವತಿ (ಪಿಟಿಐ): ಅಮೆರಿಕದ ಟೈಟನ್ಸ್ ಅಂತರಿಕ್ಷ ಯಾನಕ್ಕೆ ಗಗನಯಾತ್ರಿ ಅಭ್ಯರ್ಥಿಯಾಗಿ (ಅಸ್ಕಾನ್), ಆಂಧ್ರ ಪ್ರದೇಶದ 23 ವರ್ಷದ ಯುವತಿ ದಾಂಗೇಟಿ ಜಾಹ್ನವಿ ಆಯ್ಕೆಯಾಗಿದ್ದಾರೆ.

ಪಶ್ಚಿಮ ಗೋದಾವರಿ ಜಿಲ್ಲೆ ಪಾಲಕೊಳ್ಳು ಪಟ್ಟಣದ ನಿವಾಸಿ, ಜಾಹ್ನವಿ ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಟೈಟನ್ ಅಂತರಿಕ್ಷದ 2025ನೇ ಸಾಲಿನ ಕಾರ್ಯಕ್ರಮಕ್ಕೆ ಆಯ್ಕೆ ಆಗಿದ್ದಾಗಿ ತಿಳಿಸಿದ್ದಾರೆ.

'ನಾನು ಅಂತರಿಕ್ಷಯಾನ ಮಾಡಲಿದ್ದೇನೆ. ಇದಕ್ಕೆ ಆಯ್ಕೆ ಆಗಿರುವುದನ್ನು ಹೆಮ್ಮೆ, ಉತ್ಸಾಹದಿಂದ ಹಂಚಿಕೊಳ್ಳುತ್ತಿದ್ದೇನೆ. ಅಂತರಿಕ್ಷ ಯಾನ ಕಾರ್ಯಕ್ರಮ 2029ರಲ್ಲಿ ನಡೆಯಲಿದೆ. ಅಂತರಿಕ್ಷ ಕಕ್ಷೆಯಲ್ಲಿ ನಾವು ಸುಮಾರು ಐದು ಗಂಟೆ ಇರಲಿದ್ದೇವೆ' ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಮುಖ್ಯ ಲೋಕಾಯುಕ್ತ ರಾಜೀನಾಮೆಗೆ ಆಗ್ರಹ

ಬೆಂಗಳೂರು: ಲೋಕಾಯುಕ್ತ ಸಂಸ್ಥೆಯಲ್ಲಿ ದೊಡ್ಡ ಹಗರಣ ಬಯಲಿಗೆ ಬಂದಿದ್ದರೂ ಕ್ರಮ ಕೈಗೊಳ್ಳದೇ, ಅಪಾರದರ್ಶಕವಾಗಿ ನಡೆದುಕೊಳ್ಳುತ್ತಿರುವ ಮುಖ್ಯ ಲೋಕಾಯುಕ್ತ ಬಿ.ಎಸ್. ಪಾಟೀಲ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಆಗ್ರಹಿಸಿದರು.

ಪಕ್ಷದ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, 'ತಮ್ಮ ಅಧೀನ ಸಂಸ್ಥೆಯಲ್ಲೇ ಅವ್ಯವಹಾರ, ಭ್ರಷ್ಟಾಚಾರ ನಡೆಯುತ್ತಿದ್ದರೂ, ಪಾಟೀಲರು ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಯಾವುದೇ ಪ್ರತಿಕ್ರಿಯೆ ನೀಡಿಲ್ಲ' ಎಂದು ಆರೋಪಿಸಿದರು.

'ಸಂಸ್ಥೆಯಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದಿರುವುದು ದಾಖಲೆ ಸಹಿತ ಸಾರ್ವಜನಿಕರ ಗಮನಕ್ಕೆ ಬಂದಿದೆ. ಆದರೂ ಪಾರದರ್ಶಕ ತನಿಖೆಗೆ ಆದೇಶಿಸಿಲ್ಲ. ಪತ್ರಿಕಾ ಪ್ರಕಟಣೆಯನ್ನೂ ನೀಡಿಲ್ಲ. ಇದು ಕನ್ನಡಿಗರ ದೌರ್ಭಾಗ್ಯ' ಎಂದು ಬೇಸರ ವ್ಯಕ್ತಪಡಿಸಿದರು.

'ಹಗರಣದಲ್ಲಿ ಎಸ್‌ಪಿ ಶ್ರೀನಾಥ್ ಜೋಶಿ ಜೊತೆ ಸಂಪರ್ಕವಿರುವ ಆರೋಪವುಳ್ಳ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರೂ ರಾಜೀನಾಮೆ ನೀಡಬೇಕು. ಹೈಕೋರ್ಟ್ ಮೇಲುಸ್ತುವಾರಿಯಲ್ಲಿ ಪ್ರಕರಣದ ಸಿಬಿಐ ತನಿಖೆಗೆ ಆದೇಶಿಸಬೇಕು' ಎಂದು ಆಗ್ರಹಿಸಿದರು..

ಸುದ್ದಿಗೋಷ್ಠಿಯಲ್ಲಿ ಪಕ್ಷದ ಕಾರ್ಯದರ್ಶಿ ಎನ್. ನರಸಿಂಹಮೂರ್ತಿ, ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್ ಹಾಜರಿದ್ದರು.

ಮಂತ್ರಾಲಯ: ₹ 5.28 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ



ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ 35 ದಿನಗಳ ಅವಧಿಯಲ್ಲಿ ಸಂಗ್ರಹವಾದ ಕಾಣಿಕೆಯನ್ನು ಮಂಗಳವಾರ ಎಣಿಕೆ ಮಾಡಲಾಯಿತು. ಮಠಕ್ಕೆ ಭಕ್ತರಿಂದ ಒಟ್ಟು ₹5,28,39,538 ಕಾಣಿಕೆ ಬಂದಿದೆ.

₹5,13,04,958 ನಗದು, ₹ 15,34,580 ಮೌಲ್ಯದ ನಾಣ್ಯಗಳು, 43 ಗ್ರಾಂ ಚಿನ್ನ ಹಾಗೂ 1 ಕೆಜಿ 837 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಅನಂತ್ ಕುಮಾರ್ ವಿರುದ್ಧ ಎಫ್‌ಐಆರ್

ಹೆದ್ದಾರಿಯಲ್ಲಿ ಗಲಾಟೆ: ಕಾರು ಚಾಲಕ, ಭದ್ರತಾ ಸಿಬ್ಬಂದಿಗೆ ಜಾಮೀನು

ಪ್ರಜಾವಾಣಿ ವಾರ್ತೆ



ಅನಂತ್ ಕುಮಾರ್

ಬೆಂಗಳೂರು: ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-4ರ ದಾಬಸ್‌ಪೇಟೆ ಸಮೀಪದ ಹಳೇ ನಿಜಗಲ್ ಬಳಿ ಸೋಮವಾರ ನಡೆದಿದ್ದ ಗಲಾಟೆ ಪ್ರಕರಣದಲ್ಲಿ ಕೇಂದ್ರದ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ (ಎ-1), ಅವರ ಭದ್ರತಾ ಸಿಬ್ಬಂದಿ ಶ್ರೀಧರ್ (ಎ-2) ಹಾಗೂ ಕಾರು ಚಾಲಕ ಮಹೇಶ್ (ಎ-3) ವಿರುದ್ಧ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಾಲೇನಹಳ್ಳಿಯ ನಿವಾಸಿ, ಗಾಯಾಳು ಸೈಫ್ ಖಾನ್ ಅವರು ನೀಡಿದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಶ್ರೀಧರ್ ಹಾಗೂ ಮಹೇಶ್ ಅವರನ್ನು ಬಂಧಿಸಿದ್ದರು. ಆರೋಪಿಗಳನ್ನು ಮಂಗಳವಾರ ಮಧ್ಯಾಹ್ನ ನೆಲಮಂಗಲದ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ನ್ಯಾಯಾಲಯವು ಇಬ್ಬರಿಗೂ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.



ಪಿಸ್ತೂಲ್ ಹಿಡಿದುಕೊಂಡಿದ್ದ ಭದ್ರತಾ ಸಿಬ್ಬಂದಿ

ಭದ್ರತಾ ಸಿಬ್ಬಂದಿ ಹಾಗೂ ಕಾರು ಚಾಲಕನ ಪರವಾಗಿ ವಕೀಲ ನಾಗೇಂದ್ರ ವಾದ ಮಂಡಿಸಿದರು. 'ನೋಟಿಸ್ ನೀಡದೇ ಇಬ್ಬರನ್ನೂ ಬಂಧಿಸಲಾಗಿದೆ. ಪೊಲೀಸ್ ಸಹಾಯ ವಾಣಿ 112ಕ್ಕೆ ಕರೆ ಬಂದ ತಕ್ಷಣ ಠಾಣೆಗೆ ಕರೆದೊಯ್ಯಲಾಗಿತ್ತು. ಎಫ್‌ಐಆರ್ ದಾಖಲಾಗುವ ಮುನ್ನವೇ ಬಂಧನ ತೋರಿಸಲಾಗಿದೆ' ಎಂದು ನಾಗೇಂದ್ರ ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಪ್ರತಿ ವಾದ ಮಂಡಿಸಿದ ಸರ್ಕಾರಿ ವಕೀಲ, 'ಹಲ್ಲೆ ಮಾಡಿರುವುದಕ್ಕೆ ಸಾಕ್ಷ್ಯ ಸಿಕ್ಕಿದ್ದರಿಂದಲೇ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ನ್ಯಾಯಾಧೀಶರ ಗಮನಕ್ಕೆ ತಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಇಬ್ಬರಿಗೂ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದರು.

'ತುಮಕೂರಿನಲ್ಲಿ ಮದುವೆ ಸಮಾರಂಭಕ್ಕೆ ಹೋಗಿ, ಇನ್ನೋವಾ ಕಾರಿನಲ್ಲಿ ವಾಪಸ್ ಬರುತ್ತಿದ್ದೆವು. ಕಾರಿನಲ್ಲಿ ಏಳು ಮಂದಿ ಇದ್ದೆವು. ಹಳೇ ನಿಜಗಲ್ ಬಳಿ ಬರುತ್ತಿದ್ದಾಗ, ಹಿಂದಿನಿಂದ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದ ಕಾರಿನ ಚಾಲಕ, ನಮ್ಮ ಕಾರನ್ನು ನಿಲ್ಲಿಸುವಂತೆ ಹೇಳಿದರು. ಕಾರು ನಿಲುಗಡೆ ಮಾಡುತ್ತಿದ್ದಂತೆಯೇ ಮುಖಕ್ಕೆ ಗುದ್ದಿದರು. ಮತ್ತೊಬ್ಬ ವ್ಯಕ್ತಿ ನಮ್ಮನ್ನು ಕಾರಿನಿಂದ ಹೊರಗೆ ಎಳೆದುಕೊಂಡು ಹಲ್ಲೆ ನಡೆಸಿದರು. ಇದರಿಂದ ಸಲ್ಮಾನ್ ಖಾನ್ ಅವರ ಮೂರು ಹಲ್ಲುಗಳು ಮುರಿದಿವೆ' ಎಂದು ಸೈಫ್ ಖಾನ್ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಗನ್ ಮ್ಯಾನ್ ಅಮಾನತು

ಕಾರವಾರ: ಅನಂತಕುಮಾರ್ ಹೆಗಡೆ ಅವರ ಭದ್ರತಾ ಸಿಬ್ಬಂದಿ (ಗನ್ ಮ್ಯಾನ್) ಶ್ರೀಧರ ತೆಗ್ಗಿನ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ಆದೇಶಿಸಿದ್ದಾರೆ.

ಮದ್ಯದಂಗಡಿ ಪರವಾನಗಿ ನವೀಕರಣ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಸನ್ನದುಗಳ ನವೀಕರಣ ಶುಲ್ಕವನ್ನು ಶೇ 50ರಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಪರಿಷ್ಕೃತ ಶುಲ್ಕ ಜುಲೈ 1ರಿಂದ ಅನ್ವಯ ಆಗಲಿದೆ.



ನವೀಕರಣ ಶುಲ್ಕವನ್ನು ಈ ಹಿಂದೆ ಶೇ 100ರಷ್ಟು ಹೆಚ್ಚಿಸಲು ಉದ್ದೇಶಿಸಲಾಗಿತ್ತು. ಆದರೆ, ಮದ್ಯದಂಗಡಿ ಮಾಲೀಕರ ಒತ್ತಾಯಕ್ಕೆ ಮಣಿದ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. ಅಲ್ಲದೆ, ಹಾಲಿ ಇದ್ದ ಅಬಕಾರಿ ಸನ್ನದುಗಳ ವಾರ್ಷಿಕ ನವೀಕರಣ ಅವಧಿಯನ್ನು ಐದು ವರ್ಷಕ್ಕೆ ಹೆಚ್ಚಿಸಿ ಮತ್ತೊಂದು ಆದೇಶ ಹೊರಡಿಸಲಾಗಿದೆ.

20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳ ಮಹಾನಗರ ಪಾಲಿಕೆಗಳ ಪರವಾನಗಿ ನವೀಕರಣ ಶುಲ್ಕ ₹9 ಲಕ್ಷ, ಇತರೆ ಮಹಾನಗರ ಪಾಲಿಕೆಗಳ ಪ್ರದೇಶದಲ್ಲಿ ₹ 7.50 ಲಕ್ಷ, ನಗರಸಭೆ ಪ್ರದೇಶದಲ್ಲಿ ₹ 6.75 ಲಕ್ಷ, ಪಟ್ಟಣ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿ ₹6 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಜನಸಂಖ್ಯೆ ಆಧಾರದಲ್ಲಿ ಇತರೆ ನಗರ, ಪಟ್ಟಣಗಳಲ್ಲಿ ಶುಲ್ಕ ಹೆಚ್ಚಳದರ ವ್ಯತ್ಯಯ ಆಗಲಿದೆ.

ಎಲ್ಲ ರೀತಿಯ ಅಬಕಾರಿ ಸನ್ನದುಗಳ ಶುಲ್ಕವನ್ನು ಶೇ 100 ರಷ್ಟು ಹೆಚ್ಚಿಸಿ ಅಬಕಾರಿ ಇಲಾಖೆ ಮೇ 15ರಂದು ಕರಡು ಅಧಿಸೂಚನೆ ಹೊರಡಿಸಿತ್ತು. ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಮದ್ಯ ಮಾರಾಟಗಾರರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸನ್ನದು ಶುಲ್ಕವನ್ನು ಶೇ 20 ರಿಂದ 25ರಷ್ಟು ಮಾತ್ರ ಹೆಚ್ಚಿಸಬೇಕೆಂದು ಮನವಿ ಮಾಡಿದ್ದರು. ಅಲ್ಲದೆ, ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಿದ್ದರು.

ರಾಜ್ಯದಲ್ಲಿ ಅಬಕಾರಿ ವರ್ಷ ಜುಲೈ 1ರಿಂದ ಆರಂಭವಾಗುತ್ತದೆ. ಆಗ ರಾಜ್ಯದಲ್ಲಿರುವ ಎಲ್ಲ 13 ಸಾವಿರಕ್ಕೂ ಹೆಚ್ಚು ಅಬಕಾರಿ ಸನ್ನದುದಾರರು ತಮ್ಮ ಪರವಾನಗಿಯನ್ನು ನವೀಕರಣ ಮಾಡಿಕೊಳ್ಳಬೇಕು. ಒಂಬತ್ತು ವರ್ಷಗಳ ಬಳಿಕ ಎಲ್ಲ ಬಗೆಯ ಪರವಾನಗಿ ಶುಲ್ಕವನ್ನು ಹೆಚ್ಚಿಸಲಾಗಿದೆ.

ಜುಲೈ 7ಕ್ಕೆ ಪಾಲಿಕೆಗಳ ಸಿಬ್ಬಂದಿ ಸಾಮೂಹಿಕ ರಜೆ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 10 ಮಹಾನಗರ ಪಾಲಿಕೆಗಳ ಸಿಬ್ಬಂದಿಯ ವಿವಿಧ ಬೇಡಿಕೆಗಳಿಗೆ ನಗರಾಭಿವೃದ್ಧಿ ಇಲಾಖೆ ಸ್ಪಂದಿಸದಿರುವುದರಿಂದ ಜುಲೈ 7ರಂದು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ನಡೆಸಲು ನೌಕರರು ನಿರ್ಧರಿಸಿದ್ದಾರೆ.



'ಪಾಲಿಕೆಗಳ ಅಧಿಕಾರಿ, ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ನಗರಾಭಿವೃದ್ಧಿ ಸಚಿವರು ಹಾಗೂ ಕಾರ್ಯದರ್ಶಿಯವರಿಗೆ ಹಲವು ಬಾರಿ ಮನವಿ ಪತ್ರಗಳನ್ನು ನೀಡಲಾಗಿದೆ. ಆದರೂ ಸ್ಪಂದಿಸಿಲ್ಲ. ಹೀಗಾಗಿ, ಎಲ್ಲರೂ ಸಾಮೂಹಿಕ ರಜೆ ಹಾಕಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದ್ದೇವೆ' ಎಂದು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್‌ನ ರಾಜ್ಯ ಘಟಕದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಿ ನೌಕರರಿಗೆ ನೀಡಲಾಗಿರುವ 7ನೇ ವೇತನ ಆಯೋಗದ ಸೌಲಭ್ಯ ನೀಡಲು ಪಾಲಿಕೆಗಳ ಸಿಬ್ಬಂದಿಗೂ ಆರ್ಥಿಕ ಇಲಾಖೆಯಿಂದಲೇ ಅನುದಾನ ಬಿಡುಗಡೆ ಮಾಡಬೇಕು. ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿ ಮಾಡಿ ಕರಡು ಅಧಿಸೂಚನೆಯನ್ನು ಪ್ರಕಟಿಸಬೇಕು. ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಕೆಜಿಐಡಿ ಮತ್ತು ಜಿಪಿಎಫ್ ಸೌಲಭ್ಯವನ್ನು ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ಜಾರಿಗೊಳಿಸಬೇಕು ಎಂದು ಮನವಿ ಮಾಡಿಕೊಳ್ಳಲಾಗಿದೆ' ಎಂದರು.

'ಆರೋಗ್ಯ ಸೌಲಭ್ಯದ ಜ್ಯೋತಿ/ ಆರೋಗ್ಯ ಸಂಜೀವಿನಿ ಯೋಜನೆಯನ್ನು ಪಾಲಿಕೆ ಸಿಬ್ಬಂದಿಗೆ ನೀಡಬೇಕು. ಪ್ರತಿ ವರ್ಷ ಕ್ರೀಡೆ ಆಯೋಜಿಸಬೇಕು. ವಿವಿಧ ವೃಂದದ ಹುದ್ದೆಗಳಿಗೆ ವೃಂದವಾರು ಮುಂಬಡ್ತಿ ನೀಡಬೇಕು ಎಂಬ ಬೇಡಿಕೆಗಳನ್ನು ಇರಿಸಲಾಗಿದೆ' ಎಂದು ಹೇಳಿದರು.

ಕಸಾಪ ಸಭೆ: ಮತ್ತೆ ಗೊಂದಲ

ಸಭೆ ನಡೆಯುವ ಸ್ಥಳದ ಬಗ್ಗೆ ಪೊಲೀಸ್ ಇಲಾಖೆ ಆಕ್ಷೇಪ: ಕಾರ್ಯಸೂಚಿ ವಿವಾದ

• ಹರಿಶಂಕರ್ ಆರ್.

ಬಳ್ಳಾರಿ: ಜಿಲ್ಲೆಯ ಸಂಡೂರು ಪಟ್ಟಣದಲ್ಲಿ ಇದೇ 29ಕ್ಕೆ ನಿಗದಿಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆ ಪೊಲೀಸ್ ಇಲಾಖೆಯ ವರದಿ ಮತ್ತು ಕಾರ್ಯಸೂಚಿಗಳ ಕಾರಣಕ್ಕೆ ಗೊಂದಲ, ವಿವಾದಗಳ ಗೂಡಾಗಿದೆ.

ಸಭೆ ನಡೆಯುವ ಸ್ಥಳದ ಬಗ್ಗೆ ಪೊಲೀಸ್ ಇಲಾಖೆ ಆಕ್ಷೇಪವೆತ್ತಿದ್ದರೆ, ಸಭೆಯಲ್ಲಿ ಚರ್ಚೆಗೆ ನಿಗದಿ ಮಾಡಿರುವ ಕಾರ್ಯಸೂಚಿಗಳ ಬಗ್ಗೆ ಸದಸ್ಯರು ಪ್ರಶ್ನೆಗಳನ್ನೆತ್ತಿದ್ದಾರೆ.

ಇದೇ ವರ್ಷ ಏಪ್ರಿಲ್ 27ರಂದು ಸಂಡೂರಿನಲ್ಲೇ ನಿಗದಿಯಾಗಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯೂ ಜಾಗ ಮತ್ತು ಕಾರ್ಯಸೂಚಿ ಕಾರಣಕ್ಕೆ ವಿವಾದಕ್ಕೆ ಗುರಿಯಾಗಿತ್ತು. ಕೊನೆಗೆ ಬಿಸಿಲಿನ ಕಾರಣ ನೀಡಿ ಮುಂದೂಡಲಾಗಿತ್ತು. ಸದ್ಯ, ಸಂಡೂರು ಪಟ್ಟಣದ ಕೂಡ್ಲಿಗಿ ರಸ್ತೆಯಲ್ಲಿರುವ ಆದರ್ಶ ಕಲ್ಯಾಣ ಮಂಟಪದಲ್ಲಿ ವಾರ್ಷಿಕ ಸಭೆ ಮತ್ತು ಕಾರ್ಯಕಾರಿ ಸಮಿತಿ ಸಭೆ ನಡೆಸಲು ಉದ್ದೇಶಿಸಲಾಗಿತ್ತು. ಇದಕ್ಕೆ ಅನುಮತಿ ನೀಡದಿರಲು ಪೊಲೀಸ್ ಇಲಾಖೆ ಜಿಲ್ಲಾಧಿಕಾರಿಗೆ ವರದಿ ನೀಡಿದೆ.

ಸಂಡೂರು ಸಣ್ಣ ಪಟ್ಟಣ. ಪರಿಷತ್ತಿನ ಸದಸ್ಯ ಬಲ ನಾಲ್ಕು ಲಕ್ಷ. ಒಂದು ವೇಳೆ ಅಷ್ಟು ಜನ ಬಂದರೆ ಅದನ್ನು ತಾಳಿಕೊಳ್ಳಲು ಪಟ್ಟಣಕ್ಕೆ ಸಾಧ್ಯವಾಗದು. ಸುರಕ್ಷತೆ ಕಾರಣದಿಂದ ಅನುಮತಿ ನಿರಾಕರಿಸಿದ್ದೇವೆ

ಡಾ. ಶೋಭಾರಾಣಿ, ಎಸ್‌ಪಿ, ಬಳ್ಳಾರಿ

ಸಾವಿರಾರು ಅದಿರು ಲಾರಿಗಳ ನಿರಂತರ ಓಡಾಟ, ಇತ್ತೀಚೆಗೆ ಸಂಭವಿಸಿದ್ದ ಭಾರಿ ಅಪಘಾತಗಳು, ಸಾಹಿತಿಗಳ ಸುರಕ್ಷತೆ, ಸಭೆ ನಡೆಯುವ ಮಂಟಪದಲ್ಲಿನ ಮೂಲಸೌಕರ್ಯಗಳ ಕೊರತೆಯ ಕಾರಣವನ್ನು ಪೊಲೀಸ್ ಇಲಾಖೆ ಮುಂದಿಟ್ಟಿದೆ. ಈ ಹಿನ್ನೆಲೆಯಲ್ಲಿ ಕಸಾಪ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಪತ್ರ ಬರೆದಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ನಿಮ್ಮದೇ ಜವಾಬ್ದಾರಿಯಲ್ಲಿ ಸಭೆ ಮಾಡಿಕೊಳ್ಳಿ ಎಂದು ತಿಳಿಸಿದ್ದಾರೆ. ಇದು ಜಿಲ್ಲಾ ಘಟಕವನ್ನು ಗೊಂದಲಕ್ಕೆ ದೂಡಿದೆ.

ಸಾಹಿತಿಗಳು, ಸದಸ್ಯರ ಸುರಕ್ಷತೆ ಕಾರಣದಿಂದ ಸಭೆಗೆ ಪೊಲೀಸ್ ಇಲಾಖೆ ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಅಧ್ಯಕ್ಷ ಮಹೇಶ ಜೋಶಿ, '2,000 ಸದಸ್ಯರು ಬರಬಹುದು ಎಂದು ನಾವು ಅಂದಾಜಿಸಿದ್ದೇವೆ. ಒಂದು ಸಾವಿರ ಜನ ಬರಬಹುದಷ್ಟೇ. ಇನ್ನು ಸಾಹಿತಿಗಳು ಎಷ್ಟು ಮಂದಿ ಈ ಐದು ವರ್ಷದಲ್ಲಿ ಸರ್ವ ಸದಸ್ಯರ ಸಾಮಾನ್ಯ ಸಭೆಗೆ ಬಂದಿದ್ದಾರೆ? ಎಸ್. ಜಿ ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ವಸುಂಧರಾ ಭೂಪತಿ, ಬರಗೂರು ರಾಮಚಂದ್ರಪ್ಪ, ಹಂ.ಪ ನಾಗರಾಜಯ್ಯ, ಚಂದ್ರಶೇಖರ ಕಂಬಾರ, ದೊಡ್ಡರಂಗೇಗೌಡ, ಭೈರಪ್ಪ ಇವರ್‍ಯಾರೂ ಸಭೆಗೆ ಬಂದಿಲ್ಲ. ಹೀಗಾಗಿ ಇಲ್ಲಿಯೂ ಅವರು ಬರುವುದನ್ನು ನಿರೀಕ್ಷಿಸಲಾಗದು. ಹೀಗಿದ್ದ ಮೇಲೆ ಹಿರಿಯ ಸಾಹಿತಿಗಳ ಸುರಕ್ಷತೆ ವಿಚಾರ ಉದ್ಭವಿಸುವುದಿಲ್ಲ' ಎಂದು ಹೇಳಿದರು.

ಎರಡು ವರ್ಷಗಳ ಬಳಿಕ ಮಂಡನೆ

2023-24ನೇ ಸಾಲಿನ ಲೆಕ್ಕಪರಿಶೋಧಿತ (ಆಡಿಟ್ ಆದ) ವಾರ್ಷಿಕ ಲೆಕ್ಕ ಪತ್ರಗಳ ಮಂಡನೆ ಮತ್ತು 2024–25ನೇ ಸಾಲಿನ ವಾರ್ಷಿಕ ಆಯವ್ಯಯವನ್ನು ಚರ್ಚಿಸಿ ಅನುಮೋದಿಸುವ ಕಾರ್ಯಸೂಚಿಯನ್ನು 29ರ ಸಾಮಾನ್ಯ ಸಭೆ ಒಳಗೊಂಡಿದೆ.

'ಲೆಕ್ಕಪರಿಶೋಧನಾ ವರದಿಯನ್ನು ಎರಡು ವರ್ಷಗಳ ಬಳಿಕ ಈಗ ಮಂಡಿಸುತ್ತಿರುವುದು ಏಕೆ?' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಕಸಾಪ ಕೋಶಾಧ್ಯಕ್ಷ ಪಟೇಲ್ ಪಾಂಡು, '2024 –25ನೇ ಸಾಲಿನ ಆಯವ್ಯಯವನ್ನು ಈಗಾಗಲೇ ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸಿದ್ದೇವೆ. ಅದಕ್ಕೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಬೇಕಿದೆ. ಹಿಂದಿನ ಸಭೆ ಮುಂದೂಡಿಕೆಯಾಗಿತ್ತು. ಆ ಕಾರಣಕ್ಕೆ 29ರ ಸಭೆಯಲ್ಲಿ ಮಂಡಿಸುತ್ತಿದ್ದೇವೆ. ಅದನ್ನು ಮಂಡಿಸಲು ಡಿಸೆಂಬರ್ ವರೆಗೆ ನಮಗೆ ಅವಕಾಶವಿದೆ. ಸಭೆಯಲ್ಲಿ ಅದಕ್ಕೆ ನಾವು ಉತ್ತರವನ್ನೂ ಕೊಡಲಿದ್ದೇವೆ. ಇನ್ನು 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಲವು ಹಂತಗಳಲ್ಲಿ ಪರಿಶೋಧನೆಗೊಂಡಿದ್ದು, ವಿಳಂಬವಾಗಿದೆ. ಈಗ ಮಂಡಿಸುತ್ತಿದ್ದೇವೆ' ಎಂದು ಸ್ಪಷ್ಟಪಡಿಸಿದರು.

ಡಿಸಿಇಟಿ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಎರಡನೇ ವರ್ಷಕ್ಕೆ ನೇರ ಪ್ರವೇಶ ಪಡೆಯಲು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ನಡೆಸಿದ್ದ ಡಿಸಿಇಟಿ-2025 ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಂಗಳವಾರ ಪ್ರಕಟಿಸಿದೆ.

ಪ್ರತಿ ಎಂಜಿನಿಯರಿಂಗ್ ಕಾಲೇಜಿನಲ್ಲೂ ಡಿಸಿಇಟಿ ವಿದ್ಯಾರ್ಥಿಗಳಿಗಾಗಿ ಶೇ 10ರಷ್ಟು ಸೀಟು ಮೀಸಲಿರುತ್ತದೆ. ಪರೀಕ್ಷೆ ಬರೆದಿದ್ದ 20,346 ಅಭ್ಯರ್ಥಿಗಳಿಗೆ ಶ್ರೇಯಾಂಕ ನೀಡಲಾಗಿದ್ದು, ಸೀಟು ಲಭ್ಯತೆಯ ನಂತರ ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದೆ ಎಂದು ಪ್ರಾಧಿಕಾರ ಹೇಳಿದೆ.

ಎಂಡಿಎಸ್ -30ರಿಂದ ದಾಖಲೆ ಪರಿಶೀಲನೆ: 2025-26ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್ (ಎಂಡಿಎಸ್) ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. 29ರವರಗೆ ಅರ್ಜಿ ಸಲ್ಲಿಸಬಹುದು. ಶುಲ್ಕ ಪಾವತಿಗೆ 30 ಕೊನೆ ದಿನ. ಮೂಲ ದಾಖಲೆಗಳ ಪರಿಶೀಲನೆ 30ರಿಂದ ನಡೆಯಲಿದೆ. ಮುಂಗಡ ದಿನಾಂಕ ನಿಗದಿಗೆ ಜೂನ್ 27ರಂದು ವೆಬ್‌ಸೈಟ್ ಲಿಂಕ್ ಬಿಡುಗಡೆ ಮಾಡಲಾಗುತ್ತದೆ ಎಂದು ಕೆಇಎ ಮಾಹಿತಿ ನೀಡಿದೆ.

ಬೃಹತ್ ಎಲ್‌ಪಿಜಿ ಸಂಗ್ರಹಾಗಾರ ಸಜ್ಜು

ಪ್ರಜಾವಾಣಿ ವಾರ್ತೆ

ಮಂಗಳೂರು: ತಾಲ್ಲೂಕಿನ ಬಾಳ ಗ್ರಾಮದಲ್ಲಿ ನೆಲದಡಿ ಬಂಡೆ ಕೊರೆದು ನಿರ್ಮಿಸಿರುವ, 80 ಸಾವಿರ ಟನ್ ಸಾಮರ್ಥ್ಯದ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಸಂಗ್ರಹಾಗಾರ ನಿರ್ಮಾಣ ಪೂರ್ಣಗೊಂಡಿದೆ. ಇದು ದೇಶದ ಅತಿ ದೊಡ್ಡ ಎಲ್‌ಪಿಜಿ ಸಂಗ್ರಹಾಗಾರ.

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕಂಪನಿಗಾಗಿ ಮೇಘ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಕಂಪನಿಯು ನಿರ್ಮಿಸಿದೆ.

ಎಂಇಐಎಲ್‌ನ ತನ್ನ ಎಕ್ಸ್ ಖಾತೆಯ ಮೂಲಕ ಈ ಕುರಿತ ಮಾಹಿತಿಯನ್ನು ಈಚೆಗೆ ಹಂಚಿಕೊಂಡಿದ್ದು, 'ಸಂಗ್ರಹಾಗಾರಕ್ಕೆ ಸಂಬಂಧಿಸಿದ ಎಲ್ಲ ಪರೀಕ್ಷೆಗಳನ್ನು ಜೂನ್ 6ರಂದು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಕಲ್ಲು ಕೊರೆದು ನಿರ್ಮಿಸಿದ ಗುಹೆಯಲ್ಲಿ ಎಲ್‌ಪಿಜಿಯನ್ನು ಸಂಗ್ರಹಿಸುವ ದೇಶದ ಎರಡನೇ ವ್ಯವಸ್ಥೆ ಇದು. ಇದುವರೆಗೆ ನಿರ್ಮಿಸಿರುವ ನೆಲದಡಿಯ ಸಂಗ್ರಹಾಗಾರಗಳಲ್ಲಿ ಇದು ಅತಿ ದೊಡ್ಡದು. ಇದರಲ್ಲಿ 80 ಸಾವಿರ ಟನ್ ಎಲ್‌ಪಿಜಿ ಸಂಗ್ರಹಿಸಲು ಸಾಧ್ಯ' ಎಂದು ತಿಳಿಸಿದೆ.



ಮಂಗಳೂರು ತಾಲ್ಲೂಕಿನ ಬಾಳದಲ್ಲಿ ನಿರ್ಮಾಣವಾಗಿರುವ ನೆಲದಡಿಯ ಎಲ್‌ಪಿಜಿ ಸಂಗ್ರಾಹಾಗಾರದ ಬಾಹ್ಯ ನೋಟ

ನೆಲದಡಿಯ ಅದ್ಭುತ ಸಂಗ್ರಹಾಗಾರ ಇದಾಗಿದೆ. ಇದಕ್ಕೆ ಸುರಂಗದ ಮೂಲಕ ಸಂಪರ್ಕಿಸುವ 1083 ಮೀ ಉದ್ದದ ದಾರಿ ಇದೆ. ಮೇಲ್ಭಾಗದಲ್ಲಿ ಹಾಗೂ ಕೆಳಗಡೆ ನೀರಿನ ಪರದೆಗಳಿವೆ. 486.2 ಮೀ. ಉದ್ದದ ಸಂಪರ್ಕ ಸುರಂಗವಿದೆ. ಅನಿಲ ಸಂಗ್ರಹಿಸುವ ಎರಡು ಗುಹೆಗಳು 220 ಮೀ. ಹಾಗೂ 225 ಮೀ. ಆಳದಲ್ಲಿವೆ ಎಂದು ಕಂಪನಿ ತಿಳಿಸಿದೆ.

ಮುಖ್ಯಾಂಶಗಳು

- 6 ಲಕ್ಷ ಬ್ಯಾರೆಲ್ (6 ಕೋಟಿ ಲೀಟರ್) ಅನಿಲ ಸಂಗ್ರಹ ಸಾಮರ್ಥ್ಯ
- ನಿರ್ಮಾಣದ ಹಿಂದಿದೆ 500 ಕುಶಲಕರ್ಮಿಗಳ ಪರಿಶ್ರಮ

ಎಪಿಪಿ ಲಂಚ ಆರೋಪ: ತಡೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಉಡುಪಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಗಣಪತಿ ನಾಯ್ಕ ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ' ಎಂದು ಹೈಕೋರ್ಟ್, ಲೋಕಾಯುಕ್ತ ಪೊಲೀಸರಿಗೆ ನಿರ್ದೇಶಿಸಿದೆ.

'ನನ್ನ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988 (ತಿದ್ದುಪಡಿ ಕಾಯ್ದೆ–2018) ಕಲಂ 7(ಎ)ರ ಅಡಿ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ತಾಳಮಕ್ಕಿಯ ಗಣಪತಿ ವಸಂತ್ ನಾಯ್ಕ ಸಲ್ಲಿಸಿರುವ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



'ಪ್ರಕರಣದ ತನಿಖೆಗೆ ಮಧ್ಯಂತರ ತಡೆ ನೀಡಬೇಕು' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಒಪ್ಪದ ನ್ಯಾಯಪೀಠ, ಫಿರ್ಯಾದುದಾರ ಮತ್ತು ಲೋಕಾಯುಕ್ತ ವಿಶೇಷ ಪ್ರಾಸಿಕ್ಯೂಟರ್ ಅವರಿಗೆ ನೋಟಿಸ್ ಜಾರಿಗೊಳಿಸಿತು. ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಉಡುಪಿಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಗಣಪತಿ ನಾಯ್ಕ ಪ್ರಧಾನ ಸಿವಿಲ್ ನ್ಯಾಯಾಲಯದ ಉಸ್ತುವಾರಿ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು.

ಪ್ರಕರಣವೊಂದರಲ್ಲಿ ಅಕ್ರಮ ಮರಳು ಸಾಗಣೆಗೆ ಬಳಕೆ ಮಾಡಿದ್ದ ವಾಹನ ಬಿಡುಗಡೆಗೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿರುವ ವಿಚಾರಣೆ ಮುಂದುವರಿಸಲು ₹2 ಸಾವಿರ ಲಂಚ ಪಡೆದ ಆರೋಪದಡಿ ಲೋಕಾಯುಕ್ತ ಪೊಲೀಸರು ನಾಯ್ಕ ಅವರನ್ನು ಬಂಧಿಸಿದ್ದರು. ನಂತರ ಜಾಮೀನು ಪಡೆದು ಬಿಡುಗಡೆಯಾಗಿದ್ದಾರೆ.

ವಾಂತಿ– ಭೇದಿ: ಮಹಿಳೆ ಸಾವು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಮಾನ್ಯರಮಸಲವಾಡ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡಿದ್ದ ಮಹಿಳೆ ಕೊರವರ ಹುಲಿಗೆಮ್ಮ (54) ಸೋಮವಾರ ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಕಲುಷಿತ ನೀರು ಸೇವನೆಯಿಂದ ಕಳೆದ ವಾರ ಅವರಿಗೆ ವಾಂತಿಭೇದಿ ಕಾಣಿಸಿಕೊಂಡಿತ್ತು. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹುಲಿಗೆಮ್ಮ ಗುಣಮುಖರಾಗಿದ್ದರು. ಭಾನುವಾರ ಮತ್ತೆ ಆರೋಗ್ಯದಲ್ಲಿ ಏರುಪೇರು ಆಗಿದ್ದರಿಂದ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವರಿಗೆ ಪಾರ್ಶ್ವವಾಯು ಉಂಟಾಗಿ ಮೃತಪಟ್ಟರು ಎಂದು ವೈದ್ಯರು ತಿಳಿಸಿದ್ದಾರೆ.

'ಲೋಕಾ' ದಾಳಿ: ₹34.90 ಕೋಟಿ ಅಕ್ರಮ ಆಸ್ತಿ ಪತ್ತೆ

ಒಂದನೇ ಪುಟದಿಂದ...

ಕಲಬುರಗಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಮಲ್ಲಿಕಾರ್ಜುನ ಅಲ್ಲಿಪುರ ಬಳಿ ₹6.32 ಕೋಟಿ ಮೌಲ್ಯದ ಅಕ್ರಮ ಆಸ್ತಿ ಇರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ. ಅವರು 3 ಮನೆಗಳು, 4 ಎಕರೆ ಕೃಷಿ ಜಮೀನು ಹಾಗೂ ಬ್ಯಾಂಕ್ ಖಾತೆಯಲ್ಲಿ ₹1 ಕೋಟಿ ನಗದು ಹೊಂದಿದ್ದಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಧಾರವಾಡದ ಕರ್ನಾಟಕ ನೀರಾವರಿ ನಿಗಮದ ಮಲಪ್ರಭಾ ಯೋಜನಾ ವಲಯದ ಮುಖ್ಯ ಎಂಜಿನಿಯರ್ ಅಶೋಕ್ ಲಕ್ಷ್ಮಪ್ಪ ವಸನಾಡ್ ಬಳಿ ₹6.11 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಲಾಗಿದೆ. ಅವರು 7 ನಿವೇಶನಗಳು, 3 ವಾಸದ ಮನೆ, 19 ಎಕರೆ ಕೃಷಿ ಜಮೀನು ಹೊಂದಿದ್ದಾರೆ.

ಸೆಮಿನಾರ್‌ಗೆ ಹೊರಟಿದ್ದ ಸಂಶೋಧನಾ ಕೇಂದ್ರದ ಮುಖ್ಯಸ್ಥ

ಶಿವಮೊಗ್ಗ: ಪ್ರದೀಪ್ ಅವರು 16 ವರ್ಷಗಳಿಂದ ವಿಶ್ವವಿದ್ಯಾಲಯದ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದು, ಮಹಾರಾಷ್ಟ್ರದ ನಾಗ್ಪುರದಲ್ಲಿ ಸೆಮಿನಾರ್‌ನಲ್ಲಿ ಪಾಲ್ಗೊಳ್ಳಲು ಸೋಮವಾರ ಬೆಳಗಿನ ಜಾವ 5 ಗಂಟೆಗೆ ಹೊರಟು ನಿಂತಿದ್ದರು. ಇದೇ ವೇಳೆ ಲೋಕಾಯುಕ್ತ ಸಿಬ್ಬಂದಿ ದಾಳಿ ಮಾಡಿದ್ದಾರೆ. ಬ್ಯಾಂಕ್‌ನಲ್ಲಿರುವ ಪ್ರದೀಪ್ ಅವರ ಲಾಕರ್ ಅನ್ನು ಬುಧವಾರ ತೆರೆಯಲಾಗುವುದು ಎಂದು ಮೂಲಗಳು ತಿಳಿಸಿವೆ.



ಗದಗ ಶಹರ ಠಾಣೆಯ ಸಿಪಿಐ ಡಿ.ಬಿ.ಪಾಟೀಲ ಮನೆಯಲ್ಲಿ ಜಪ್ತಿ ಮಾಡಿರುವ ನಗದು ಹಾಗೂ ಚಿನ್ನಾಭರಣ ಲೆಕ್ಕ ಮಾಡಿದ ತನಿಖಾಧಿಕಾರಿಗಳ ತಂಡ

ಕಲಬುರಗಿ ಜಿಲ್ಲೆಯ ಸಣ್ಣೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಮಚಂದ್ರ ಮಸರಕಲ್ ಬಳಿ ₹2.18 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದ್ದು, ಅವರು 3 ನಿವೇಶನ, 3 ವಾಸದ ಮನೆ ಹಾಗೂ 35 ಎಕರೆ ಕೃಷಿ ಜಮೀನು ಹೊಂದಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ.

ಎಂಟು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಆಸ್ತಿಯ ಮಾಹಿತಿ

ಅಧಿಕಾರಿ	ಸ್ಥಿರಾಸ್ತಿ	ನಗದು	ಚಿನ್ನಾಭರಣ	ವಾಹನಗಳು	ಇತರ	ಒಟ್ಟು ಅಕ್ರಮ ಆಸ್ತಿ
ಪ್ರಕಾಶ್ ಕೆ.ಎಸ್. (ಕಾರ್ಯನಿರ್ವಾಹಕ ಎಂಜಿನಿಯರ್, ಬಿಬಿಎಂಪಿ, ಗೋವಿಂದರಾಜನಗರ ಪಶ್ಚಿಮ ವಿಭಾಗ)	₹4.22 ಕೋಟಿ	₹42 ಸಾವಿರ	₹43 ಲಕ್ಷ	₹15.70 ಲಕ್ಷ	₹88 ಲಕ್ಷ	₹5.70 ಕೋಟಿ
ಕೆ.ಜಿ.ಅಮರನಾಥ್ (ಮುಖ್ಯಾಧಿಕಾರಿ, ಪುರಸಭೆ, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ)	₹2.80 ಕೋಟಿ	₹14.75 ಲಕ್ಷ	₹40 ಲಕ್ಷ	₹38 ಲಕ್ಷ	₹12ಲಕ್ಷ	₹3.85 ಕೋಟಿ
ಮಲ್ಲಿಕಾರ್ಜುನ ಅಲ್ಲಿಪುರ (ಇ.ಇ, ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಲಬುರಗಿ)	₹3.90ಕೋಟಿ	₹2.80 ಲಕ್ಷ	₹1ಕೋಟಿ	₹35ಲಕ್ಷ	₹1.04 ಕೋಟಿ	₹6.32 ಕೋಟಿ
ರಾಮಚಂದ್ರ ಮಸರಕಲ್ (ಪಿಡಿಒ, ಸಣ್ಣೂರು ಗ್ರಾಮ ಪಂಚಾಯಿತಿ, ಕಲಬುರಗಿ ಜಿಲ್ಲಾ ಪಂಚಾಯಿತಿ)	₹1.70ಕೋಟಿ	₹1 ಲಕ್ಷ	₹8.50ಲಕ್ಷ	₹18 ಲಕ್ಷ	₹20ಲಕ್ಷ	₹2.18 ಕೋಟಿ
ಅಶೋಕ್ ಎಲ್. ವಸನಾಡ್ (ಮುಖ್ಯ ಎಂಜಿನಿಯರ್,ನೀರಾವರಿ ನಿಗಮ, ಮಲಪ್ರಭಾ ಯೋಜನಾ ವಲಯ, ಧಾರವಾಡ)	₹3.15 ಕೋಟಿ	₹1.61 ಲಕ್ಷ	₹96ಲಕ್ಷ	₹13.40 ಲಕ್ಷ	₹1.84 ಕೋಟಿ	₹6.11ಕೋಟಿ
ಲತಾಮಣಿ ಡಿ.ಬಿ (ಅಕೌಂಟ್ ಸೂಪರಿಂಟೆಂಡೆಂಟ್, ನಗರಸಭೆ , ಚಿಕ್ಕಮಗಳೂರು)	₹1.78 ಕೋಟಿ	₹1.98 ಲಕ್ಷ	₹22 ಲಕ್ಷ	₹10 ಲಕ್ಷ	₹77ಲಕ್ಷ	₹2.89 ಕೋಟಿ
ಡಿ.ಬಿ.ಪಾಟೀಲ (ಸಿಪಿಐ, ಗದಗ ಶಹರ ಪೊಲೀಸ್ ಠಾಣೆ, ಗದಗ)	₹1 ಕೋಟಿ	₹48.96 ಲಕ್ಷ	₹27ಲಕ್ಷ	₹10 ಲಕ್ಷ	₹7ಲಕ್ಷ	₹1.48ಕೋಟಿ
ಡಾ.ಪ್ರದೀಪ್ (ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ, ಕೆಎಸ್‌ಎಚ್‌ಯು, ಶಿವಮೊಗ್ಗ)	₹4.45 ಕೋಟಿ	₹10 ಸಾವಿರ	₹34.75ಲಕ್ಷ	₹30ಲಕ್ಷ	₹1.24ಕೋಟಿ	₹6.34ಕೋಟಿ

ನಾಡು-ನುಡಿಯ ರಕ್ಷಾ ಕವಚ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2 ವರ್ಷಗಳ ಸಾಧನೆ



"ದೀಕ್ಷೆ ಯ ತೊಡು ಇಂದೇ, ಕಂಕಣ ಕಟ್ಟಿಂದೇ, ಕನ್ನಡ ನಾಡೊಂದೇ, ಇನ್ನೆಂದೂ ತಾನೊಂದೇ"

ಎಂಬ ಕವಿ ಕುವೆಂಪು ಅವರ "ಕರ್ನಾಟಕ ಮಂತ್ರ ದೀಕ್ಷೆ " ಕವಿತೆಯನ್ನು ನೆನೆದು ಎರಡು ವರ್ಷಗಳ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಕನಕಗಿರಿಯ ಶಾಸಕ ಶಿವರಾಜ ಸಂಗಪ್ಪ ತಂಗಡಗಿ ಚುಕ್ಕಾಣಿ ಹಿಡಿದರು. ಅಂದು ಇಲಾಖೆಯಲ್ಲಿ ಅವರು ಇಷ್ಟೊಂದು ಬದಲಾವಣೆ ತರಬಹುದೆಂದು ಬಹುಶಃ ಯಾರೂ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಸ್ವತಃ ತಂಗಡಗಿ ಅವರೇ ಆರಂಭದಲ್ಲಿ ಈ ಖಾತೆ ಬೇಡ ಎಂದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆಯ ಮೇರೆಗೆ ಜವಾಬ್ದಾರಿ ವಹಿಸಿಕೊಂಡ ಅವರು, ಉತ್ಸಾಹಿ ಸಚಿವರಾಗಿ ಎಲ್ಲರ ಚಿತ್ತ ಇಲಾಖೆಯತ್ತ ಹರಿಯುವಂತೆ ಕೆಲಸ ಮಾಡಿದ್ದಾರೆ. ಕನ್ನಡ ನಾಡಿನ ನೆಲ, ಜಲ, ಸಂಸ್ಕೃತಿ ಮತ್ತು ಭಾಷೆಯ ಅಸ್ಮಿತೆ ಕಾಪಾಡುವ ರಕ್ಷಾ ಕವಚದಂತೆ ಸದಾ ಕಾವಲು ಪಡೆಯಾಗಿ ನಿಲ್ಲುವ ಮೂಲಕ ಇಲಾಖೆಯಲ್ಲಿ ಸಂಚಲನ ಮೂಡಿಸಿದ್ದಾರೆ

ಇಲಾಖೆಗೆ ಸಂಚಲನ ತಂದ ತಂಗಡಗಿ



'ವಿಶ್ವಮಾನವ ತತ್ವದ ಪ್ರತಿಪಾದಕ, ಜಗದ ಕವಿ, ಯುಗದ ಕವಿ ಕುವೆಂಪು ಅವರ ಕನ್ನಡ ನಾಡು-ನುಡಿ ಚಿಂತನೆ ಎಂದರೆ ಕನ್ನಡತನ ಉಳಿಯಬೇಕು, ಕನ್ನಡ ಮನಸ್ಸುಗಳು ಒಂದಾಗಬೇಕು ಮತ್ತು ಪ್ರತಿಯೊಬ್ಬರೂ ಅದರ ಮಹತ್ವವನ್ನು ಅರಿಯಬೇಕು ಎಂಬುದಾಗಿದೆ.'

ಕವಿ ಕುವೆಂಪು ಅವರ ದೃಷ್ಟಿಯಲ್ಲಿ ಕನ್ನಡ ನಾಡು ಮತ್ತು ಭಾಷೆ ಉಳಿಯಬೇಕಾದರೆ, ನಾವು ಪಡೆದ ಜ್ಞಾನವನ್ನು ಕನ್ನಡಕ್ಕಾಗಿ ಮೀಸಲಿಡಬೇಕು. ಕನ್ನಡವನ್ನು ಮೊದಲು ಇಟ್ಟುಕೊಂಡು, ನಂತರ ಇತರ ಭಾಷೆಗಳನ್ನು ಕಲಿಯಬೇಕು ಎಂಬುದು. ಇಂತಹ ಮಹತ್ವದ ನುಡಿಮುತ್ತುಗಳನ್ನು ಸದಾ ಮನನ ಮಾಡುತ್ತಾ, ಕರ್ನಾಟಕದ ಬಗೆಗಿನ ಉತ್ಕಟ ಅಭಿಮಾನ ಮತ್ತು ಬದ್ಧತೆ ತೋರುತ್ತಾ, ಅವರ ಕನ್ನಡ ಬಗೆಗಿನ ಆಗಾಧ ಪ್ರೇಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವ ರಾಜ ತಂಗಡಗಿ ಅವರು ತಮ್ಮ ಕಾಯಕದಲ್ಲಿ ತೋರಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಂಗಡಗಿ ಅವರ ಕಾರ್ಯತತ್ಪರತೆ ಮತ್ತು ದೀಕ್ಷಾ ಮನೋಭಾವವನ್ನು ಅರಿತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜವಾಬ್ದಾರಿಯನ್ನು ವಹಿಸಿದ್ದರು. ಒಂದು ರೀತಿಯಲ್ಲಿ ಸಾರಸ್ವತ ಲೋಕದ ಇಲಾಖೆಯ ಜವಾಬ್ದಾರಿ ವಹಿಸಿಕೊಳ್ಳಲು ಹಿಂದೇಟು ಹಾಕುವ ಶಾಸಕರ ನಡುವೆ ಫಿನಿಕ್ಸ್ ಹಕ್ಕಿಯಂತೆ ತಂಗಡಗಿ ಅವರು ಚಾಲೆಂಜ್ ಆಗಿ ತೆಗೆದುಕೊಂಡು ಮುನ್ನಡೆಸಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಲ್ಲಿ ಹಲವು ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡಿದ್ದಲ್ಲದೆ, ಶತಮಾನಗಳ ಇತಿಹಾಸವಷ್ಟೇ ಅಲ್ಲ, ಆಖಂಡ ಭಾರತದ ಭಾಷೆಗಳಲ್ಲಿ ಪುರಸ್ಕೃತ ಶಾಸ್ತ್ರೀಯ ಭಾಷೆ ಸ್ಥಾನ ಮಾನ ಹೊಂದಿರುವ ಕನ್ನಡ ಭಾಷೆ, ಪರಂಪರೆ, ಸಂಸ್ಕೃತಿ, ನೆಲ-ಜಲ ಕಾಪಾಡುವಲ್ಲಿ ಯಶಸ್ವಿಯಾಗಿದ್ದಾರೆ. ರಾಜ, ಮಹಾರಾಜರಿಂದ ಹಿಡಿದು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಮುಖ್ಯಮಂತ್ರಿಗಳು ಮತ್ತು ಸಚಿವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

> 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡಿಗರ ಒಳಿತಿಗಾಗಿ, ನೆಲ-ಜಲ, ಭಾಷೆಗಾಗಿ ಸದಾ ಕಾರ್ಯನಿರ್ವಹಿಸಲಿದೆ. ಕನ್ನಡ ಮತ್ತು ಕನ್ನಡಿಗರು ಜಾಗತಿಕ ಮಟ್ಟದಲ್ಲಿ ಯಶಸ್ವಿಹೊಂದಿ ಸುಭಿಕ್ಷವಾಗಿರಬೇಕು. ನಾಡು, ನುಡಿ ವಿಚಾರದಲ್ಲಿ ನಮ್ಮ ಇಲಾಖೆ ಹಲವು ಯೋಜನೆ ಹಾಕಿಕೊಂಡು ಕಾರ್ಯ ನಿರ್ವಹಿಸುತ್ತಿದೆ.'
>
> **ಶಿವರಾಜ ತಂಗಡಗಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ಕನ್ನಡ ನಾಡು, ನುಡಿ, ಭಾಷೆ, ಸಂಸ್ಕೃತಿ ರಕ್ಷಣೆಗೆ ಬದ್ಧ

"ಕನ್ನಡ ನಾಡು, ನುಡಿ, ಜಲದ ವಿಚಾರದಲ್ಲಿ ಯಾವುದೇ ರಾಜಿಯಿಲ್ಲದೆ ಕೆಲಸ ಮಾಡುವ ಸಂಕಲ್ಪವನ್ನ ಸಚಿವ ಶಿವರಾಜ ತಂಗಡಗಿ ಹೊಂದಿದ್ದಾರೆ. ನಾಡಿನ ಒಳಗಿನ ಕನ್ನಡಿಗರ ಹಿತರಕ್ಷಣೆ ಮಾತ್ರವಲ್ಲ, ಗಡಿನಾಡ ಕನ್ನಡಿಗರು ಹಾಗೂ ಹೊರನಾಡ ಕನ್ನಡಿಗರ ಜೊತೆಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸದಾ ಸಂಪರ್ಕದಲ್ಲಿದ್ದುಕೊಂಡು ಸಮಸ್ತ ಕನ್ನಡಿಗರ ಒಳಿತಿಗಾಗಿ ಕಾರ್ಯ ನಿರ್ವಹಿಸಲಿದೆ ಎನ್ನುತ್ತಾರೆ ಸಚಿವರು.

ಕನ್ನಡ ಮತ್ತು ಕನ್ನಡಿಗರು ಜಾಗತಿಕ ಮಟ್ಟದಲ್ಲಿ ಸದಾ ಸುಭಿಕ್ಷವಾಗಿರಬೇಕೆಂಬುದು ಸಚಿವ ಶಿವರಾಜ ತಂಗಡಗಿಯವರ ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೆಂದರೆ ಒಂದಷ್ಟು ಜಯಂತಿಗಳನ್ನು ಆಚರಿಸಿಕೊಂಡು, ವರ್ಷಕ್ಕೊಂದು ಕನ್ನಡ ರಾಜ್ಯೋತ್ಸವ ಆಚರಿಸಿ, ಅಕಾಡೆಮಿಗಳ ಮೇಲುಸ್ತುವಾರಿ ನೋಡಿಕೊಂಡು, ಇನ್ನೊಂದಷ್ಟು ಪ್ರಶಸ್ತಿಗಳನ್ನು ನೀಡುವ ಇಲಾಖೆಯೆಂದೇ ಪ್ರಚಲಿತದಲ್ಲಿತ್ತು. ಆದರೆ ಇದು ಕನ್ನಡ ನಾಡಿನ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ರಕ್ಷಕನಾಗಿ ಎಲ್ಲರನ್ನೂ ಹೇಗೆ ಜೊತೆಗೆ ಕರೆದೊಯ್ಯುವ ಅತ್ಯಂತ ಮಹತ್ವದ ಜವಾಬ್ದಾರಿಯನ್ನು ಹೊಂದಿರುವ ಇಲಾಖೆ ಎಂಬುದನ್ನು ಸಚಿವ ತಂಗಡಗಿ ಅವರು ತೋರಿಸಿಕೊಟ್ಟಿದ್ದಾರೆ.

ಸಚಿವ ತಂಗಡಗಿ ಅವರು ಪಕ್ಷಾತೀತವಾಗಿ ರಾಜ್ಯದ ಎಲ್ಲಾ ಭಾಷಾಭಿಮಾನಿಗಳನ್ನೂ, ಸಾಹಿತಿಗಳನ್ನೂ, ಚಿಂತಕರನ್ನೂ ನಾಡು ನುಡಿಯನ್ನು ಕಟ್ಟುವ ಕಾಯಕದಲ್ಲಿ ಒಳಗೊಳ್ಳುವಂತೆ ಮಾಡಿರುವುದು ಅವರ ಉತ್ಸಾಹಕ್ಕೆ ಹಿಡಿದ ಕೈಗನ್ನಡಿ. ರಾಜ್ಯದ ನಾಲ್ಕು ವಲಯಗಳಲ್ಲಿ ಸಾಹಿತಿ ಹಾಗೂ ಚಿಂತಕರನ್ನು ಒಂದೆಡೆ ಸೇರಿಸಿ ಸಭೆ ನಡೆಸಿ, ವರ್ಷವಿಡೀ ಕನ್ನಡ ನಾಡಿನ ಸುವರ್ಣ ಸಂಭ್ರಮೋತ್ಸವವನ್ನು ಆಚರಿಸಲು ರೂಪುರೇಷೆ ಸಿದ್ಧಪಡಿಸಿದ ಸಚಿವರು, ಕರ್ನಾಟಕ ರಾಜ್ಯವೆಂದು ನಾಮಕರಣವಾಗಿ 50 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಇಡೀ ವರ್ಷ 'ಸುವರ್ಣ ಸಂಭ್ರಮಾಚರಣೆ'ಯು ಸರ್ಕಾರದ ವತಿಯಿಂದ ಯಶಸ್ವಿಯಾಗಿ ನಡೆಸಲು ಕಾರಣಕರ್ತರಾಗಿದ್ದಾರೆ.

ಹಲ್ಮಿಡಿ ಶಾಸನ

ಕನ್ನಡದಲ್ಲಿ ಪತ್ತೆಯಾದ ಅತ್ಯಂತ ಪುರಾತನ ಶಾಸನವಾದ ಹಲ್ಮಿಡಿ ಶಾಸನಕ್ಕೆ ಗೌರವ ಸಲ್ಲಿಸಲು ಶಿವರಾಜ ತಂಗಡಗಿಯವರು ಈ ಶಾಸನದ ಪ್ರತಿಕೃತಿಯನ್ನು ರಾಜ್ಯದ ಎಲ್ಲ 31 ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸ್ಥಾಪಿಸುವ ಕೆಲಸ ಈಗಾಗಲೇ ಆಗಿದೆ. ಹಲವಾರು ಜಿಲ್ಲೆಗಳಲ್ಲಿ ಶಿಲಾಫಲಕ ಉದ್ಘಾಟಿಸಿ ಸಾಧನೆ ಮೆರೆದಿರುವ ಇಲಾಖೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಈ ಫಲಕಗಳನ್ನು ತಯಾರಿಸಿದೆ. ಅಲ್ಲದೇ, ಎಲ್ಲ ಜಿಲ್ಲೆಗಳಲ್ಲಿ ಸಾಹಿತಿಗಳು, ಚಿಂತಕರ ಮನೆಗೆ ಭೇಟಿ ನೀಡಿದ್ದಾರೆ. ವರ್ಷವಿಡೀ ರಾಜ್ಯದ ನಾಲ್ಕು ವಲಯಗಳಲ್ಲಿ ಸಾಹಿತಿ, ಚಿಂತಕರ ಜತೆ ಸಭೆ ನಡೆಸಿ ನಾಡಿನ ಸಾಹಿತ್ಯ, ಸಂಸ್ಕೃತಿಗೆ ಸಲಹೆ-ಸೂಚನೆಗಳನ್ನು ಪಡೆದಿದ್ದಾರೆ.

ಶಿವರಾಜ ತಂಗಡಗಿ ಅವರ ಪರಿಶ್ರಮ-ಸಾಧನೆಗಳು

- ಸಂಸತ್ತಿನ ಕಲ್ಪನೆಯನ್ನು ನೀಡಿದ್ದ ಜಗಜ್ಯೋತಿ ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ರಾಯಭಾರಿ ಎಂದು ಘೋಷಿಸುವಲ್ಲಿ ಶಿವರಾಜ ತಂಗಡಗಿಯವರ ಪರಿಶ್ರಮವಿದೆ.
- ನಾಡಿನ ಶಕ್ತಿಸೌಧವಾದ ವಿಧಾನಸೌಧದ ಮುಂದೆ ನಾಡದೇವಿ ಭುವನೇಶ್ವರಿಯ ಭವ್ಯ
- ಕಂಚಿನ ಪ್ರತಿಮೆ ಸ್ಥಾಪನೆ ಹಿಂದೆ ಸಚಿವರ ಇಚ್ಛಾಶಕ್ತಿ ಅಡಗಿದೆ.
- ಹಿಂದಿನ ಸರ್ಕಾರ ಘೋಷಿಸಿ, ಪ್ರದಾನ ಮಾಡದೆ ಬಿಟ್ಟಿದ್ದ ಪ್ರಶಸ್ತಿಗಳನ್ನೆಲ್ಲವನ್ನೂ ಪ್ರದಾನ ಮಾಡಿದ್ದಾರೆ.
- ಕಳೆದ ಸರ್ಕಾರ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ನೇಮಿಸದೆ ನಿರ್ಲಕ್ಷ್ಯ ವಹಿಸಿದ್ದ ಅಧ್ಯಕ್ಷರು ಮತ್ತು ನಿರ್ದೇಶಕರನ್ನೆಲ್ಲ ನೇಮಿಸಿ, ಕನ್ನಡದ ಕೆಲಸ ಚುರುಕುಗೊಳ್ಳುವಂತೆ ಮಾಡಿದ್ದಾರೆ.
- ನಿರ್ಲಕ್ಷಿತ ಗಡಿ ಭಾಗ ಕಾಸರಗೋಡಿಗೆ ಭೇಟಿ ನೀಡಿ, ಗೋವಾ ಕನ್ನಡಿಗರ ಅಳಲನ್ನೂ ಆಲಿಸಿ, ಮಹಾರಾಷ್ಟ್ರದ ಗಡಿಯಲ್ಲಿರುವ ಕನ್ನಡಿಗರ ಜೊತೆಗೂ ಸಭೆ ನಡೆಸಿದ್ದಾರೆ.
- ಗಡಿನಾಡು ಮತ್ತು ಹೊರನಾಡ ಕನ್ನಡಿಗರನ್ನು ಒಳಗೊಂಡು ಸಮಗ್ರ ಕನ್ನಡ ನಾಡಿನ ನಿರ್ಮಾಣದ ಸಂಕಲ್ಪದಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಾರೆ.
- ಕಾರ್ಪೊರೇಟ್ ಕಂಪನಿಗಳು, ಅಂಗಡಿ ಮತ್ತು ವಾಣಿಜ್ಯ ಸಂಕೀರ್ಣಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಇರಲೇಬೇಕೆಂಬ ರಾಜ್ಯ ಸರ್ಕಾರ ಶಾಸನ ರೂಪಿಸಲು ತೆರೆಮರೆಯಲ್ಲಿ ಕಾರ್ಯನಿರ್ವಹಿಸಿದ ಪ್ರಯತ್ನ ತಂಗಡಗಿಯವರದ್ದು.



ವಿಧಾನಸೌಧಕ್ಕೆ ಮೆರುಗು ತಂದ ಭುವನೇಶ್ವರಿ ಪ್ರತಿಮೆ

ವಿಧಾನಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿ ತಾಯಿ ಪ್ರತಿಮೆ ಸ್ಥಾಪಿಸಿ ಕನ್ನಡಿಗರ ಬಹುದಿನದ ಬೇಡಿಕೆ ಈಡೇರಿಸಿದ ಕೀರ್ತಿ ಸಚಿವ ಶಿವರಾಜ ತಂಗಡಗಿ ಅವರಿಗೆ ಸಲ್ಲುತ್ತದೆ. 'ಕರ್ನಾಟಕ ನಾಮಕರಣ'ದ ಸುವರ್ಣ ಸಂಭ್ರಮದಲ್ಲಿ ಇದು ಈಡೇರಿದ್ದು ಮತ್ತಷ್ಟು ಮೆರುಗು ತಂದಿದೆ. ಶಕ್ತಿಸೌಧದ ಪಶ್ಚಿಮ ದ್ವಾರದ ಬಳಿ 25 ಅಡಿ ಎತ್ತರದ ನಾಡದೇವಿ ಭುವನೇಶ್ವರಿಯ ಕಂಚಿನ ಪ್ರತಿಮೆ ಸುಪ್ರಸಿದ್ಧ ವಿಧಾನಸೌಧದ ಆಕರ್ಷಣೆ ದ್ವಿಗುಣಗೊಳಿಸಿದೆ. ನೆಲಮಟ್ಟದಿಂದ ಪ್ರತಿಮೆ ಎತ್ತರ 43 ಅಡಿ ಆರು ಇಂಚು, ಪ್ರತಿಮೆ ಲೋಹದ ತೂಕ ಒಟ್ಟು 37.50 ಟನ್. ಇನ್ನೊಂದು ವಿಶೇಷವೆಂದರೆ ಪ್ರತಿಮೆ ಹಿಂಬದಿ ಕರ್ನಾಟಕ ನಕ್ಷೆಗೆ 11.50 ಟನ್ ಕಂಚು ಬಳಕೆ ಮಾಡಲಾಗಿದೆ ಎಂಬುದು. ಹೊಯ್ಸಳ ಶೈಲಿ ಕಲ್ಲಿನ ಪೀಠ, ಪ್ರದಕ್ಷಿಣ ಪಥದ ಕರ್ಣಕೂಟ, ಅಲಂಕಾರಿಕ ಕಲ್ಲಿನ ಕೈಪಿಡಿ ನಿರ್ಮಿಸಲಾಗಿದೆ. ಮುಂಭಾಗದಲ್ಲಿ ಭೌಗೋಳಿಕ ನಕ್ಷೆ, ಹಿಂಬದಿ ನಾಡಗೀತೆ ಕೆತ್ತಲಾಗಿದೆ. ಹೊಯ್ಸಳ ಲಾಂಛನ, ವೈಜಯಂತಿ ಮಾಲೆ, ಕಂಠಿಹಾರ, ಗಂಡಭೇರುಂಡವುಳ್ಳ ಪ್ರತಿಮೆ ಸುತ್ತಲೂ ಉದ್ಯಾನವನ ನಿರ್ಮಿಸಲಾಗಿರುವುದು ಇಲಾಖೆ ಸಾಧನೆ.





ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಸಾಹಿತಿ ಭಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿದರು.





ಕಲಾವಿದರು, ವಿಧವೆಯರ ಮಾಸಾಶನ ಹೆಚ್ಚಳ: ಸಿಎಂ ಸಿದ್ಧರಾಮಯ್ಯ ನೇತೃತ್ವದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ, ಕಲಾವಿದರು, ಸಾಹಿತಿಗಳು ಮತ್ತು ವಿಧವೆಯರಿಗೆ ನೀಡುತ್ತಿದ್ದ ಮಾಸಾಶನವನ್ನು ಹೆಚ್ಚಳ ಮಾಡಿಸಿದ್ದಾರೆ. ಕಲಾವಿದರ ಮಾಸಾಶನ ₹ 2,000 ದಿಂದ ₹2,500ಕ್ಕೆ, ವಿಧವೆಯರ ಮಾಸಾಶನ ₹ 500 ರಿಂದ ₹ 1,000ಕ್ಕೆ ಹೆಚ್ಚಳ ಮಾಡಲಾಗಿದೆ.

ಯಾವುದೇ ಅರ್ಹರು ಮಾಸಾಶನದಿಂದ ವಂಚಿತರಾಗಬಾರದು ಎಂದು ಸಚಿವರು ಸೂಚಿಸಿರುವುದರಿಂದ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ಅರ್ಹರನ್ನು ಹುಡುಕಿ ಪಟ್ಟಿಗೆ ಸೇರಿಸುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಮಾಸಾಶನ ಪಡೆಯುತ್ತಿದ್ದ ಸಾಹಿತಿ ಮತ್ತು ಕಲಾವಿದರ ಸಂಖ್ಯೆ ಎರಡು ವರ್ಷಗಳ ಹಿಂದೆ 10 ಸಾವಿರ ಇದ್ದದ್ದು, ಈಗ 13,000 ಕ್ಕೂ ಅಧಿಕವಾಗಿದೆ.

ರಾಜ್ಯೋತ್ಸವ ಪ್ರಶಸ್ತಿ ಘನತೆ ಹೆಚ್ಚಿಸುವ ಗುರಿ?: ಸಚಿವ ಶಿವರಾಜ ತಂಗಡಗಿ ಅವರು ಕಳೆದ ಎರಡು ವರ್ಷಗಳಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಅರ್ಹರು ಆಯ್ಕೆಯಾಗುವಂತೆ ನೋಡಿಕೊಂಡಿದ್ದಲ್ಲದೆ, ವಿವಾದಕ್ಕೆ ಆಸ್ಪದ ನೀಡದೆ ಪ್ರಶಸ್ತಿ ಪ್ರದಾನ ಮಾಡಿಸಿದ್ದಾರೆ. ಒಂದು ಹೆಜ್ಜೆ ಮುಂದಿರಿಸಿ, ಈ ವರ್ಷದಿಂದ ಅರ್ಜಿಗಳನ್ನು ಕರೆಯದೆ ಸಾಧಕರನ್ನು ಸರ್ಕಾರವೇ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡುವಂತೆ ನೋಡಿಕೊಳ್ಳುವ ಬಗ್ಗೆ ಚಿಂತನೆ ನಡೆಸಿದ್ದಾರೆ. ಸಾಧಕರು ಇಲಾಖೆಗೆ ಅರ್ಜಿ ಸಲ್ಲಿಸಿ ಪ್ರಶಸ್ತಿ ಪಡೆಯುವುದು ಮುಜುಗರ ತರುವ ವಿಚಾರ. ಆದ್ದರಿಂದ ಸರ್ಕಾರವೇ ಅವರನ್ನು ಗುರುತಿಸಿ ಪ್ರಶಸ್ತಿ ನೀಡಿದರೆ ಅದರ ಘನತೆ ಹಾಗೂ ಮೌಲ್ಯ ಹೆಚ್ಚುತ್ತದೆ ಎಂಬುದು ಸಚಿವರ ಚಿಂತನೆ.

ನಾಮಫಲಕಗಳಲ್ಲಿ ಕನ್ನಡವೇ ಸಾರ್ವಭೌಮ: ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎಂದು ಎಲ್ಲಾ ಸರ್ಕಾರಗಳೂ ಹೇಳುತ್ತಾ ಬಂದಿವೆ. ಆದರೆ ರಾಜ್ಯದಲ್ಲಿರುವ ಅನೇಕ ಕಾರ್ಪೊರೇಟ್ ಕಂಪನಿಗಳು, ಅಂಗಡಿ, ಹೋಟೆಲ್‌ಗಳು ಆಂಗ್ಲ ಭಾಷೆಯಲ್ಲಿ ನಾಮಫಲಕಗಳನ್ನು ಹಾಕಿಕೊಂಡು, ಕನ್ನಡವನ್ನೂ ಕನ್ನಡಿಗರನ್ನೂ ಕಡೆಗಣಿಸಿ ವ್ಯಾಪಾರ ಮಾಡುತ್ತಿದ್ದವು.



> 'ಸರ್ಕಾರ ರಚನೆಗೊಂಡ ಬಳಿಕ ನಮ್ಮ ಇಲಾಖೆಯಲ್ಲಿ ಉತ್ತಮ ಕಾರ್ಯಗಳಾಗಿವೆ. ಮುಖ್ಯವಾಗಿ ಭುವನೇಶ್ವರಿ ಪುತ್ಥಳಿ ಅನಾವರಣ ಹಾಗೂ ಸುವರ್ಣ ಸಂಭ್ರಮ ರಥಯಾತ್ರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅತಿ ದೊಡ್ಡ ಹೆಗ್ಗಳಿಕೆಯಾಗಿದೆ. ಹಾಗೆಯೇ ಎಲ್ಲ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಹಲ್ಮಿಡಿ ಶಾಸನದ ಪ್ರತಿಕೃತಿ ಸ್ಥಾಪನೆ ಮಾಡಿರುವುದು ಇಲಾಖೆಗೆ ಹೊಸ ಆಯಾಮ ನೀಡಿದೆ. ಇಲಾಖೆಯಡಿ ಬರುವ ಎಲ್ಲ ಅಕಾಡೆಮಿಗಳು ಕ್ರಿಯಾಶೀಲತೆಯಿಂದ ನೂತನ ದೃಷ್ಟಿಕೋನ ಮತ್ತು ಚಿಂತನೆಯಿಂದ ಕಾರ್ಯನಿರ್ವಹಿಸುತ್ತಿವೆ.'
>
> **ಕೆ.ಎಂ. ಗಾಯತ್ರಿ,** ನಿರ್ದೇಶಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡನಾಡಿನಲ್ಲಿರುವ ಎಲ್ಲ ವಾಣಿಜ್ಯ ಮಳಿಗೆಗಳ ನಾಮಫಲಕಗಳು ಕನ್ನಡದಲ್ಲಿರಬೇಕು ಎಂಬ ಕೂಗು ಕನ್ನಡ ಹೋರಾಟಗಾರರಿಂದ ಕೇಳಿಬರುತ್ತಿತ್ತು. ಈ ಕುರಿತು ಸಂಕಲ್ಪ ಮಾಡಿದ ಸಚಿವ ಶಿವರಾಜ ತಂಗಡಗಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕಕ್ಕೆ ತಿದ್ದುಪಡಿ ತಂದು, ನಾಮಫಲಕಗಳಲ್ಲಿ ಶೇ.60ರಷ್ಟು ಜಾಗದಲ್ಲಿ ಕಡ್ಡಾಯವಾಗಿ ಕನ್ನಡ ಇರಬೇಕೆಂಬ ನಿಯಮ ಜಾರಿಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಿಜಲಿಂಗಪ್ಪ ಮನೆ ಈಗ ಸರ್ಕಾರಿ ಸ್ಮಾರಕ: ಕರ್ನಾಟಕ ಕಂಡ ಶ್ರೇಷ್ಠ ರಾಜಕಾರಣಿ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಅವರ ಚಿತ್ರದುರ್ಗದಲ್ಲಿರುವ ಮನೆ ಸ್ಮಾರಕ ಮಾಡಲು ನಿರ್ಧರಿಸಲಾಗಿತ್ತು. ಆದರೆ ಹಿಂದಿನ ಸರ್ಕಾರ ಅವರ ಮನೆಯನ್ನು ಖರೀದಿಸಲು ಸಹ ಮುಂದಾಗಿರಲಿಲ್ಲ. ಅನೇಕ ಬಾರಿ ಅವರ ಕುಟುಂಬ ಮನವಿ ಮಾಡಿದ್ದರೂ ಪ್ರಯೋಜನ ವಾಗಿರಲಿಲ್ಲ. ಆದರೆ ಸಚಿವ ಶಿವರಾಜ ತಂಗಡಗಿಯವರು ಮುತುವರ್ಜಿ ವಹಿಸಿ ಅನೇಕ ಬಾರಿ ಸಭೆಗಳನ್ನು ನಡೆಸಿ ಅಂತಿಮವಾಗಿ ನಿಜಲಿಂಗಪ್ಪ ಅವರ ಮನೆಯನ್ನು ಸರ್ಕಾರದಿಂದ ಖರೀದಿಸಿ ಅವರ ನೆನಪನ್ನು ಜನರ ಮನದಲ್ಲಿ ಉಳಿಯುವಂತೆ ಮಾಡಿದ್ದಾರೆ.

ಶರಣರ ವೈಭವ ಕಾರ್ಯಕ್ರಮ: ಕೂಡಲಸಂಗಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ಅನುಭವ ಮಂಟಪ-ಬಸವಾದಿ ಶರಣರ ವೈಭವ ಕಾರ್ಯಕ್ರಮ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ. ಅಣ್ಣ ಬಸವಣ್ಣನ ವಿಚಾರಧಾರೆಗಳು, ಶರಣರು ನಾಡಿಗೆ ನೀಡಿದ ಕೊಡುಗೆಗಳ ಮರುಕಳಿಸಿದ ಕಾರ್ಯಕ್ರಮ ಇದಾಗಿತ್ತು. ನಾನಾ ಕಡೆಗಳಿಂದ ಬಂದ ಜನರು ಕಾರ್ಯಕ್ರಮವನ್ನು ಕಣ್ತುಂಬಿಕೊಂಡು ಇಂತಹ ಕಾರ್ಯಕ್ರಮಗಳು ಮರುಕಳಿಸಬೇಕು ಎಂಬುದು ಜನರ ಅಭಿಪ್ರಾಯ. ಇದು ಒಂದೆಡೆಯಾದರೆ ಇತ್ತೀಚಿನ ದಿನಗಳಲ್ಲಿ ಜಾತಿಗಳ ಮಧ್ಯೆ, ಧರ್ಮಗಳ ಮಧ್ಯೆ ವಿಷಬೀಜ ಬಿತ್ತುವ ಕೆಲಸ ನಡೆಯುತ್ತಿದೆ ಅದಕ್ಕೆ ಬಸವಣ್ಣನವರ ವಿಚಾರಧಾರೆಯಿಂದ ಮಾತ್ರ ಎಳ್ಳು ನೀರು ಬಿಡಲು ಸಾಧ್ಯ ಎಂದು ಸಚಿವರು ಹೇಳಿದ್ದು ಪ್ರಸ್ತುತ ಸಂದರ್ಭಕ್ಕೆ ಹಿಡಿದ ಕೈಗನ್ನಡಿ.

ಗೋವಾದಲ್ಲಿ ಕನ್ನಡ ಭವನ: ಗೋವಾದಲ್ಲಿ ಕನ್ನಡಭವನ ನಿರ್ಮಾಣವಾಗಬೇಕು ಎನ್ನುವ ಕೂಗು ಬಹಳ ವರ್ಷಗಳದ್ದು. ಇದರ ಬಗ್ಗೆ ಹಿಂದಿನ ಸರ್ಕಾರ ಕೊಂಚವೂ ಗಮನಹರಿಸಿರಲಿಲ್ಲ. ಶಿವರಾಜ ತಂಗಡಗಿ ಅವರು ಸಚಿವರಾದ ನಂತರ ಸಂಕಲ್ಪ ಮಾಡಿ, ಗೋವಾಗೆ ಭೇಟಿ ಕೊಟ್ಟು ಶೀಘ್ರದಲ್ಲಿಯೇ ಕನ್ನಡ ಭವನ ನಿರ್ಮಾಣ ಮಾಡುವುದಾಗಿ ಹೇಳಿರುವುದು ಅಲ್ಲಿನ ಕನ್ನಡಿಗರ ಕನಸು ಮತ್ತೊಮ್ಮೆ ಚಿಗುರೊಡೆದಂತೆ ಆಗಿದೆ. ಅಲ್ಲಿ ಕನ್ನಡ ಭವನ ನಿರ್ಮಾಣವಾದರೆ ಕನ್ನಡಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳೂ ಅಲ್ಲಿಯೇ ನಡೆಸಲು ಅವರಿಗೆ ಅನುಕೂಲವಾಗುತ್ತದೆ ಎನ್ನುವುದು ಸಚಿವರ ಅಭಿಲಾಷೆ.

ಜೀವಮಾನ ಸಾಧನೆ ಪ್ರಶಸ್ತಿಗೆ ಮರುಜೀವ

ಹಿಂದಿನ ಸರ್ಕಾರ ನಾನಾ ರೀತಿ ನೆಪಗಳನ್ನು ನೀಡಿ 'ಜೀವಮಾನ ಸಾಧನೆ' ಪ್ರಶಸ್ತಿಗಳನ್ನು ನೀಡದೆ ಹಾಗೆಯೇ ಕೈಬಿಟ್ಟಿತ್ತು. ತಂಗಡಗಿ ಅವರು ಸಚಿವರಾದ ತಕ್ಷಣ ಬಾಕಿ ಇದ್ದ 'ಬಸವ ರಾಷ್ಟ್ರೀಯ ಪುರಸ್ಕಾರ' ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಮರುಜನ್ಮ ನೀಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಎರಡು, ಮೂರು ವರ್ಷಗಳಿಂದ ಪ್ರಾಧಿಕಾರ ಮತ್ತು ಅಕಾಡೆಮಿಗಳಿಗೆ ಅಧ್ಯಕ್ಷರು ಮತ್ತು ನಿರ್ದೇಶಕರನ್ನ ನೇಮಿಸಿರಲಿಲ್ಲ. ಆದರೆ ಸಚಿವರು ಕೂಡಲೇ ಪ್ರಾಧಿಕಾರ ಮತ್ತು ಅಕಾಡೆಮಿಗಳಿಗೆ ಅಧ್ಯಕ್ಷರ ನೇಮಕ ಮಾಡುವ ಮೂಲಕ ಸಾಹಿತ್ಯ ಚಟುವಟಿಕೆಗಳಿಗೆ ವೇಗ ನೀಡಿದರು. ಅಕಾಡೆಮಿಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎನ್ನುವ ಮೇಲುಸ್ತುವಾರಿಯನ್ನೂ ಸಹ ಸಚಿವರು ವಹಿಸಿಕೊಂಡು ಮಾಡುತ್ತಿರುವುದು ಅವರ ಕಾರ್ಯದಕ್ಷತೆಯನ್ನು ತೋರಿಸುತ್ತದೆ. ಇದರಿಂದಾಗಿ ನಾಡಿನಲ್ಲಿ ಸಾಂಸ್ಕೃತಿಕ ಕಲರವ ಮತ್ತಷ್ಟು ಹೆಚ್ಚಾಗಿದೆ.









ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಕೃಷ್ಣಪ್ಪ, ಸದಸ್ಯರಾದ ಶಿವಣ್ಣ, ಸುಜಾತ.ಎಸ್.ಎಲ್, ಅಶ್ವಿನಿ.ಕೆ. ಎನ್, ಮಾನಸ.ಬಿ.ಆರ್, ಮಾಲ.ಎಂ ಇದ್ದರು.

‘ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಯತ್ನ’

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಾತನೂರು ಗ್ರಾಮ ಪಂಚಾಯಿತಿಯಿಂದ ಆಯೋಜಿಸಿದ್ದ 2025-26ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆಯನ್ನು ಪಂಚಾಯಿತಿ ಅಧ್ಯಕ್ಷ ಎಂ.ಕೃಷ್ಣಪ್ಪ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ಗ್ರಾಮಗಳಲ್ಲಿ ಕಸ ಸಂಗ್ರಹಣೆ ಶುಲ್ಕ, ದಂಡ ವಸೂಲಿ ಹಾಗೂ ವಿಂಗಡಿಸಿರುವ ಘನತ್ಯಾಜ್ಯ ನಿರ್ವಹಣೆ ಮಾಡಿ, ಮಾರಾಟ ಮಾಡಿರುವುದರಿಂದ ಪಂಚಾಯಿತಿಗೆ ವಾರ್ಷಿಕ ₹7.82 ಲಕ್ಷ ಆದಾಯ ಬಂದಿದೆ ಎಂದರು.

ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ವಾರ್ಡ್ ಮಟ್ಟದ ಸಭೆ ನಡೆಸಿದ್ದು, , ಸಾರ್ವಜನಿಕರಿಂದ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಗಣಿಸಿ, ಕಾಮಗಾರಿಗಳಿಗೆ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ 35 ವಿದ್ಯಾರ್ಥಿಗಳಿಗೆ ತಲಾ ₹5 ಸಾವಿರ ಮೊತ್ತದ ಪ್ರೋತ್ಸಾಹಧನದ ಚೆಕ್ ಹಾಗೂ ಪರಿಶಿಷ್ಟ ಜಾತಿ-ಪಂಗಡದ ಮೂವರು ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಸ್ತ್ರೀಶಕ್ತಿ ಸ್ವಸಹಾಯ ಗುಂಪಿನ ಸದಸ್ಯರಿಗೆ ಪ್ರೋತ್ಸಾಹಧನದ ಚೆಕ್ ಹಾಗೂ ಸಾತನೂರು ಗ್ರಾಮದ ನಿವಾಸಿಗಳಿಗೆ ಒಣ-ಹಸಿ ಕಸ ಸಂಗ್ರಹಿಸಲು ಕಸದ ಬುಟ್ಟಿಗಳನ್ನು ನೀಡಲಾಯಿತು.

ಪಂಚಾಯಿತಿ ಉಪಾಧ್ಯಕ್ಷೆ ಜಹೀರ ತಸ್ನೀಮ್, ಸದಸ್ಯರಾದ ಮುನಿತಿಮ್ಮರಾಯಪ್ಪ, ಮಾನಸ ಬಿ.ಆರ್., ಸುಶ್ಮಿತಾ ಎನ್., ಸುಜಾತಾ.ಎಸ್.ಎಲ್, ಶಿವಣ್ಣ, ಅಶ್ವಿನಿ. ಕೆ.ಎನ್., ಮಾಲಾ ಎಂ., ನಾರಾಯಣಸ್ವಾಮಿ.ಎನ್, ಪಿಡಿಒ ಮಮತಾ ಬಿ. ಮತ್ತಿತರರು ಉಪಸ್ಥಿತರಿದ್ದರು.

ಸಂಚಾರಿ ಆರೋಗ್ಯ ಘಟಕ ಸ್ಥಾಪನೆಗೆ ಅಸ್ತು

ಬೆಂಗಳೂರು: ದುರ್ಗಮ, ಸಂಪರ್ಕರಹಿತ ಪ್ರದೇಶಗಳ ಜನರಿಗೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ಪ್ರಾಥಮಿಕ ಆರೋಗ್ಯ ಆರೈಕೆ ಸೇವೆ ಒದಗಿಸುವ ಯೋಜನೆಗೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದ್ದು, ₹15.97 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. ಅಗತ್ಯ ಅನುದಾನವನ್ನು ಎಸ್‌ಸಿಎಸ್‌ಪಿ ಟಿಎಸ್‌ಪಿ) ಅನುದಾನದಿಂದ ಭರಿಸಬೇಕು ಎಂದು ಸೂಚಿಸಿದೆ.

ಅಗತ್ಯ ವೈದ್ಯರು, ಶುಶ್ರೂಷಕರು, ಪ್ರಯೋಗಾಲಯದ ತಂತ್ರಜ್ಞರು, ಸಹಾಯಕರನ್ನು ಕಡ್ಡಾಯ ಗ್ರಾಮೀಣ ಸೇವೆಯಡಿ ನೇಮಕ ಮಾಡಿಕೊಳ್ಳಬೇಕು. ತಿಂಗಳಿಗೆ ಒಮ್ಮೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ಭೇಟಿ ನೀಡಿ, ಗ್ರಾಮದಲ್ಲಿರುವ ಸರ್ಕಾರಿ ಕಟ್ಟಡದ ಕೊಠಡಿ ಬಳಸಿಕೊಂಡು ಆರೋಗ್ಯ ತಪಾಸಣೆ ಮಾಡಬೇಕು ಎಂದು ಇಲಾಖೆ ಸೂಚಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ELITE PUBLIC SCHOOL Kempegowda Layout Laggere Bengaluru requires BSc/MSc, BEd (Physics) Qualified Teachers: 9447727526/ 9980200444

WANTED TRAINED lady teachers for Primary/High school for all subjects shrimaitri@gmail.com 8892949404

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.org.in

Applications are invited for the post of teaching faculty for the following Departments in MES Institute of Management, #25/1, 17th Main, 2nd Block, Rajajinagar, Bengaluru- 560 010
(All the posts are for Self-financed (Un-aided) UG programs)

A. Assistant Professor (Full Time):
Subjects: Commerce & Management
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable:(i) 3 years of teaching experience
(ii) Knowledge of Computers. Usage of ICT in teaching

B. Assistant Professor (Part Time):
Subjects: Sanskrit / Kannada / English / Commerce / Computer Science (Data Science or Data Analyst) / Environmental studies
i) Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
ii) Subject Computer Science (Data Science or Data Analyst)
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject. Should be competent in C programming and Data Analysis using Tableau
iii) Subject: Environmental Studies
Essential Qualification: (i) Post-graduate in relevant discipline in Biological Sciences from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching.

1.The regular full-time posts carry scales of pay and allowances such as HRA, fixed Travel allowance. Besides this, contribution towards PF and Gratuity as terminal benefits, Health Insurance cover.
2.Applications with BIO-DATA and copies of certificates of their qualifications and experience etc., should reach the Chief Executive, MES at the above address on or before 07.07.2025 duly superscribing the envelope with "Application for the post of ____________________".
3.Decision of the selection committee is final.
4.Resorting to any sort of influence will be deemed as a disqualification of the candidature.
5.Download the application form from the MES website: https://mesinstitutions.in

Advt. No. MES/19-1/ADM-1/2025 Dated 22.06.2025 CHIEF EXECUTIVE

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.org.in

Applications are invited for the post of teaching faculty for the following Departments in MES College of Arts, Commerce & Science, 15th Cross, Malleswaram, Bengaluru- 560 003
(All the posts are for Self-financed (Un-aided) UG programs)

A. Professor (Full Time):
Subject: Commerce / Computer Science
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree (with course work included as part of the doctoral program) in the relevant subject.
Experience: Teaching experience of minimum 10 years.
Desirable: NET/SLET qualification, Research publications, Funded Projects, Post-doctoral experience, Knowledge of Computer Applications & usage of ICT in teaching.

B. Associate Professor (Full Time):
Subjects: Commerce / Computer Science
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree (with course work included as part of the doctoral program) in the relevant subject.
Experience: Teaching experience of minimum 6 years.
Desirable: NET/SLET qualification, Research publications, Funded Projects, Post-doctoral experience, Knowledge of Computer Applications & usage of ICT in teaching.

C. Assistant Professor (Full Time):
Subjects: Kannada / Sanskrit / Hindi / Commerce / Computer Science Political Science / Psychology
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching.

D. Assistant Professor (Part Time):
Subjects: Commerce / Computer Science / History / Journalism / Physics Statistics / Biotechnology / Political Science / Sanskrit / Hindi / Psychology
Essential Qualification: (i) Post-graduate in relevant discipline from a recognized university with a minimum of 55% marks or equivalent grade
(ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching

1.The regular full-time posts carry scales of pay and allowances such as HRA, fixed Travel allowance. Besides this, contribution towards PF and Gratuity as terminal benefits, Health Insurance cover.
2.Applications with BIO-DATA and copies of certificates of their qualifications and experience etc., should reach the Chief Executive, MES at the above address on or before 07.07.2025 duly superscribing the envelope with "Application for the post of ____________________".
3.Decision of the selection committee is final.
4.Resorting to any sort of influence will be deemed as a disqualification of the candidature.
5.Download the application form from the MES website: https://mesinstitutions.in

Advt. No. MES/19-1/ADM-1/2025 Dated 22.06.2025 CHIEF EXECUTIVE

MORNING STAR English School Ramachandrapuram (Rajajinagar Entrance) Requires B.Sc Computer Science Lady Teacher to handle Classes and Administration Work. Contact: 9845018480

HARWARD PRE UNIVERSITY COLLEGE, Dasanapura, Tumkur Road, Bengaluru North 562162, REQUIRED LECTURERS for- English, Computer Science, Economics, Biology. Contact: 9880112833, 9945230285

M. S. RAMAIAH FOUNDATION
RAMAIAH INSTITUTE OF LEGAL STUDIES (RILS)
RILS Justice for All
No.23, M S Ramaiah Road, Gokula Extension, Bangalore 560 054
Affiliated to Karnataka State Law University, Hubballi, Karnataka
Recognized by BAR Council of India, New Delhi
Invites Applications
from eligible candidates for the posts of...
Assistant Professor (Law)
LLM., with 55% Marks
0 to 5 years of Teaching Experience, Computer Knowledge, Preference will be given to NET/SLET Qualified candidates
Interested candidates my send the application / CV through email: director@rimsbangalore.in *within 10 days*

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE * HSR & * KODATIGATE (SARJAPURA)
About us: NBGI having 9 Schools, 4 PU Colleges, 2 Degree Colleges & Upcoming University are the Pioneers in providing quality education since 1990, Our campuses are well facilitated in providing education of International standards. We are collaborated with ICSE, CBSE & Cambridge (IGCSE) Boards. We cater to Day Schooling and on campus Boarding Facilities.
PRINCIPAL
Candidates possessing with brilliant academy records. Post graduate having experience as Principal /Vice Principal in PU and Degree College
TEACHERS - FOUNDATION COURSES
Candidates required having experience in training for Foundation course (Physics/ Chemistry/ Biology/ Maths) in reputed institutions.
INTERNAL AUDITOR/ ACCOUNTANT
Having experience in the relevant field with knowledge in latest version of Tally
Remuneration: at par with the institutional standard.
With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact 98860 84799 / 78992 27591
hrcentral.nbgi@gmail.com www.newbaldwininstitutions.org

SSB INTERNATIONAL SCHOOL
Indiranagar, Bangalore - 38
REQUIRES
TRAINED LADY TEACHERS
PRIMARY ACADEMIC HEAD FOR ICSE
PGT / TGT For Maths & English FOR HIGH SCHOOL
TGT For Primary School
APPLY IMMEDIATELY
ssbinternationalschool@gmail.com
The Director, SSB Education Society, No.5/A, HAL II-Stage, Indiranagar, B'lore-38.
Ph: 08041523548

General

V&V GROUP, Bannergatta Road, Wanted MANAGERS, LADY RECEPTIONIST, TELECALLERS, MARKETING EXECUTIVES. Good Salary. Call 99000-54462

Marketing & Sales

WANTED SALES Representative for Industrial Chemicals, Grease & Lubricants PUC/ DEGREE with PCM OR DIPLOMA Knowledge of Reading and Writing English & Kannada is essential. Freshers or with 2/ 3 experience. Contact; 9342551212/ 8618510620

Multiple Vacancy

JOB OPENING Marketing-Pan India Sales Back Office/ Accountant/ Data Entry-Peenya, Bangalore MALLCO Group of Companies Mob: 9513440311/ 8088288488 Email: info@mallcogroup.in

Placement Bureaus/Consultants

CONTACT FOR All Placements, ANZ Consultants, 74, First Floor, 17 Cross, Malleshwaram, Bengaluru. 8183046799, anzconsultants@yahoo.co.in

Walk-in

WANTED: 1.FRONT office.(F) 2.Service Ass.(M) eletrical or electronic. 3.Sales executive.(M) age 45+ For all above minimum experience 1 to 2year. Two wheeler will be provided. location within 10km from indiranagar. Email: onlinebgl@gmail.com Call: 9901298388, 9380292113.

REAL ESTATE BUYING

Sites

Jayanagar

WANTED 30X40,40X60 & above, Sites or House for Purchase in Jayanagar, Basavangudi, BSK 1st & 2nd Stage. for Doctors & NRI immediate settlement. Verna Developers Barton Center MG Road 9353128035/ 9916310226 brokers excuse

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE SELLING

Flat

Basavanagudi

FOR RENT 3BHK Flat Furnished Ventilated Prime Location Ready Occupation From 1st July, 3 Bathrooms, 3 Balconies, Contact: 9886019240/ 080-26623994 Brokers Excuse

House

Nagarabhavi

"**30X40 HOUSE** for Sale in NGEF Layout, Mallathahalli Good location, Genuine`Buyers Contact: 7760388034/ 9242135834"

Industrial & Factory

Peenya

PEENYA 1ST STAGE INDUSTRIAL SHED FOR SALE 8300 SQ.FT WITH 65 H.P. POWER NORTH EAST CORNER. CALL: 9606034112

General

South

WANTED/ AVAILABLE Residential Sites Commercial Property PG Buildings 5to25Cr. With Rental Income. In South Bangalore. Any Measurement. Call-9900399006

Sites

Vasanth Nagar

853SQFT PLOT for sale, Vasanth Nagar near MCC. Contact Kushal 8105838403 / Thejus 7304665569.

RENTAL PROPERTIES

Accommodation Available

Commercial

BANNERGHATTA ROAD, 1150 sft SW corner for showrooms, godowns, offices. 8197237859

BUSINESS

Business to Business

Business

AVAILABLE COLLATERALS/ Takeovers/ Properties/ Financial Arrangements (For only big projects). 'LAND PARCEL' & Company-9342247637.

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

CONNECT ಕ್ಲಾಸಿಫೈಡ್ಸ್

NATIONAL SILK EXPO
Traditional & Lifestyle
EXHIBITION & SALE
150+ certified weavers & best designers from India
25 June to 1 July 2025
Sindhoor Convention Center
15th Cross, Sarakki, 1st Phase, J.P. Nagar, Ring Road, Bengaluru
Summer Wedding Special
Authentic & pure silk & cotton saree by master weavers from all over India
Silk & Cotton Saree | Designer Wear | Ethnic Wear
Kurti & Dresses | Fashion Jewellery | Handcrafted Textiles
Entry Free • 11am to 9pm• All UPI/Debit/Credit Cards Accepted
nationalsilkexpo nationalsilkex 9412258826
UP TO 50% DISCOUNT BY WEAVERS



Business Offers

Finance

MSME LOANS Available for any start up company,any existing Companies avail this opportunity contact-7204995189

LOAN AVAILABLE @5% Yearly Interest Business Project Mortgage Agriculture Takeover Personal HomeLoan 8787091647 Agents Welcome

PUBLIC NOTICE

ಸಾರ್ವಜನಿಕ ಪ್ರಕಟಣೆ

ಶ್ರೀ ಗೌತಮ್ ಪ್ರಕಾಶ್ ದೇಶ್‌ಪಾಂಡೆ ಮೆ॥ ಬೆಲ್ಲೋನ ಹಾಸ್ಪಿಟಾಲಿಟಿ ಸರ್ವೀಸಸ್ ಲಿಮಿಟೆಡ್‌ರವರು ಮೆ॥ ಸ್ಪಾರ್ಕಲ್ ಒನ್ ಮಾಲ್ ಡೆವೆಲಪರ್ಸ್ ಪ್ರೈವೇಟ್ ಲಿಮಿಟೆಡ್, ಫೀಯೊನಿಕ್ಸ್ ಮಾಲ್ ಆಫ್ ಏಷಿಯಾ, ಖಾತಾ ನಂ.239/240/275/88/1 & 240/276/89/1, ಯುನಿಟ್ ನಂ. ಟಿ– 52, 53, 54, 55, 63, 3ನೇ ಫ್ಲೋರ್, ಬ್ಯಾಟರಾಯನಪುರ ವಿಲೇಜ್, ಯಲಹಂಕ ಹೋಬಳಿ, ಬೆಂಗಳೂರು–560092 ಇಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಸಾರ್ವಜನಿಕರ ಅಕ್ಷೇಪಣೆ/ ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ, ನಂ.1, ಇನ್‌ಫಂಟ್ರಿ ರಸ್ತೆ, ಬೆಂಗಳೂರು–560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಯಾವುದೇ ಅಕ್ಷೇಪಣೆ/ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉದ್ದೇಶಿತ ಕೇಂದ್ರದ ಚಕ್ಕುಬಂದಿ

1 ಪೂರ್ವಕ್ಕೆ: ರಾಷ್ಟ್ರೀಯ ಹೆದ್ದಾರಿ (ಬಳ್ಳಾರಿ ರಸ್ತೆ)
2. ಪಶ್ಚಿಮಕ್ಕೆ: ಸಹಕಾರ ನಗರ ರಸ್ತೆ
3. ಉತ್ತರಕ್ಕೆ: ಎಲ್ & ಟಿ ಪ್ರಾಪರ್ಟಿ
4. ದಕ್ಷಿಣಕ್ಕೆ: ಎಲ್&ಟಿ ರೇನ್ ಟ್ರೀ ಬುಲೆವರ್ಡ್

ಸಹಿ/–
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ
ದಿ: 21.06.2025

PERSONAL

Change of Name

CHANGE OF NAME
I, **ADRIAN DSILVA** S/o Benedict Dsilva and Vinitha Dsilva residing at No.2072, 10th Cross, B.M. Road, Kuvempunagar, Channapatna Town - 562160 Ramanagara Dist. have changed my name from **ADRIAN JOHN DSILVA** to **ADRIAN DSILVA** vide affidavit sworn before Notary A R Nagendra, Channapatna, dated 17-06-2025

I,INFANT STANY VINOD_E_S residing`at #748,3rd`Floor, 25th`Main, 10th`Cross, BTM`Layout, 2nd`Stage, Bannerghatta Road, Bengaluru- 560076 have`changed my`Name`to INFANT STANY VINOD.S vide_Affidavit Dtd:20-06-2025 Sworn`Before Notary`Meer Hassan, Bangalore

CHANGE OF NAME
I, **VEENA MAKAL, VEENA MAKAL SHIVALINGAPPA & VEENA S** W/o Shivalingappa Makal, Residing at No.280, Nandi RLF 2nd Phase, JP Nagar 8th Phase, Bengaluru-560076, declare that above names pertain to me only and henceforth I shall be called as **VEENA MAKAL** vide affidavit dt:23-06-2025, before notary L. Puttaraju, Bengaluru

I,DEVANG CHANDRAKANT SHAH residing`at #AB/1704,Elita Promenade, J.P.Nagar 7th_Phase, Bengaluru-560078 have`changed my`Son's Name`from SANY SHAH_to SANAY_DEVANG SHAH vide`Affidivit Dtd:20.06.2025 Sworn`Before Notary Meer_Hassan, Bangalore

I, PIYUSH R/o, #68, 5th Main Road, Chamarajpet, Bengaluru-18 have changed my name as PIYUSH SURESH Vide affidavit dated 16/06/2025 before Notary Mamatha N.K., Bengaluru

Lost

DOCUMENT LOST
I, **Chikkaiah R.,** R/at TF-02, VKNS Apartment, No. 805, Jnanabharathi Road, Bengaluru-560056, have lost **Original sale deed & All Document Site No. 880, Document / Identification No BDA-1-07936-2004-05,** IV 'B' Black FE of BSK, 6th Stage Bengaluru. while in transit. Finders please **Contact No: 9632004974**

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

PASS DIRECT 2nd PUC within 4 months eligible for NEET and CET also for Admission Contact: 9880498484/ 9900004099.

EDUCATION CORNER

GOODWILL CHRISTIAN COLLEGE FOR WOMEN
ARISE LEARN SERVE · GOODWILL DEGREE COLLEGE
No.10, Promenade Road, Frazer Town (Opp. Coles Park) Bangalore - 560 005
CSI Karnataka Central Dioces
Affiliated to Bengaluru North University, NAAC ACCREDITED
Call: 080-41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2025 - 2026
COURSES OFFERED
B.Com BBA BCA B.Sc B.A.
ROUNAQH

RAMAN GROUP OF INSTITUTIONS
12, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA BCom BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
RAMAN SCHOOL OF NURSING - GNM
Contact: 8050488623 / 8880959499
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-25602

ಬೆಂಗಳೂರಿಗೆ ಅತ್ಯಾಧುನಿಕ ಭೂಗತ ರಸ್ತೆ ಜಾಲ

ಕೇಂದ್ರ ಸಚಿವ ನಿತಿನ್ ಗಡ್ಕರಿಗೆ ಎಚ್‌.ಡಿ. ಕುಮಾರಸ್ವಾಮಿ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಮಹಾ ನಗರದಲ್ಲಿ ಅತ್ಯಾಧುನಿಕ ಭೂಗತ ರಸ್ತೆ ಜಾಲ ನಿರ್ಮಾಣ ಸೇರಿದಂತೆ ಪೆರಿಫೆರಲ್‌ ರಿಂಗ್‌ ರಸ್ತೆ ಅಭಿವೃದ್ಧಿ ಹಾಗೂ ರಾಜ್ಯದ ಪ್ರಮುಖ ಸಾರಿಗೆ ಯೋಜನೆಗಳ ಬಗ್ಗೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರಾದ ನಿತಿನ್‌ ಗಡ್ಕರಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ನವದೆಹಲಿಯಲ್ಲಿ ಗಡ್ಕರಿ ನಿವಾಸಕ್ಕೆ ಮಂಗಳವಾರ ತೆರಳಿದ ಸಚಿವ ಕುಮಾರಸ್ವಾಮಿ, ಅತಿ ಮುಖ್ಯವಾಗಿ ಬೆಂಗಳೂರಿಗೆ ಅತ್ಯಗತ್ಯವಾಗಿರುವ ಇವೆರಡೂ ಯೋಜನೆಗಳ ಬಗ್ಗೆ ಹೆದ್ದಾರಿ ಸಚಿವರ ಜತೆ ಸಮಾಲೋಚನೆ ನಡೆಸಿದರು.

ನಗರದ ಸಂಚಾರ ದಟ್ಟಣೆ ನಿವಾರಿಸುವ ಸಲುವಾಗಿ ಪೆರಿಫೆರಲ್‌ ರಿಂಗ್‌ ರಸ್ತೆ ಹಾಗೂ ಅತ್ಯಾಧುನಿಕ ಭೂಗತ ರಸ್ತೆ ಜಾಲ ನಿರ್ಮಾಣಕ್ಕೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಕುಮಾರಸ್ವಾಮಿ ಮನವಿ ಮಾಡಿದರು.

ನಗರದ ಮಧ್ಯಭಾಗದಲ್ಲಿ ಸಂಚಾರ ದಟ್ಟಣೆ ವಿಪರೀತವಾಗಿದೆ. ಇದನ್ನು ಕಡಿಮೆ ಮಾಡಲು ಇವೆರಡೂ ಯೋಜನೆಗಳ ಶಾಶ್ವತ ಪರಿಹಾರಗಳಾಗಿವೆ. ನಗರದ ಪ್ರಮುಖ ವಲಯಗಳನ್ನು ಸಂಪರ್ಕಿಸುವ ಈ ಯೋಜನೆಗಳು ಅವಶ್ಯಕವಾಗಿವೆ. ಈ ಪರಿವರ್ತನಾತ್ಮಕ ಮೂಲಸೌಕರ್ಯವು ಬೆಂಗಳೂರಿನ ಭವಿಷ್ಯದ ಅಭಿವೃದ್ಧಿಗೆ ಹೆಚ್ಚು ಸಹಕಾರಿ ಆಗಲಿದೆ. ಸುಧಾರಿತ ಮತ್ತು ದೀರ್ಘಕಾಲೀನ ಸುಸ್ಥಿರ ಬೆಳವಣಿಗೆಗೆ ನೆರವಾಗುತ್ತದೆ ಎಂದು ಸಚಿವರು ಹೆದ್ದಾರಿ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ರಾಜ್ಯ ರಾಜಧಾನಿ ಬೆಂಗಳೂರು ಮತ್ತು ಬಂದರು ನಗರವಾದ ಮಂಗಳೂರು ನಡುವೆ ಸುಗಮ ಸಂಚಾರಕ್ಕೆ ಶಿರಾಡಿ ಘಾಟ್‌ ರಸ್ತೆ ಯೋಜನೆ ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಬೇಕು ಎಂದೂ ಅವರು ಮನವಿ ಮಾಡಿದರು.

ಕಾಮಗಾರಿ ನಿಧಾನವಾಗುತ್ತಿರುವುದರಿಂದ ಎರಡೂ ನಗರಗಳ ನಡುವೆ ವಾಹನ ಸಂಚಾರಕ್ಕೆ ತೀವ್ರ ಸಮಸ್ಯೆ ಆಗಿದೆ. ಸುಗಮ ಸಂಚಾರ ಸಾಧ್ಯವಾಗದೆ ವಾಹನ ಸವಾರರು, ಪ್ರಯಾಣಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಆದಷ್ಟು ಬೇಗ ಕಾಮಗಾರಿ ಮುಗಿಸಬೇಕು ಎಂದು ಕೋರಿದರು.


ನಿತಿನ್‌ ಗಡ್ಕರಿ ಹಾಗೂ ಎಚ್‌.ಡಿ.ಕುಮಾರಸ್ವಾಮಿ ಚರ್ಚಿಸಿದರು

ಪತ್ರದಲ್ಲಿ ಏನಿತ್ತು?

- ಸುಗಮ ಸಂಚಾರ ಮತ್ತು ಸುರಕ್ಷತೆಯ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ 75 (ಕುಣಿಗಲ್‌ ವಿಭಾಗ) ಮೇಲ್ದರ್ಜೆಗೇರಿಸಬೇಕು
- ಚನ್ನರಾಯಪಟ್ಟಣದಿಂದ ಮಕುಟಕ್ಕೆ (ರಾಜ್ಯ ಹೆದ್ದಾರಿ ಸಂಖ್ಯೆ 8) ಹೊಸ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಅಭಿವೃದ್ಧಿ ಮಾಡುವುದು
- ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿಯ ಜೋಗಿಹಳ್ಳಿ ಬಳಿ ಮೇಲು ಸೇತುವೆ ನಿರ್ಮಾಣ
- ಮಂಡ್ಯ ನಗರಕ್ಕೆ ರಿಂಗ್‌ ರಸ್ತೆ (ದಕ್ಷಿಣ ಬೈಪಾಸ್‌) ನಿರ್ಮಾಣ

ವಿಜಯೇಂದ್ರ, ಅಶೋಕ ದಿಢೀರ್‌ ದೆಹಲಿಗೆ

ಭಾರಿ ಕುತೂಹಲ ಕೆರಳಿಸಿದ ರಾಜ್ಯ ನಾಯಕರ ಪ್ರಯಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ರಾಷ್ಟ್ರೀಯ ನಾಯಕರ ಸೂಚನೆ ಮೇರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಮಂಗಳವಾರ ದಿಢೀರ್‌ ಆಗಿ ನವದೆಹಲಿಗೆ ಧಾವಿಸಿದರು.

ಬಿಜೆಪಿ ರಾಜ್ಯ ಘಟಕದಲ್ಲಿನ ಭಿನ್ನಮತದ ಕಾರಣಕ್ಕೆ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಆರು ತಿಂಗಳಿಂದ ನನೆಗುದಿಗೆ ಬಿದ್ದಿದೆ. ವಿಜಯೇಂದ್ರ ಮುಂದುವರಿಕೆಗೆ ಭಿನ್ನರ ಗುಂಪು ತೀವ್ರ ವಿರೋಧ ವ್ಯಕ್ತಪಡಿಸಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಲು ಕೇಂದ್ರ ಸಚಿವ ವಿ.ಸೋಮಣ್ಣ ನಿರಂತರ ಪ್ರಯತ್ನ ನಡೆಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್‌ ಶಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಆಕಾಂಕ್ಷೆ ತೋಡಿಕೊಂಡಿದ್ದಾರೆ. ಈ ನಡುವೆ, ಕಾರ್ಕಳ ಶಾಸಕ ವಿ.ಸುನೀಲ್‌ ಕುಮಾರ್‌ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ತಟಸ್ಥರ ಗುಂಪು ಪ್ರತಿಪಾದಿಸಿದೆ. ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ಅಮಿತ್‌ ಶಾ ಅವರು ರಾಜ್ಯ ನಾಯಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ರಾಜ್ಯ ಕಾಂಗ್ರೆಸ್‌ ಸರ್ಕಾರ ದಿನಕ್ಕೊಂದು ಹಗರಣ ಹಾಗೂ ವಿವಾದ ಸೃಷ್ಟಿಸುತ್ತಿದೆ. ಆದರೆ, ಸರ್ಕಾರದ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆಯುತ್ತಿಲ್ಲ’ ಎಂದು ರಾಜ್ಯ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದರು. ಅದರ ಬೆನ್ನಲ್ಲೇ, ಇಬ್ಬರು ನಾಯಕರು ರಾಷ್ಟ್ರ ರಾಜಧಾನಿಗೆ ಬಂದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಅಮಿತ್‌ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಅಶೋಕ ಬುಧವಾರ ಭೇಟಿ ಮಾಡುವ ಸಾಧ್ಯತೆ ಇದೆ.

‘ರಾಜ್ಯ ಘಟಕದ ಅಧ್ಯಕ್ಷರಾಗಿ ವಿಜಯೇಂದ್ರ ಅವರೇ ಮುಂದುವರಿಯುವುದು ಬಹುತೇಕ ಖಚಿತ. ಆದರೆ, ಕುಮಾರ ಬಂಗಾರಪ್ಪ, ಅರವಿಂದ ಲಿಂಬಾವಳಿ ಸೇರಿದಂತೆ ಕೆಲವು ನಾಯಕರನ್ನು ರಾಜ್ಯ ಪದಾಧಿಕಾರಿಗಳನ್ನಾಗಿ ನೇಮಿಸಲು ವರಿಷ್ಠರು ಯೋಜಿಸಿದ್ದಾರೆ. ಈ ಮೂಲಕ ವಿಜಯೇಂದ್ರ ವೇಗಕ್ಕೆ ಕಡಿವಾಣ ಹಾಕುವ ಉದ್ದೇಶವೂ ವರಿಷ್ಠರಿಗೆ ಇದೆ. ಈ ಬಗ್ಗೆ ಚರ್ಚಿಸಲು ಉಭಯ ನಾಯಕರನ್ನು ಕರೆಸಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಸೋಮವಾರ ಅಥವಾ ಮಂಗಳವಾರ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಲು ಯೋಜಿಸಿದ್ದೆವು. ಇದೇ 26ರ ನಂತರ ಭೇಟಿ ಮಾಡುವಂತೆ ರಾಷ್ಟ್ರೀಯ ನಾಯಕರು ತಿಳಿಸಿದ್ದಾರೆ’ ಎಂದು ಭಿನ್ನರ ಬಣದ ನಾಯಕರೊಬ್ಬರು ತಿಳಿಸಿದರು.

‘ವಕೀಲ ಮಿತ್ರರೊಬ್ಬರ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲು ಬಂದಿರುವೆ. ರಾಜ್ಯಕ್ಕೆ ಬುಧವಾರ ವಾಪಸ್‌ ಆಗುವೆ. ರಾಷ್ಟ್ರೀಯ ನಾಯಕರ ಭೇಟಿಗೆ ಕಾಲಾವಕಾಶ ಕೇಳಿಲ್ಲ’ ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು.


ನೆಲಮಂಗಲ ಪಟ್ಟಣದ ಸೊಂಡೆಕೊಪ್ಪ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುತ್ತಿರುವ ಕಾಮಗಾರಿಯನ್ನು ಶಾಸಕ ಎನ್‌. ಶ್ರೀನಿವಾಸ್‌ ಪರಿಶೀಲಿಸಿದರು. ಚಿತ್ರದಲ್ಲಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್‌.ಗಣೇಶ್‌, ಮಾಜಿ ಅಧ್ಯಕ್ಷ ಎನ್‌. ಪಿ.ಹೇಮಂತಕುಮಾರ್‌, ಗುತ್ತಿಗೆದಾರರು, ಎಂಜಿನಿಯರ್‌ಗಳು ಇದ್ದಾರೆ.

ಆಪ್ತರು, ಹೊರ ರಾಜ್ಯದ ಖ್ಯಾತ ನಟರಿಗೂ ಆಹ್ವಾನ: ರಾಜೇಂದ್ರಸಿಂಗ್‌ ಬಾಬು

ಬೆಂಗಳೂರು: ‘ನಟ ವಿಷ್ಣುವರ್ಧನ್‌ ಅವರ 75ನೇ ಜನ್ಮ ದಿನೋತ್ಸವದ ಅಂಗವಾಗಿ ಡಾ. ವಿಷ್ಣು ಸೇನಾ ಸಮಿತಿಯು ಆಯೋಜಿಸುತ್ತಿರುವ ‘ಯಜಮಾನ ಅಮೃತ ಮಹೋತ್ಸವ’ ಕಾರ್ಯಕ್ರಮಕ್ಕೆ ವಿಷ್ಣುವರ್ಧನ್‌ ಅವರ ಆಪ್ತರನ್ನೆಲ್ಲ ಆಹ್ವಾನಿಸಲಾಗುತ್ತದೆ’ ಎಂದು ಸಿನಿಮಾ ನಿರ್ದೇಶಕ ಎಸ್‌.ವಿ.ರಾಜೇಂದ್ರಸಿಂಗ್‌ ಬಾಬು ತಿಳಿಸಿದರು.

‘ಯಜಮಾನ ಅಮೃತ ಮಹೋತ್ಸವ’ ಕಾರ್ಯಕ್ರಮದ ಆಯೋಜನೆ ಸಂಬಂಧ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಅಮೃತ ಮಹೋತ್ಸವಕ್ಕೆ ಹಿಂದಿ, ತಮಿಳು, ಮಲಯಾಳ, ತೆಲುಗು ಚಿತ್ರರಂಗದ ಖ್ಯಾತ ನಟರನ್ನು ಆಹ್ವಾನಿಸಲಾಗುವುದು’ ಎಂದು ತಿಳಿಸಿದರು.

ಅಮೃತ ಮಹೋತ್ಸವದ ನೇತೃತ್ವ ವಹಿಸಿರುವ ಸಿನಿಮಾ ನಿರ್ದೇಶಕ ಎಸ್‌. ನಾರಾಯಣ್‌ ಮಾತನಾಡಿ, ‘ಈ ಅಮೃತ ಮಹೋತ್ಸವವನ್ನು ಅರಮನೆ ಮೈದಾನದಲ್ಲಿ ಎರಡು ದಿನ ಆಯೋಜಿಸಲಾಗುವುದು. ಕಾರ್ಯಕ್ರಮದಲ್ಲಿ ಕನ್ನಡದ ಸಮಸ್ತ ಚಿತ್ರರಂಗ ಭಾಗವಹಿಸುವ ವಿಶ್ವಾಸವಿದೆ’ ಎಂದರು.

ಡಾ.ವಿಷ್ಣು ಸೇನಾ ಸಮಿತಿಯ ರಾಜ್ಯಾಧ್ಯಕ್ಷ ವೀರಕಪುತ್ರ ಶ್ರೀನಿವಾಸ್‌ ಮಾತನಾಡಿ, ‘ಕಾರ್ಯಕ್ರಮಕ್ಕೆ 2 ಲಕ್ಷ ಮಂದಿ ಸೇರುವ ನಿರೀಕ್ಷೆ ಇದೆ. ಕನ್ನಡ ಚಿತ್ರರಂಗದ ಮಟ್ಟಿಗೆ ಇದು ಬೂಸ್ಟರ್‌ ಡೋಸ್‌ ಕಾರ್ಯಕ್ರಮವಾಗಿ ಕೆಲಸ ಮಾಡಲಿದೆ’ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ನರಸಿಂಹಲು, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಉಮೇಶ್‌ ಬಣಕಾರ್‌, ನಿರ್ಮಾಪಕ ರಮೇಶ್‌ ಯಾದವ್‌ ಮತ್ತಿತರರು ಉಪಸ್ಥಿತರಿದ್ದರು.

ನಕಲಿ ಜಾತಿ ಪ್ರಮಾಣಪತ್ರ: ವರದಿ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನಕಲಿ ಅಥವಾ ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ಪಡೆದುಕೊಂಡವರ ಹಾಗೂ ಅವುಗಳನ್ನು ವಿತರಿಸಿದವರ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಿ’ ಎಂದು ಹೈಕೋರ್ಟ್‌, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ, 'ರಾಜ್ಯ ಎಸ್ಸಿ-ಎಸ್ಟಿ ನಕಲಿ ಜಾತಿ ಪ್ರಮಾಣಪತ್ರಗಳ ತಡೆ ಸಮಿತಿ’ ಪ್ರಧಾನ ಕಾರ್ಯದರ್ಶಿ ಮಾರಪ್ಪ ನಾಯಕ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ್‌ ರಾವ್‌ ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್‌ ವಕೀಲೆ ಅಶ್ವಿನಿ ಓಬಳೇಶ್‌, ‘ನಕಲಿ ಜಾತಿ ಪ್ರಮಾಣಪತ್ರ ಪಡೆದವರ ಹಾಗೂ ಅದಕ್ಕೆ ಕಾರಣರಾದವರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಹೈಕೋರ್ಟ್‌ ಈ ಹಿಂದೆ ಆದೇಶಿಸಿತ್ತು. ಈ ಆದೇಶದ ಅನುಸಾರ, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ನಿರ್ದೇಶಕರು ನ್ಯಾಯಾಲಯಕ್ಕೆ ವಸ್ತುಸ್ಥಿತಿ ವರದಿ ಸಲ್ಲಿಸಬೇಕಿತ್ತು. ಆದರೆ, ಈತನಕ ವರದಿ ಸಲ್ಲಿಸಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಸರ್ಕಾರದ ಪರ ವಕೀಲರು, ‘ವರದಿ ಸಲ್ಲಿಸಲು ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್‌ 9ಕ್ಕೆ ಮುಂದೂಡಿತು.

ಸುತ್ತೋಲೆ: ಏತನ್ಮಧ್ಯೆ, ‘ಪರಿಶಿಷ್ಟ ಪಂಗಡದ ನಾಯಕ, ನಾಯಕ ಜಾತಿಯ ಸಮಾನಾಂತರ ಪರಿವಾರ ಮತ್ತು ತಳವಾರ ಜಾತಿಗಳಿಗೆ ಜಾತಿ ಪ್ರಮಾಣಪತ್ರ ವಿತರಿಸುವ ಸಂಬಂಧ ರಾಜ್ಯ ಸರ್ಕಾರ 2025ರ ಫೆಬ್ರುವರಿಯಲ್ಲಿ ಹೊರಡಿಸಿರುವ ಸುತ್ತೋಲೆಯಿಂದ ಸಾಕಷ್ಟು ಗೊಂದಲ ನಿರ್ಮಾಣವಾಗಿದೆ.

ಅರ್ಹ ಫಲಾನುಭವಿಗಳಿಗೆ ಜಾತಿ ಪ್ರಮಾಣಪತ್ರ ಸಿಗುತ್ತಿಲ್ಲ. ಇದರಿಂದ ಉದ್ಯೋಗ, ಶಿಕ್ಷಣ ಮತ್ತಿತರ ಉದ್ದೇಶಗಳಿಗೆ ತೊಂದರೆ ಆಗುತ್ತಿದೆ’ ಎಂದು ಪ್ರಕರಣದ ಮಧ್ಯಂತರ ಅರ್ಜಿದಾರ ‘ಕರ್ನಾಟಕ ರಾಜ್ಯ ತಳವಾರ ಮಹಾಸಭಾ’ದ ಪರ ಹೈಕೋರ್ಟ್‌ ವಕೀಲ ಎಚ್‌.ಸುನೀಲ್‌ ಕುಮಾರ್‌ ನ್ಯಾಯಪೀಠಕ್ಕೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸುತ್ತೋಲೆಯನ್ನು ಪ್ರತ್ಯೇಕವಾಗಿ ಪ್ರಶ್ನಿಸಿ’ ಎಂದು ಸಲಹೆ ನೀಡಿತು.

ಬೈಕ್‌– ಟ್ಯಾಕ್ಸಿ ಪರವಾನಗಿ: ವಿಚಾರಣೆ ಇಂದು

‘ರಾಜ್ಯದಲ್ಲಿ ಬೈಕ್‌ ಟ್ಯಾಕ್ಸಿ ನಿಷೇಧಿಸಿ ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶವು; ಉದ್ಯಮ ನಡೆಸಲು ಸಾಂವಿಧಾನಿಕವಾಗಿ ಕೊಡಮಾಡಲಾಗಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ’ ಎಂದು ಬೈಕ್‌ ಟ್ಯಾಕ್ಸಿ ಮಾಲೀಕರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ, ಎಎನ್‌ಐ ಟೆಕ್ನಾಲಜೀಸ್‌ ಪ್ರೈವೇಟ್‌ ಲಿಮಿಟೆಡ್‌ ಕಂಪನಿ, ಉಬರ್‌ ಇಂಡಿಯಾ ಸಿಸ್ಟಮ್ಸ್‌ ಪ್ರೈವೇಟ್‌ ಲಿಮಿಟೆಡ್‌, ವರೀಕೃತಿ ಮಹೇಂದ್ರ ರೆಡ್ಡಿ, ಮಧು ಕಿರಣ್‌, ರೊಪ್ಪೆನ್‌ ಟ್ರಾನ್ಸ್‌ಪೋರ್ಟೇಶನ್‌ ಸರ್ವೀಸಸ್‌ ಪ್ರೈವೇಟ್‌ ಲಿಮಿಟೆಡ್‌ ಮತ್ತು ಬೈಕ್‌ ಟ್ಯಾಕ್ಸಿ ವೆಲ್‌ಫೇರ್‌ ಅಸೋಸಿಯೇಷನ್‌ ಪ್ರತಿನಿಧಿಗಳು ಸಲ್ಲಿರುವ ರಿಟ್‌ ಮೇಲ್ಮನವಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್‌ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೈಕ್‌ ಮಾಲೀಕರಾದ ವಿ.ಮಹೇಂದ್ರ ರೆಡ್ಡಿ ಮತ್ತು ಮಧು ಕಿರಣ್‌ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಧ್ಯಾನ್‌ ಚಿನ್ನಪ್ಪ, ‘ಬೈಕ್‌ ಟ್ಯಾಕ್ಸಿ ಸೇವೆ ನೀಡಲು ದ್ವಿಚಕ್ರ ವಾಹನ ಮಾಲೀಕರನ್ನು ಸೇರ್ಪಡೆ ಮಾಡಲು ನಿಯಮದಲ್ಲಿ ಅವಕಾಶವಿದೆ. ಆದರೆ, ಕಳೆದ ಹತ್ತು ದಿನಗಳಿಂದ ಬೈಕ್‌ ಟ್ಯಾಕ್ಸಿ ಸೇವೆಯನ್ನು ಅಗ್ರಿಗೇಟರ್ಸ್‌ ನಿಲ್ಲಿಸಲಾಗಿದೆ. ಇತರೆ ರಾಜ್ಯಗಳಲ್ಲಿ ಇಂತಹ ಸೇವೆಗೆ ಅವಕಾಶ ಕಲ್ಪಿಸಿರುವಾಗ ರಾಜ್ಯ ಸರ್ಕಾರದ ಈ ನಡೆ ಕಾನೂನುಬಾಹಿರವಾಗಿದೆ’ ಎಂದರು.

ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್‌ ಜನರಲ್‌ ಕೆ.ಶಶಿಕಿರಣ ಶೆಟ್ಟಿ ಅರ್ಜಿದಾರರ ಪರ ವಕೀಲರ ವಾದವನ್ನು ಬಲವಾಗಿ ಆಕ್ಷೇಪಿಸಿದರು. ಅಂತೆಯೇ, ಅಡ್ವೊಕೇಟ್‌ ಜನರಲ್‌ ಅವರ ವಿಸ್ತೃತ ವಾದ ಮಂಡನೆಗೆ ಅವಕಾಶ ಕಲ್ಪಿಸುವುದಾಗಿ ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಬುಧವಾರಕ್ಕೆ (ಜೂನ್‌ 25) ಮುಂದೂಡಿತು.

ಹೈಕೋರ್ಟ್‌ ಸುದ್ದಿ

ಕಳಪೆ ಉಪಕರಣ: ಲೋಕಾಯುಕ್ತಕ್ಕೆ ನೋಟಿಸ್‌

ಬೆಂಗಳೂರು: ‘ಕಳಪೆ ಗುಣಮಟ್ಟದ ಕೃಷಿ ಸಲಕರಣೆ ವಿತರಿಸುವ ಮೂಲಕ ರೈತರ ಸಂಕಷ್ಟಕ್ಕೆ ಕಾರಣರಾದ ಅಧಿಕಾರಿಗಳು ಹಾಗೂ ಸಲಕರಣೆ ಪೂರೈಕೆ ಕಂಪನಿಗಳ ವಿರುದ್ಧ ತನಿಖೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಲೋಕಾಯುಕ್ತ ಸಂಸ್ಥೆಗೆ ನೋಟಿಸ್‌ ಜಾರಿಗೊಳಿಸಲು ಹೈಕೋರ್ಟ್‌ ಆದೇಶಿಸಿದೆ.

ಈ ಸಂಬಂಧ, 'ಅಖಂಡ ಕರ್ನಾಟಕ ರೈತ ಸಂಘ’ದ ಪ್ರಧಾನ ಕಾರ್ಯದರ್ಶಿ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರದ ಅರವಿಂದ ಕುಲಕರ್ಣಿ ಸಲ್ಲಿಸಿರುವ ರಿಟ್‌ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಸುನೀಲ್‌ ದತ್‌ ಯಾದವ್‌ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ, ಕೃಷಿ ಆಯುಕ್ತ, ತೋಟಗಾರಿಕೆ ನಿರ್ದೇಶಕ ಮತ್ತು ಲೋಕಾಯುಕ್ತ ಸಂಸ್ಥೆಗೆ ನೋಟಿಸ್‌ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜುಲೈ 8ಕ್ಕೆ ಮುಂದೂಡಿತು.

ಪ್ರಜ್ವಲ್‌ ರೇವಣ್ಣ ಪ್ರಕರಣ ವಿಚಾರಣೆ ಮುಂದಕ್ಕೆ

‘ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್‌ ಪ್ರಕರಣದ ವಿಚಾರಣೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಮಂದಗತಿಯಲ್ಲಿದ್ದು, ಆರೋಪಿ ಪ್ರಜ್ವಲ್‌ ರೇವಣ್ಣ ಅವರಿಗೆ ಜಾಮೀನು ನೀಡಬೇಕು’ ಎಂದು ಅವರ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದರು.

ಈ ಸಂಬಂಧ ಮಾಜಿ ಸಂಸದ ಪ್ರಜ್ವಲ್‌ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಆರ್‌.ಕೃಷ್ಣಕುಮಾರ್‌ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಜ್ವಲ್‌ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ ಈಗಾಗಲೇ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಆದರೆ, ಪ್ರಕರಣದ ವಿಚಾರಣೆ ಒಂದಿಂಚೂ ಪ್ರಗತಿ ಕಂಡಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

‘ಇದೇ ಪ್ರಕರಣಕ್ಕೆ ಸಂಬಂಧಿಸಿದ ಜಾಮೀನು ಅರ್ಜಿಯನ್ನು ಹೈಕೋರ್ಟ್‌ನ ಸಮನ್ವಯ ಪೀಠ ವಜಾಗೊಳಿಸಿದೆ. ಆದರೆ, ಇದೇ ಪ್ರಕರಣದಲ್ಲಿ ಆರೋಪಿಯಾಗಿರುವ ಶಾಸಕ ಎಚ್‌.ಡಿ.ರೇವಣ್ಣ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಲಾಗಿದೆ’ ಎಂಬ ಅಂಶವನ್ನು ನ್ಯಾಯಪೀಠಕ್ಕೆ ವಿವರಿಸಿದರು.

ಸರ್ಕಾರದ ಪರ ಹಾಜರಿದ್ದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್‌ ಮತ್ತು ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್‌, ‘ಅರ್ಜಿದಾರರ ವಿರುದ್ಧ ಒಟ್ಟು 5 ಪ್ರಕರಣ ದಾಖಲಾಗಿವೆ. ಇವುಗಳಲ್ಲಿ ಒಟ್ಟು 156 ಸಾಕ್ಷಿಗಳಿದ್ದು, ಈಗಾಗಲೇ 30 ಸಾಕ್ಷಿಗಳ ವಿಚಾರಣೆ ನಡೆದಿದೆ. ಒಂದು ಕೇಸಿನಲ್ಲಿನ ಸಾಕ್ಷ್ಯ ವಿಚಾರಣೆ ಅಂತಿಮ ಹಂತದಲ್ಲಿದೆ. ಇನ್ನೆರಡು ಪ್ರಕರಣಗಳ ವಿಚಾರಣೆಯೂ ಆರಂಭವಾಗಿದೆ. ಒಂದು ವೇಳೆ ಜಾಮೀನು ನೀಡಿದರೆ ಅರ್ಜಿದಾರರು ಮತ್ತವರ ಕಟುಂಬದ ಸದಸ್ಯರು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ’ ಎಂದು ಆಕ್ಷೇಪಿಸಿದರು. ವಾದ–ಪ್ರತಿವಾದ ಆಲಿಸಿದ ಪೀಠ ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ಚಿಟಿಕೆ ಸುದ್ದಿ

ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಬೆಂಬಲ

ಬೆಂಗಳೂರು: ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳ ಅಭಿವೃದ್ಧಿಗಾಗಿ ವಶಪಡಿಸಿಕೊಳ್ಳುವ ಸರ್ಕಾರದ ಕ್ರಮವನ್ನು ಖಂಡಿಸಿ ಇದೇ 25ಕ್ಕೆ ಚನ್ನರಾಯಪಟ್ಟಣದ ಕೆಐಎಡಿಬಿ ಭೂ ಸ್ವಾಧೀನ ಹೋರಾಟ ಸಮಿತಿಯವರು ಕರೆ ನೀಡಿರುವ ‘ದೇವನಹಳ್ಳಿ ಚಲೋ’ ಹೋರಾಟವನ್ನು ಸಂಯಕ್ತ ಹೋರಾಟ–ಕರ್ನಾಟಕ ಬೆಂಬಲಿಸುತ್ತಿದೆ.

‘ರಾಜ್ಯದ ಎಲ್ಲ ಭಾಗಗಳಿಂದ ನೂರಾರು ರೈತರು, ಚಳವಳಿಕಾರರು ಈ ಹೋರಾಟದಲ್ಲಿ ಪಾಲ್ಗೊಳ್ಳಲು ದೇವನಹಳ್ಳಿಗೆ ಬರುತ್ತಿದ್ದಾರೆ. ತಾಲ್ಲೂಕು ಕಚೇರಿ ಎದುರು ಆರಂಭವಾಗಲಿರುವ ಹೋರಾಟವು ರೈತರ ನ್ಯಾಯಬದ್ಧ ಬೇಡಿಕೆಗಳು ಈಡೇರುವವರಗೂ ಪ್ರತಿಭಟನೆ ಮುಂದುವರಿಯಲಿದೆ’ ಎಂದು ಸಂಯುಕ್ತ ಹೋರಾಟ–ಕರ್ನಾಟಕ ಪ್ರಕಟಣೆಯಲ್ಲಿ ತಿಳಿಸಿದೆ.

‘ಖಾಲಿ ಹುದ್ದೆ ತೋರಿಸದ ಇಲಾಖೆ’

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜು ಉಪನ್ಯಾಸಕರ ವರ್ಗಾವಣೆಗೆ ಕೌನ್ಸೆಲಿಂಗ್‌ ಆರಂಭವಾಗಿದ್ದು, ಖಾಲಿ ಇರುವ ಹಲವು ಹುದ್ದೆಗಳನ್ನು ತೋರಿಸಿಲ್ಲ ಎಂದು ಉಪನ್ಯಾಸಕರು ದೂರಿದ್ದಾರೆ.

ಮೈಸೂರಿನ ಹೆಬ್ಬಾಳ ಬಡಾವಣೆ ಮಂಜೇಗೌಡನ ಕೊಪ್ಪಲು ಸರ್ಕಾರಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗದಲ್ಲಿ 83 ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿನ ರಾಜ್ಯಶಾಸ್ತ್ರ ಉಪನ್ಯಾಸಕ ಜಗದೀಶ್‌ ಅವರ ನಿವೃತ್ತಿಯಿಂದ 2024 ಅಕ್ಟೋಬರ್‌ನಿಂದ ಹುದ್ದೆ ಖಾಲಿ ಇದ್ದರೂ, ಕೌನ್ಸೆಲಿಂಗ್‌ಗಾಗಿ ಬಿಡುಗಡೆ ಮಾಡಿದ ಖಾಲಿ ಹುದ್ದೆಗಳ ಪಟ್ಟಿಯಲ್ಲಿ ತೋರಿಸಿಲ್ಲ ಎಂದು ಉಪನ್ಯಾಸಕರೊಬ್ಬರು ಆರೋಪಿಸಿದ್ದಾರೆ.

ಬುಧವಾರ ನಡೆಯುವ ಕೌನ್ಸೆಲಿಂಗ್‌ ಮುಂದೂಡಬೇಕು, ಇಲ್ಲವೇ ಖಾಲಿ ಇರುವ ಉಪನ್ಯಾಸಕರ ಹುದ್ದೆಯನ್ನು ಪಟ್ಟಿಯಲ್ಲಿ ತೋರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

‘ಸರ್ವಾಧಿಕಾರಕ್ಕಾಗಿ ತುರ್ತು ಪರಿಸ್ಥಿತಿ ಹೇರಿಕೆ’

ಇಂದಿರಾಗಾಂಧಿ ಇಲ್ಲದಿದ್ದರೂ ಕಾಂಗ್ರೆಸ್‌ನಲ್ಲಿ ಅವರ ಮನಃಸ್ಥಿತಿಯವರಿದ್ದಾರೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ವಾಧಿಕಾರಕ್ಕಾಗಿ ತುರ್ತು ಪರಿಸ್ಥಿತಿ ಹೇರಿದ ಇಂದಿರಾಗಾಂಧಿ ಇಂದು ಇಲ್ಲದಿದ್ದರೂ, ಆ ಪಕ್ಷದಲ್ಲಿ ಇರುವವರಲ್ಲಿ ಅಂತಹ ಮನಃಸ್ಥಿತಿ ಬದಲಾಗಿಲ್ಲ. ಈ ಬಗ್ಗೆ ಯುವ ಜನಾಂಗ ಎಚ್ಚರಿಕೆಯಿಂದ ಇರಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಹೇಳಿದರು.

ಸಿಟಿಜನ್‌ ಫಾರ್‌ ಸೋಷಿಯಲ್‌ ಜಸ್ಟೀಸ್‌ ಸಂಸ್ಥೆ ಆಯೋಜಿಸಿದ್ದ ‘ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್‌- ಕರಾಳ ಇತಿಹಾಸಕ್ಕೆ 50 ವರ್ಷ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇತಿಹಾಸದಿಂದ ಪಾಠ ಕಲಿಯದಿದ್ದರೆ ಅವರು ಮಾಡಿದ ತಪ್ಪನ್ನು ಉತ್ತೇಜಿಸಿದಂತಾಗುತ್ತದೆ. ಡಾ. ಬಿ.ಆರ್‌. ಅಂಬೇಡ್ಕರ್‌ ಕೊಟ್ಟಂತಹ ಸಂವಿಧಾನಕ್ಕೆ ಅಪಚಾರ ಮಾಡಿ, ತಿದ್ದುಪಡಿ ಮಾಡಿ, ತುರ್ತು ಪರಿಸ್ಥಿತಿ ಹೇರಿದಂತಹ ಮನಸ್ಸುಗಳ ಬಗ್ಗೆ ಮಕ್ಕಳಿಗೆ ತಿಳಿಸಬೇಕು. ಅಂದಿನ ಕತ್ತಲ ದಿನಗಳನ್ನು ಪ್ರತಿಯೊಬ್ಬರೂ ಅರಿಯಬೇಕು. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕು’ ಎಂದರು.



‘ತುರ್ತು ಪರಿಸ್ಥಿತಿ 50ನೇ ವರ್ಷ ಕರಾಳ ದಿನಗಳು’ ಪ್ರದರ್ಶನವನ್ನು ಬಿ.ಎಸ್‌. ಯಡಿಯೂರಪ್ಪ ಉದ್ಘಾಟಿಸಿದರು. ಧನರಾಜ್‌, ಎಸ್‌. ಗುರುಮೂರ್ತಿ, ಚಿ.ಸು. ಕೃಷ್ಣಸೆಟ್ಟಿ ಮತ್ತು ಸಿ.ಟಿ.ರವಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕಾಲೇಜು ಮುಂದೆ ನಿಂತಿದ್ದಾಗ ನನ್ನನ್ನು ಅಕ್ರಮವಾಗಿ ಬಂಧಿಸಲಾಗಿತ್ತು. ಶಿವಮೊಗ್ಗ, ಬಳ್ಳಾರಿ ಕಾರಾಗೃಹದಲ್ಲಿರಿಸಲಾಗಿತ್ತು. ಅಧಿಕಾರವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ಇಂದಿರಾ ಗಾಂಧಿ, ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗಕ್ಕೆ ಅಂಕುಶ ಹಾಕಿದರು. ವಾಕ್‌ ಸ್ವಾತಂತ್ರ್ಯದ ಕತ್ತು ಹಿಸುಕಿದರು’ ಎಂದು ಹೇಳಿದರು.

‘ರಾಹುಲ್‌ ಗಾಂಧಿ ಅವರು ಲೋಕಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಸಂವಿಧಾನದ ಪ್ರತಿ ಹಿಡಿದು, ರಕ್ಷಿಸುತ್ತೇವೆ ಎಂದು ಹೇಳಿದ್ದಾರೆ. ಅವರ ಅಜ್ಜಿ ಇಂದಿರಾಗಾಂಧಿ ಅದೇ ಸಂವಿಧಾನವನ್ನು ನಾಶ ಮಾಡಿದ್ದರು. ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಬಿ.ಆರ್‌. ಅಂಬೇಡ್ಕರ್‌ ರಚನೆಯ ಸಂವಿಧಾನ ಮತ್ತೆ ಜಾರಿಯಾಯಿತು. ಅದನ್ನು ರಾಹುಲ್‌ ಈಗ ಹಿಡಿದಿದ್ದಾರೆ’ ಎಂದು ಆರ್ಥಿಕ ಚಿಂತಕ ಎಸ್‌.ಗುರುಮೂರ್ತಿ ತಿಳಿಸಿದರು.

‘ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಜಾರಿ ಮಾಡಿ ಸಂವಿಧಾನವನ್ನು ತಿದ್ದುಪಡಿ ಮಾಡಿದರು. ಭಾರತದಲ್ಲಿ ಒಂದೇ ಪಕ್ಷ ಇರಬೇಕೆಂದು ನಿರಂಕುಶ ಪ್ರಭುತ್ವ ಸಾಧಿಸಲು ಹೊರಟರು. ಅವರು ಸೇರಿದಂತೆ ಕಾಂಗ್ರೆಸ್‌ನ ಯಾವ ನಾಯಕರೂ ಕರಾಳ ಅಧ್ಯಾಯವಾದ ತುರ್ತು ಪರಿಸ್ಥಿತಿ ಬಗ್ಗೆ ಇನ್ನೂ ಕ್ಷಮೆಯಾಚಿಸಿಲ್ಲ. ಸಂವಿಧಾನವನ್ನು ಹತ್ಯೆ ಮಾಡಿದವರು ಕಾಂಗ್ರೆಸ್‌ನವರು’ ಎಂದು ದೂರಿದರು. ‘ವಿದ್ಯಾರ್ಥಿ ಸಂಘಟನೆಯಲ್ಲಿದ್ದಾಗ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಂಧನವಾದಾಗ, ಕದ್ದುಮುಚ್ಚಿ ಕ್ಯಾಮೆರಾವನ್ನು ಜೈಲಿಗೆ ತೆಗೆದುಕೊಂಡು ಹೋಗಿ, ಹಲವು ನಾಯಕರ ಚಿತ್ರಗಳನ್ನು ಸೆರೆಹಿಡಿದಿದ್ದೇನೆ’ ಎಂದು ಕಲಾವಿದ ಚಿ.ಸು. ಕೃಷ್ಣಸೆಟ್ಟಿ ಸ್ಮರಿಸಿಕೊಂಡರು.

ತುರ್ತುಪರಿಸ್ಥಿತಿ ಘಟನೆಗಳನ್ನು ವಿವರಿಸುವ ಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಪುರಭವನದ ಮೆಟ್ಟಿಲುಗಳ ಮೇಲೆ ‘ಬೆಂಗಳೂರು ಕೇಂದ್ರ ಕಾರಾಗೃಹ’ದ ಪ್ರತಿಕೃತಿ ನಿರ್ಮಿಸಲಾಗಿತ್ತು. ವಿಶ್ರಾಂತ ಕುಲಪತಿ ವಿಷ್ಣುಕಾಂತ್‌ ಚಟಪಲ್ಲಿ ಉಪಸ್ಥಿತರಿದ್ದರು.

ಮೈಸೂರು ರೇಸ್‌

ಪ್ಯೂರ್‌ ಫಾರ್‌ ಶ್ಯೂರ್‌ ಗೆಲ್ಲುವ ನಿರೀಕ್ಷೆ

ಎಸ್‌.ವಿ.ಸುಬ್ರಮಣಿಯಮ್‌ ಮೆಮೋರಿಯಲ್‌ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ಯೂರ್‌ ಫಾರ್‌ ಶ್ಯೂರ್‌ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್‌: ಫಿನಿಕ್ಸ್‌ ಗೋಲ್ಡ್‌ 1, ಅನುಷ್ಟುಭ 4, ದಿ ಆರ್ಟರಿ 8
2ನೇ ರೇಸ್‌: ಕೊಸೆಟ್ಟೆ 9, ಒನ್‌ ನೇಷನ್‌ 11, ಮೈಸೂರ್‌ ಫಾರೋ 4
3ನೇ ರೇಸ್‌: ಬ್ಯೂಟಿಫುಲ್‌ ಬೂಮ್‌ 6, ಈಕೊ ಸಿಸ್ಟಮ್‌ 3, ದಿ ಲೇಡಿ ಎಂಪೋರಿಯೊ 4
4ನೇ ರೇಸ್‌: ಪೋಲಾರ್‌ ವಿಂಡ್‌ 3, ಸೆರ್ದಾರ್‌ 2, ಮ್ಯಾಜಿಕ್‌ ಸರ್ಕಲ್‌ 1
5ನೇ ರೇಸ್‌: ಪ್ಯೂರ್‌ ಫಾರ್‌ ಶ್ಯೂರ್‌ 5, ರಫಿನಾಟೊ 7, ಸ್ಟ್ಯಾಗ್ಸ್‌ ಲೀಪ್‌ 11
6ನೇ ರೇಸ್‌: ಇಗ್ನೊರೆನ್ಸ್‌ ಈಸ್‌ ಬ್ಲಿಸ್‌ 5, ಸರ್‌ ಕ್ಯಾಲ್‌ಕ್ಯುಲಸ್‌ 6, ಆರಿಲ್‌ 4
7ನೇ ರೇಸ್‌: ಓಷನ್‌ 4, ಅರಿಕಾಟು 12, ಕ್ಲೌಡಿ ಹಿಲ್ಸ್‌ 10

ಉತ್ತಮ ಬೆಟ್‌: ಓಷನ್‌

ಜಾಕ್‌ಪಾಟ್‌ಗೆ	1ನೇ ಟ್ರಿಬಲ್‌	2ನೇ ಟ್ರಿಬಲ್‌
3,4,5,6,7	2,3,4	5,6,7

ಸಂಕ್ಷಿಪ್ತ ಸುದ್ದಿ

ಬಂಡಿದೇವರ ಉತ್ಸವ ಇಂದಿನಿಂದ ಶುರು

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ಬೆಂಗಳೂರು ಬಂಡಿದೇವರ ಉತ್ಸವ ಸಮಿತಿಯಿಂದ ಜೂನ್‌ 25ರಿಂದ 27ರವರೆಗೆ ಬೆಂಗಳೂರು ಬಂಡಿದೇವರ ಉತ್ಸವ–2025 ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ತಲಕಾಡು ಚಿಕ್ಕರಂಗೇಗೌಡ, ‘ಆಧುನಿಕ ಕಾಲದಲ್ಲಿ ಕಳೆದುಹೋಗಿರುವ ನಮ್ಮ ಪರಂಪರೆಯನ್ನು ಪುನಃ ಸ್ಥಾಪಿಸಲು ಹಾಗೂ ರೈತಾಪಿ ಸಮುದಾಯದ ಸ್ವಾಭಿಮಾನದ ಕುರುಹಾಗಿ ಈ ಉತ್ಸವವನ್ನು ಆಯೋಜಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಜೂನ್‌ 25ರಂದು ಒಕ್ಕಲಿಗ ಸಂಘದ ಆವರಣದಲ್ಲಿ ಗಂಗಾಪೂಜೆ ಮಾಡುವ ಮೂಲಕ ಚಾಲನೆ ನೀಡಲಾಗುವುದು. 26ರಂದು ಬಿಬಿಎಂಪಿ ಕೇಂದ್ರ ಕಚೇರಿ ಎದುರಿಗೆ ಇರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪೂಜೆ ಸಲ್ಲಿಸಿ, 12 ಎತ್ತಿನ ಬಂಡಿಗಳೊಂದಿಗೆ ವಿಧಾನಸೌಧದವರೆಗೆ ಮೆರವಣಿಗೆ ನಡೆಸಲಾಗುವುದು. ವಿಧಾನಸೌಧದ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಗುವುದು. 27ರಂದು ಕೆಂಪೇಗೌಡರ ಜಯಂತಿ ಆಚರಿಸಲಾಗುವುದು’ ಎಂದು ಮಾಹಿತಿ ನೀಡಿದರು.

ಕೆನರಾ ಉತ್ಸವ ಇಂದಿನಿಂದ

ಬೆಂಗಳೂರು: ಕೆನರಾ ಬ್ಯಾಂಕ್‌ನಿಂದ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜೂನ್‌ 25ರಿಂದ 26ರವರೆಗೆ ಬೆಂಗಳೂರಿನ ಬನಶಂಕರಿ ಎರಡನೇ ಹಂತದಲ್ಲಿರುವ ಮಾತೃ ಛಾಯಾ ಸೇವಾ ಕ್ಷೇತ್ರ ಆಸ್ಪತ್ರೆಯ ಆವರಣದಲ್ಲಿ ಕೆನರಾ ಉತ್ಸವ ನಡೆಯಲಿದೆ.

ಉತ್ಸವದಲ್ಲಿ ಮಹಿಳಾ ಉದ್ಯಮಿಗಳು ತಯಾರಿಸಿದ ಸಿದ್ಧ ಉಡುಪುಗಳು, ಸೀರೆಗಳು ಸೇರಿದಂತೆ ವಿವಿಧ ಉತ್ಪನ್ನಗಳ ಪ್ರದರ್ಶನ, ಮಾರಾಟ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ಪುಲಕೇಶಿ ನಗರ ಸಂಚಾರ ಪೊಲೀಸ್‌ ಠಾಣಾ ವ್ಯಾಪ್ತಿಯ ಎಂಎಂ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ವೈಟ್‌ ಟಾಪಿಂಗ್‌ ಕಾಮಗಾರಿ ಕೈಗೊಂಡಿರುವುದರಿಂದ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಮಾಸ್ಕ್‌ ಜಂಕ್ಷನ್‌ನಿಂದ ಲಾಜರ್‌ ರಸ್ತೆ ಜಂಕ್ಷನ್‌ವರೆಗೆ ವಾಹನ ಸಂಚಾರ ನಿರ್ಬಂಧ ಮಾಡಲಾಗಿದೆ. ಎಂ.ಎಂ. ರಸ್ತೆ ಮತ್ತು ಮಾಸ್ಕ್‌ ರಸ್ತೆಯಲ್ಲಿ ಎಲ್ಲ ರೀತಿಯ ವಾಹನಗಳ ಪಾರ್ಕಿಂಗ್‌ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದು ಸಂಚಾರ ಪೂರ್ವ ವಿಭಾಗದ ಸಾಹಿಲ್‌ ಬಾಗ್ಲಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

28ಕ್ಕೆ ಜಗನ್ನಾಥ ರಥಯಾತ್ರೆ

ಬೆಂಗಳೂರು: ಇಸ್ಕಾನ್‌ ಸೌತ್‌ ಬೆಂಗಳೂರು ಸಂಸ್ಥೆಯು ರಾಜರಾಜೇಶ್ವರಿ ನಗರದಲ್ಲಿ ಜೂನ್‌ 28ರಂದು ಸಂಜೆ 4 ಗಂಟೆಗೆ ಜಗನ್ನಾಥರ ರಥಯಾತ್ರೆಯನ್ನು ಆಯೋಜಿಸಿದೆ.

ಈ ಯಾತ್ರೆಯು ನಿತ್ಯೆ ಗೌರ್‌ ಕಾಂಪ್ಲೆಕ್ಸ್‌ನಿಂದ ಆರಂಭವಾಗಿ ಡಬಲ್‌ ರಸ್ತೆ, ಬಿಡಿಎ ಕಾಂಪ್ಲೆಕ್ಸ್‌, ಜಯಣ್ಣ ಸರ್ಕಲ್‌, ನಿಮಿಷಾಂಬ ದೇವಸ್ಥಾನ, ರಂಗ ಮಂದಿರ ಮಾರ್ಗವಾಗಿ ಮತ್ತೆ ಕಾಂಪ್ಲೆಕ್ಸ್‌ನಲ್ಲಿ ಮುಕ್ತಾಯಗೊಳ್ಳಲಿದೆ. ಭಜನೆ, ಕೀರ್ತನೆ ಹಾಗೂ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಇಸ್ಕಾನ್‌ ರಾಜರಾಜೇಶ್ವರಿ ನಗರದ ಪನಿಹತಿಯಲ್ಲಿ ಪ್ರತಿ ಭಾನುವಾರ ಸಂಜೆ 4.30ರಿಂದ ಸಂಜೆ 7ರವರೆಗೆ ಮಕ್ಕಳಿಗೆ ‘ಗೋಪಾಲ್ಸ್‌ ಫನ್‌ ಕ್ಲಾಸಸ್‌’ ಹಾಗೂ ‘ಭಗವದ್ಗೀತಾ ಶ್ರವಣ-ಪಾಠ’ ನಡೆಯುತ್ತದೆ. ಮಾಹಿತಿಗೆ 8105310013 ಸಂಪರ್ಕಿಸಬಹುದು.

ಹಲವು ಸೌಲಭ್ಯಗಳಿಗೆ ಬೇಡಿಕೆ ಇಟ್ಟ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ

‘ಬೀದಿಬದಿ ವ್ಯಾಪಾರಿಗಳ ಒಕ್ಕಲೆಬ್ಬಿಸಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸದಿರುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ವಿವಿಧೆಡೆಯಿಂದ ಬಂದಿದ್ದ ಬೀದಿ ಬದಿ ವ್ಯಾಪಾರಿಗಳು ಬಿಬಿಎಂಪಿಯ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ಬಿಬಿಎಂಪಿ ನಡೆಸಿದ ಸಮೀಕ್ಷೆಯ ಪ್ರಕಾರ ಎಲ್ಲ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಹಾಗೂ ವ್ಯಾಪಾರ ಮಾಡುವ ಪ್ರಮಾಣಪತ್ರ ವಿತರಿಸಬೇಕು. ಸಮೀಕ್ಷೆಯಲ್ಲಿ ಭಾಗವಹಿಸದ ವ್ಯಾಪಾರಿಗಳಿಗೆ ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘2025–26ನೇ ಸಾಲಿನ ಬಿಬಿಎಂಪಿ ಬಜೆಟ್‌ನಲ್ಲಿ ಬೀದಿ ಬದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ₹10 ಕೋಟಿ ಅನುದಾನ ಮೀಸಲಿಡಲಾಗಿದೆ. ಈ ಅನುದಾನವನ್ನು ಯಾವ ರೀತಿ ಬಳಕೆ ಮಾಡಬೇಕು ಎಂಬುದರ ಕುರಿತು ಬೀದಿ ಬದಿ ವ್ಯಾಪಾರಿ ಸಂಘಟನೆಗಳೊಂದಿಗೆ ಚರ್ಚಿಸಬೇಕು. ಬೀದಿ ಬದಿ ವ್ಯಾಪಾರಿಗಳಿಗೆ ಕುಡಿಯುವ ನೀರು, ಶೌಚಾಲಯ, ಬೀದಿ ದೀಪ, ಮಳೆ, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಟಾರ್ಪಲ್‌ ವ್ಯವಸ್ಥೆ ಹಾಗೂ ಗೋದಾಮುಗಳ ಸೌಲಭ್ಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ಬೀದಿ ಬದಿ ವ್ಯಾಪಾರಿಗಳ ಸಾಮಾಜಿಕ ಭದ್ರತೆಗಾಗಿ ಪಿಂಚಣಿ ಯೋಜನೆ, ಆರೋಗ್ಯ ವಿಮೆ, ಭವಿಷ್ಯ ನಿಧಿ, ಅವರ ಮಕ್ಕಳಿಗೆ ವಿದ್ಯಾರ್ಥಿವೇತನದ ಸೌಲಭ್ಯ ನೀಡಬೇಕು. ಬೀದಿ ಬದಿ ವ್ಯಾಪಾರಿಗಳ ಕಾಯ್ದೆ ಬಗ್ಗೆ, ಬೀದಿ ಬದಿ ವ್ಯಾಪಾರದ ಮಹತ್ವದ ಬಗ್ಗೆ ಎಲ್ಲ ಶಾಸಕರಿಗೆ, ಪೊಲೀಸ್‌ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಪಟ್ಟಣ ವ್ಯಾಪಾರ ಸಮಿತಿಗಳಿಗೆ ಕಚೇರಿ ನೀಡುವುದರ ಜೊತೆಗೆ ಪ್ರತ್ಯೇಕ ಅನುದಾನವನ್ನು ನೀಡಬೇಕು’ ಎಂದರು.

ಮುಖ್ಯಾಂಶಗಳು

- ವ್ಯಾಪಾರಿಗಳಿಗೆ ಮೂಲಸೌಲಭ್ಯ ಒದಗಿಸಿ
- ಕಾಯ್ದೆ ಕುರಿತು ಶಾಸಕರು, ಅಧಿಕಾರಿಳಿಗೆ ಕಾರ್ಯಾಗಾರ ನಡೆಸಿ
- ಪಟ್ಟಣ ವ್ಯಾಪಾರ ಸಮಿತಿಗೆ ಪ್ರತ್ಯೇಕ ಅನುದಾನ ನೀಡಿ

‘ಕಿರುಕುಳ ನೀಡದಂತೆ ಆದೇಶ ಹೊರಡಿಸಿ’

‘ಚರ್ಚ್‌ ಸ್ಟ್ರೀಟ್‌, ಸೇಂಟ್‌ ಜಾನ್ಸ್‌ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ವ್ಯಾಪಾರ ಮಾಡುವ ಬೀದಿ ಬದಿ ವ್ಯಾಪಾರಿಗಳಿಗೆ ಬಿಬಿಎಂಪಿ ಅಧಿಕಾರಿಗಳು ಕಿರುಕುಳ ನೀಡದಂತೆ ಆದೇಶ ಹೊರಡಿಸಬೇಕು’ ಎಂದು ಸಂಘದ ಅಧ್ಯಕ್ಷ ಎಸ್‌. ಬಾಬು, ಜಂಟಿ ಕಾರ್ಯದರ್ಶಿ ಲೇಖಾ ಆಗ್ರಹಿಸಿದರು.

‘ರಸ್ತೆ ವಿಸ್ತರಣೆ, ಮೆಟ್ರೊ ನಿರ್ಮಾಣದ ಕಾಮಗಾರಿ, ವೈಟ್‌ ಟಾಪಿಂಗ್‌ ಮುಂತಾದ ಯೋಜನೆಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ, ಬೀದಿ ವ್ಯಾಪಾರಿಗಳನ್ನು ಸ್ಥಳಾಂತರಿಸುವ ಮುನ್ನ, ಪಟ್ಟಣ ವ್ಯಾಪಾರ ಸಮಿತಿಯಲ್ಲಿ ಚರ್ಚಿಸಿ, ಬಳಿಕ ತೀರ್ಮಾನಿಸಬೇಕು’ ಎಂದು ಹೇಳಿದರು.

ಮಳೆ: ಕೊಚ್ಚಿಹೋದ ಹೆದ್ದಾರಿ ತಡೆಗೋಡೆ

ಕೆಲವೆಡೆ ಶಾಲೆ, ಕಾಲೇಜುಗಳಿಗೆ ರಜೆ ಮಾಸ್ತಿಕಟ್ಟೆಯಲ್ಲಿ 14.8 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಹಾಸನ/ಚಿಕ್ಕಮಗಳೂರು: ರಾಜ್ಯದ ಕೆಲ ಭಾಗಗಳಲ್ಲಿ ಮಂಗಳವಾರ ಮಳೆ ಆರ್ಭಟ ಮತ್ತೆ ಶುರುವಾಗಿದೆ. ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ , ನಿರಂತರ ಮಳೆಗೆ ಸಕಲೇಶಪುರ ತಾಲ್ಲೂಕಿನ ಆನೆಮಹಲ್– ದೋಣಿಗಲ್ ನಡುವೆ ರಾಷ್ಟ್ರೀಯ ಹೆದ್ದಾರಿ ಬದಿಗೆ ನಿರ್ಮಿಸಿದ್ದ 100 ಮೀಟರ್ ಉದ್ದದ ತಡೆಗೋಡೆ ಸಂಪೂರ್ಣ ಕೊಚ್ಚಿ ಹೋಗಿದೆ.

ಈ ಹೆದ್ದಾರಿ ಪಕ್ಕದಲ್ಲಿ ಕಳೆದ ವಾರ ನಿರ್ಮಿಸಿರುವ ಕಾಂಕ್ರೀಟ್ ರಸ್ತೆಯೂ ಬಿರುಕು ಬಿಟ್ಟಿದೆ. ಮಳೆ ಹೆಚ್ಚಾದರೆ ತಡೆಗೋಡೆ ಕುಸಿಯುವ ಆತಂಕ ಎದುರಾಗಿದೆ. ಸದ್ಯ ವಾಹನಗಳು ಸಂಚರಿಸುತ್ತಿವೆ.

ಮಂಗಳವಾರ ಸಕಲೇಶಪುರ ತಾಲ್ಲೂಕಿನ ಅಂಗನವಾಡಿ ಹಾಗೂ ಶಾಲೆಗಳಿಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ರಜೆ ಘೋಷಿಸಿದ್ದರು. ಹಾಸನ ಜಿಲ್ಲೆಯ ಕೆಲವೆಡೆ ಶಾಲಾ–ಕಾಲೇಜುಗಳಿಗೆ ಬುಧವಾರ ರಜೆ ಘೋಷಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಗಾಳಿ ಮತ್ತು ಮಳೆ ಜೋರಾಗಿದ್ದು, ಕಳಸ ತಾಲ್ಲೂಕಿನ ಬಸರೀಕಲ್ ಚೆಕ್‌ಪೋಸ್ಟ್ ಬಳಿ ದೊಡ್ಡ ಮರವೊಂದು ರಸ್ತೆಗೆ ಉರುಳಿದೆ. ಮರ ಬಿದ್ದಿರುವುದರಿಂದ ಕಳಸ–ಕಾರ್ಕಳ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಬಂದ್ ಆಗಿತ್ತು. ಪೊಲೀಸರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಮರ ತೆರವು ಮಾಡಿದರು.

ಕೊಪ್ಪ, ಕಳಸ, ಕುದುರೆಮುಖ, ಶೃಂಗೇರಿ, ಮೂಡಿಗೆರೆ, ಕೊಟ್ಟಿಗೆಹಾರ, ಬಾಳೆಹೊನ್ನೂರು, ನರಸಿಂಹರಾಜಪುರ ಭಾಗದಲ್ಲಿ ಮಳೆ ಜೋರಾಗಿದೆ.

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಬೆಳಗಾವಿ ತಾಲ್ಲೂಕು, ಖಾನಾಪುರ ತಾಲ್ಲೂಕುಗಳಲ್ಲಿ ಮಂಗಳವಾರ ಇಡೀ ದಿನ ಉತ್ತಮ ಮಳೆ ಸುರಿಯಿತು. ಆದರೆ ಮಹಾರಾಷ್ಟ್ರದ ಪಶ್ಚಿಮ ಘಟ್ಟ ಹಾಗೂ ಚಿಕ್ಕೋಡಿ ಉಪ ವಿಭಾಗದಲ್ಲಿ ಮಳೆ ಪ್ರಮಾಣ ಸ್ವಲ್ಪ ತಗ್ಗಿದ್ದು, ಕೃಷ್ಣಾ ಹಾಗೂ ಉಪನದಿಗಳ ನೀರಿನ ಹರಿಯುವ ಪ್ರಮಾಣ ಇಳಿಮುಖವಾಗಿದೆ.

ಕೊಲ್ಹಾಪುರ ಜಿಲ್ಲೆಯ ರಾಜಾಪುರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 58,667 ಕ್ಯೂಸೆಕ್ ಹೊರ ಹರಿವು ಇದ್ದು, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ದೂಧಗಂಗಾ ನದಿಗೆ 12,320 ಕ್ಯೂಸೆಕ್ ಒಳ ಹರಿವು ಇದೆ.

ಕಲ್ಲೋಳ– ಯಡೂರ ಸೇತುವೆ ಬಳಿಯಲ್ಲಿ ಕೃಷ್ಣಾ ನದಿಗೆ 70,087 ಕ್ಯೂಸೆಕ್ ಹೊರ ಹರಿವು ಇದೆ. ಸೋಮವಾರಕ್ಕಿಂತ ಮಂಗಳವಾರ ಕೃಷ್ಣಾ ನದಿ ನೀರಿನ ಹೊರ ಹರಿವಿನಲ್ಲಿ 8,797 ಕ್ಯೂಸೆಕ್ ಕಡಿಮೆಯಾಗಿದೆ. ಆದರೂ ವಾರದ ಹಿಂದೆ ನೀರಿನಲ್ಲಿ ಮುಳುಗಿದ ನಾಲ್ಕು ಸೇತುವೆಗಳು ಇನ್ನೂ ತೆರವುಕಂಡಿಲ್ಲ.

ಬೆಳಗಾವಿ ವರದಿ: ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳು, ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜೂನ್ 25ರಂದು ರಜೆ ಘೋಷಿಸಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶ ಹೊರಡಿಸಿದ್ದಾರೆ.

ಶಿವಮೊಗ್ಗ: ಮಲೆನಾಡಿನಲ್ಲಿ ಮತ್ತೆ ಮಳೆ ಬಿರುಸುಗೊಂಡಿದೆ. ತೀರ್ಥಹಳ್ಳಿ, ಸಾಗರ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ಉತ್ತಮ ವರ್ಷಧಾರೆಯಾಗಿದೆ. ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಹೊಸನಗರ ತಾಲ್ಲೂಕಿನ ಮಾಸ್ತಿಕಟ್ಟೆಯಲ್ಲಿ 14.8 ಸೆಂ.ಮೀ, ಹುಲಿಕಲ್‌ನಲ್ಲಿ 13.40 ಸೆಂ.ಮೀ, ಚಕ್ರಾ 11 ಸೆಂ.ಮೀ ಮಳೆ ದಾಖಲಾಗಿದೆ.

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆಯ ಬಿರುಸು ತಗ್ಗಿದ್ದರೂ ಗಾಳಿಯ ಅಬ್ಬರ ಕಡಿಮೆಯಾಗಿಲ್ಲ. ಬಿರುಗಾಳಿಗೆ ಹಲವೆಡೆ ಮರಗಳು ಬುಡಮೇಲಾಗಿವೆ.

ಕೊಡ್ಲಿಪೇಟೆ– ಸೋಮವಾರಪೇಟೆ ಮುಖ್ಯರಸ್ತೆಗೆ ಮರ ಉರುಳಿ ಸಂಚಾರ ಅಸ್ತವ್ಯಸ್ತಗೊಂಡಿತ್ತು. ವಿರಾಜಪೇಟೆ ಹೋಬಳಿ ಪೂದಕೋಟೆ ಗ್ರಾಮದಲ್ಲಿ ಮನೆ ಕುಸಿದಿದೆ. ಹಾರಂಗಿ ಜಲಾಶಯದ ಹೊರ ಹರಿವನ್ನು 3 ಸಾವಿರ ಕ್ಯುಸೆಕ್‌ನಿಂದ 5 ಸಾವಿರ ಕ್ಯುಸೆಕ್‌ಗೆ ಹೆಚ್ಚಿಸಲಾಗಿದೆ.

ಜೂನ್ 25ರಂದು ಕೊಡಗು ಜಿಲ್ಲೆಗೆ ಹವಾಮಾನ ಇಲಾಖೆ ಯೆಲ್ಲೊ ಅಲರ್ಟ್ ನೀಡಿದೆ.



ಉಪ್ಪಿನಂಗಡಿ ಸಮೀಪ ರಾಷ್ಟ್ರೀಯ ಹೆದ್ದಾರಿ 75ರ ಮಣ್ಣಗುಂಡಿಯಲ್ಲಿ ಗುಡ್ಡ ಕುಸಿದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ

ಗುಡ್ಡ ಕುಸಿತ: ಸಂಚಾರಕ್ಕೆ ತೊಂದರೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ರಾಷ್ಟ್ರೀಯ ಹೆದ್ದಾರಿ 75ರಲ್ಲಿ ನೆಲ್ಯಾಡಿ ಸಮೀಪದ ಮಣ್ಣಗುಂಡಿ ಎಂಬಲ್ಲಿ ಮಂಗಳವಾರ ಸಂಜೆ ಗುಡ್ಡದ ಮಣ್ಣು ರಸ್ತೆಗೆ ಕುಸಿದು ಮಂಗಳೂರು-ಬೆಂಗಳೂರು ಮಧ್ಯೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಬಿ.ಸಿ.ರೋಡ್‌ನಿಂದ ಅಡ್ಡಹೊಳೆ ವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಮಣ್ಣಗುಂಡಿಯಲ್ಲಿ ರಸ್ತೆ ನಿರ್ಮಾಣ ಸಂಬಂಧ ಗುಡ್ಡ ಅಗೆಯಲಾಗಿದೆ. ಇಲ್ಲಿ ನೇರವಾಗಿ ಗುಡ್ಡ ಅಗೆದಿರುವುದರಿಂದ ಕೆಲ ದಿನಗಳಿಂದ ಮಣ್ಣು ಕುಸಿಯುತ್ತಿದೆ. ಒಂದು ಬದಿಯಲ್ಲಿ ಮಾತ್ರ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಮಂಗಳವಾರ ಸುರಿದ ಮಳೆಯಿಂದಾಗಿ ಸಂಜೆ ವೇಳೆ ದೊಡ್ಡ ಪ್ರಮಾಣದಲ್ಲಿ ಮಣ್ಣು ಕುಸಿದಿದೆ.

ಮಣ್ಣು ರಸ್ತೆಗೆ ಬಿದ್ದಿರುವುದರಿಂದ ಬಸ್ ಹಾಗೂ ಭಾರಿ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ರಸ್ತೆಗೆ ಬಿದ್ದ ಮಣ್ಣನ್ನು ಹೆದ್ದಾರಿ ಪ್ರಾಧಿಕಾರದವರು ತೆರವು ಮಾಡುತ್ತಿದ್ದಾರೆ. ಆದರೂ ಮಣ್ಣು ಬೀಳುತ್ತಲೇ ಇದೆ ಎಂದು ಉಪ್ಪಿನಂಗಡಿ ಸಬ್ ಇನ್‌ಸ್ಪೆಕ್ಟರ್ ಅವಿನಾಶ್ ತಿಳಿಸಿದ್ದಾರೆ.

ಮಲ್ಲಿಗೆ ಪತ್ತೆ ಪ್ರಕರಣ: ಮೇಲ್ಮನವಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಪತ್ನಿ ನಾಪತ್ತೆಯಾದ ಕುರಿತು ದೂರು ನೀಡಿದ ಪತಿ ಸುರೇಶ್ ವಿರುದ್ಧವೇ ಪತ್ನಿಯ ಕೊಲೆ ಆರೋಪ ಹೊರಿಸಿ ಸುಳ್ಳು ಪ್ರಕರಣ ದಾಖಲಿಸಿದ್ದ ಪ್ರಕರಣದ ಕುರಿತು 5ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯವು ನೀಡಿದ ಆದೇಶ ಪ್ರಶ್ನಿಸಿ, ಸುರೇಶ್ ಪರ ವಕೀಲರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಪ್ರಕರಣದ ಅಂದಿನ ತನಿಖಾಧಿಕಾರಿ ಬಿ.ಜಿ.ಪ್ರಕಾಶ್, ತಂಡದಲ್ಲಿದ್ದ ಅಂದಿನ ಪ್ರೊಬೆಷನರಿ ಐಪಿಎಸ್ ಅಧಿಕಾರಿ ಜಿತೇಂದ್ರ ಕುಮಾರ್, ಬೆಟ್ಟದಪುರ ಪಿಎಸ್‌ಐ ಮಹೇಶ್ ಕುಮಾರ್, ಎಸ್‌ಐ ಪ್ರಕಾಶ್ ಎತ್ತಿಮನಿ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಿ ವಕೀಲ ಕುಮಾರ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

‘ತನಿಖಾಧಿಕಾರಿ ಬಿ.ಜಿ.ಪ್ರಕಾಶ್ ವಿರುದ್ಧವಷ್ಟೇ ಪ್ರಕರಣ ದಾಖಲಿಸಲು ಜಿಲ್ಲಾ ನ್ಯಾಯಾಲಯವು ಸೂಚಿಸಿದೆ. ಇತರ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಬೇಕು. ಸುರೇಶ್ ಅವರನ್ನು ಸಾಕ್ಷಿದಾರ ಎಂದು ಗುರುತಿಸಬೇಕು ಹಾಗೂ ಆರೋಪಿ ಅಧಿಕಾರಿಗಳು ಸುರೇಶ್‌ಗೆ ₹5 ಕೋಟಿ ಪರಿಹಾರ ನೀಡಬೇಕೆಂದು ಮನವಿ ಸಲ್ಲಿಸಲಾಗಿದೆ’ ಎಂದು ಸುರೇಶ್ ಪರ ವಕೀಲ ಪಾಂಡು ಪೂಜಾರಿ ಅವರು ತಿಳಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	120.78	17,560	8729
ಹಾರಂಗಿ	2,859	2,851.52	4,612	5,000
ಕಬಿನಿ	2,284.00	2,278.21	15,078	12,000
ಹೇಮಾವತಿ	2,922	2,915.58	9,494	4,700
ಲಿಂಗನಮಕ್ಕಿ	1,819	1,776.65	29,784	5052
ಸೂಪಾ (ಮೀ)	564	533.04	18,375	955.61
ಮಾಣಿ	595	581.34	3,724	-
ತುಂಗಭದ್ರಾ	1,633	1,614.94	23,366	196
ಮಲಪ್ರಭಾ	2,079.5	2,055.85	3,436	194
ಘಟಪ್ರಭಾ	2175	2,125.25	12,856	130
ಭದ್ರಾ *	186	153.06	10,933	1,280
ಆಲಮಟ್ಟಿ (ಮೀ)	519.6	516.33	83,426	67,500
ನಾರಾಯಣಪುರ (ಮೀ)	492.25	490.70	66,704	65,180

* ನೆಲಮಟ್ಟದಿಂದ

ಮಧ್ಯವರ್ತಿಗಳ ಪಾತ್ರ ಸಾಬೀತು

ಒಂದನೇ ಪುಟದಿಂದ...

ದೃಢಪಡದ ವಿದ್ಯಾರ್ಥಿಗಳ ಪಾತ್ರ: 2024–25ನೇ ಸಾಲಿಗೆ ನಡೆದಿದ್ದ ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಕಾಲೇಜಿಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದಾರೆ ಎಂದು ದೂರಿದ್ದ ಕೆಇಎ ಅಂತಹ 2,348 ವಿದ್ಯಾರ್ಥಿಗಳಿಗೆ ನೋಟಿಸ್ ನೀಡಿತ್ತು.

ನೋಟಿಸ್‌ಗೆ ವಿದ್ಯಾರ್ಥಿಗಳು ನೀಡಿದ ಉತ್ತರದ ಮೂಲಕ ಬಹುನೋಂದಣಿಯಾಗಿದ್ದ ಐ.ಪಿ ವಿಳಾಸಗಳನ್ನು ಗುರುತಿಸಲಾಗಿತ್ತು. ಸುಮಾರು 50 ಐ.ಪಿ ವಿಳಾಸದಿಂದ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಬಹುಬೇಡಿಕೆ ಇರುವ ಕೋರ್ಸ್‌ಗಳ ಸೀಟು ಪಡೆದಿರುವುದು ಮೇಲ್ನೋಟಕ್ಕೆ ಪತ್ತೆಯಾಗಿತ್ತು. ಕೆಇಎ ನೀಡಿದ ನೋಟಿಸ್‌ಗೆ ಕೆಲವರಷ್ಟೇ ಉತ್ತರ ನೀಡಿದ್ದರು. 1,600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತರ ನೀಡಿರಲಿಲ್ಲ. ಅವರಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು 2025–26ನೇ ಸಾಲಿನ ಸಿಇಟಿ ಬರೆದಿದ್ದರು. ಅವರ ಶ್ರೇಯಾಂಕವನ್ನು ಪರೀಕ್ಷಾ ಪ್ರಾಧಿಕಾರ ತಡೆಹಿಡಿದಿದೆ. ಆದರೆ, ಸೀಟ್ ಬ್ಲಾಕಿಂಗ್ ಪ್ರಕರಣದಲ್ಲಿ ವಿದ್ಯಾರ್ಥಿಗಳು ಭಾಗಿಯಾಗಿರುವ ಕುರಿತು ಹೆಚ್ಚಿನ ಸಾಕ್ಷ್ಯಗಳು ಲಭಿಸಿಲ್ಲ. ಹಾಗಾಗಿ, ಯಾವ ವಿದ್ಯಾರ್ಥಿಯನ್ನೂ ಅಧಿಕೃತವಾಗಿ ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಸಾಧ್ಯವಾಗಿಲ್ಲ ಎಂದು ವರದಿ ಹೇಳಿದೆ.

ಕಾವ್ಯ, ಕಥಾ ಸ್ಪರ್ಧೆ ವಿಜೇತರು

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘವು ‘ಚೆನ್ನವೀರ ಕಣವಿ ಮತ್ತು ಶಾಂತಾದೇವಿ ಕಣವಿ ದತ್ತಿ’ ಅಂಗವಾಗಿ ಆಯೋಜಿಸಿದ್ದ ಚೆನ್ನವೀರ ಕಣವಿ ಕಾವ್ಯ ಸ್ಪರ್ಧೆಯಲ್ಲಿ ಹಾವೇರಿಯ ಮಧು ಕಾರಗಿ ಪ್ರಥಮ, ದಕ್ಷಿಣ ಕನ್ನಡದ ಜಯಶ್ರೀ ಇಡ್ಕಿದು ದ್ವಿತೀಯ, ರಾಯಚೂರಿನ ಸಂಜೀವ ಜಗ್ಲಿ ಹಾಗೂ ಶಿರಸಿಯ ಚಂದನಾ ಡಿ. ನಾಯ್ಕ ಅವರು ತೃತಿಯ ಬಹುಮಾನ ಪಡೆದಿದ್ದಾರೆ.

ಶಾಂತಾದೇವಿ ಕಣವಿ ಕಥಾ ಸ್ಪರ್ಧೆಯಲ್ಲಿ ಶಿವಮೊಗ್ಗದ ದಿವ್ಯಶ್ರೀ ಅದರಂತೆ ಪ್ರಥಮ, ಬೆಳಗಾವಿಯ ರಂಜಿತಾ ವಿಕ್ರಮಹಾಜನ ದ್ವಿತೀಯ, ಕೊಪ್ಪಳದ ವಿದ್ಯಾಶ್ರೀ ಹಡಪದ ಹಾಗೂ ಹಾವೇರಿಯ ಕೆ.ಎಸ್. ಕಾವ್ಯಾ ತೃತೀಯ ಬಹುಮಾನ ಪಡೆದಿದ್ದಾರೆ.

ಜೂನ್ 28ರಂದು ಬೆಳಿಗ್ಗೆ 10.30ಕ್ಕೆ ನಡೆಯುವ ಚೆನ್ನವೀರ ಕಣವಿ ಜನ್ಮದಿನ ಕಾರ್ಯಕ್ರಮದಲ್ಲಿ ಬಹುಮಾನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ದೊಡ್ಡರಂಗೇಗೌಡರ ಚಿಕಿತ್ಸಾ ವೆಚ್ಚ ಸರ್ಕಾರದಿಂದ ಪಾವತಿ: ತಂಗಡಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಅನಾರೋಗ್ಯದ ಕಾರಣ ಕೆಂಗೇರಿಯ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿರುವ ಸಾಹಿತಿ ದೊಡ್ಡರಂಗೇಗೌಡ ಅವರ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಸರ್ಕಾರದಿಂದಲೇ ಭರಿಸುವುದಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ದೊಡ್ಡರಂಗೇಗೌಡ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿದ ಸಚಿವ ತಂಗಡಗಿ, ವೈದ್ಯರಿಂದ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದರು.



ದೊಡ್ಡರಂಗೇಗೌಡ

‘ಮುಖ್ಯಮಂತ್ರಿ ಅವರ ಆದೇಶದ ಅನುಸಾರ ದೊಡ್ಡರಂಗೇಗೌಡ ಅವರ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುವುದು’ ಎಂದು ತಿಳಿಸಿದ ಸಚಿವರು, ‘ಅಗತ್ಯವಿರುವ ಎಲ್ಲ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು’ ಎಂದು ವೈದ್ಯರಿಗೆ ಸೂಚಿಸಿದರು.

ಇದೇ ವೇಳೆ ಅವರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಧೈರ್ಯ ತುಂಬಿದ ಅವರು, ‘ದೊಡ್ಡರಂಗೇಗೌಡರು ಕನ್ನಡ ಸಾಂಸ್ಕೃತಿಕ ಲೋಕದ ಆಸ್ತಿ. ಅವರ ಬಗ್ಗೆ ಅಪಾರವಾದ ಕಾಳಜಿ ಇದೆ. ಸರ್ಕಾರದಿಂದ ಅವರಿಗೆ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ತಿಳಿಸಿದರು.

ನಿಧನ ವಾರ್ತೆ

ಮಹಾದೇವಪ್ಪ ಕಡೇಚೂರ



ಕಲಬುರಗಿ: ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟಗಾರ, ಬಿಜೆಪಿಯ ಮುಖಂಡ ಮಹಾದೇವಪ್ಪ ಕಡೇಚೂರ (95) ಮಂಗಳವಾರ ಇಲ್ಲಿ ನಿಧನರಾದರು.

ಮಹಾದೇವಪ್ಪ ಅವರು ಕೆಲ ದಿನಗಳಿಂದ ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಇವರ ಪತ್ನಿ ಬಾಲಮ್ಮ ಇತ್ತೀಚೆಗೆ ನಿಧನರಾಗಿದ್ದರು. ಅವರಿಗೆ ಐವರು ಪುತ್ರರು, ಪುತ್ರಿ ಇದ್ದಾರೆ.

ಮೂಲತಃ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮಹಾದೇವಪ್ಪ ಅವರು, ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟಗಾರರಾಗಿ, ಶಿಕ್ಷಕರಾಗಿ, ಪತ್ರಕರ್ತರಾಗಿ ಗುರುತಿಸಿಕೊಂಡಿದ್ದರು. 2022ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ವೀರೇಶನಗರದ ಸ್ವಂತ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಕುಸಿದು ಬಿದ್ದು ವಿದ್ಯಾರ್ಥಿನಿ ಸಾವು

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಚಮಕೇರಿ ಗ್ರಾಮದ ಖಾಸಗಿ ಶಾಲಾ ಆವರಣದಲ್ಲಿ ಮಂಗಳವಾರ ಆಟ ಆಡುತ್ತಿದ್ದ ಎಂಟನೇ ತರಗತಿ ವಿದ್ಯಾರ್ಥಿನಿ ಬೇಡರಹಟ್ಟಿಯ ರೇಣುಕಾ ಸಂಜಯ ಬಂಡಗರ (15) ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಹೃದಯಾಘಾತದಿಂದ ಸಾವು ಸಂಭವಿಸಿದ ಶಂಕೆ ವ್ಯಕ್ತವಾಗಿದೆ. ‘ಸಹಪಾಠಿಗಳ ಜತೆ ಆಟ ಆಡುತ್ತಿದ್ದಾಗ ರೇಣುಕಾ ಕುಸಿದುಬಿದ್ದರು, ಆಕೆ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು’ ಎಂದು ಪಾಲಕರು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ವರದಿಯಲ್ಲಿ ಸಾವಿಗೆ ನಿಖರ ಕಾರಣ ತಿಳಿಯಲಿದೆ’ ಎಂದು ಐಗಳಿ ಪೊಲೀಸರು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಇಂದು ಶುಭಾಂಶು ಐಎಸ್ಎಸ್‌ನತ್ತ

ನವದೆಹಲಿ: 'ಆ್ಯಕ್ಸಿಯಂ–4' ಅಂತರಿಕ್ಷ ಕಾರ್ಯಕ್ರಮದ ಭಾಗವಾಗಿ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಜೂನ್ 25ರಂದು ಮಧ್ಯಾಹ್ನ 12.01ಕ್ಕೆ (ಭಾರತೀಯ ಕಾಲಮಾನ) ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಪ್ರಯಾಣ ಬೆಳೆಸುವರು ಎಂದು ನಾಸಾ ಮಂಗಳವಾರ ಘೋಷಿಸಿದೆ.


ಶುಭಾಂಶು ಶುಕ್ಲಾ

'ಶುಭಾಂಶು ಶುಕ್ಲಾ ಅಲ್ಲದೆ, ಹಂಗರಿ ಮತ್ತು ಪೋಲೆಂಡ್‌ನ ಗಗನಯಾತ್ರಿಗಳಿರುವ ಗಗನನೌಕೆಯನ್ನು ಹೊತ್ತ ಸ್ಪೇಸ್‌ಎಕ್ಸ್‌ನ 'ಫಾಲ್ಕನ್–9' ರಾಕೆಟ್ ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಚಿಮ್ಮಲಿದೆ' ಎಂದಿದೆ.

'ನಾಸಾ, ಆ್ಯಕ್ಸಿಯಂ ಸ್ಪೇಸ್ ಹಾಗೂ ಇಲಾನ್ ಮಸ್ಕ್ ಒಡೆತನ ಸ್ಪೇಸ್‌ಎಕ್ಸ್ ಜಂಟಿಯಾಗಿ ಈ ಬಾಹ್ಯಾಕಾಶ ಕಾರ್ಯಕ್ರಮ ರೂಪಿಸಿವೆ. ಕಮಾಂಡರ್ ಪೆಗ್ಗಿ ವಿಟ್ಸನ್ ನೇತೃತ್ವದಲ್ಲಿ, ಶುಕ್ಲಾ, ಹಂಗರಿಯ ಟಿಬೊರ್ ಕಾಪು, ಪೋಲೆಂಡ್‌ನ ಸ್ಲಾವೋಜ್ ವಿಸ್‌ನೀವ್‌ಸ್ಕಿ ಕೂಡ ಐಎಸ್‌ಎಸ್‌ಗೆ ತೆರಳಲಿದ್ದಾರೆ. ಜೂನ್ 26ರಂದು ಬೆಳಿಗ್ಗೆ 7ಕ್ಕೆ (ಭಾರತೀಯ ಕಾಲಮಾನ), ಶುಭಾಂಶು ಶುಕ್ಲಾ ಅವರು ಇರುವ ಗಗನನೌಕೆಯನ್ನು ಐಎಸ್‌ಎಸ್‌ಗೆ ಜೋಡಿಸುವ ಗುರಿ ಹೊಂದಲಾಗಿದೆ. ವಿವಿಧ ಕಾರಣಗಳಿಗಾಗಿ ಒಟ್ಟು ಆರು ಬಾರಿ ಈ ಬಾಹ್ಯಾಕಾಶ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು.

ಲಾಡು ಪಡೆಯಲು ಕಿಯೋಸ್ಕ್ ಅಳವಡಿಕೆ


ತಿರುಪತಿ ಲಡ್ಡು

ತಿರುಪತಿ (ಆಂಧ್ರಪ್ರದೇಶ) (ಪಿಟಿಐ): ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಮಂಡಳಿಯು ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳು ಲಾಡು ಪ್ರಸಾದ ಪಡೆಯಲು ಅನುಕೂಲ ವಾಗುವಂತೆ ಕಿಯೋಸ್ಕ್‌ಗಳನ್ನು ಅಳವಡಿಸಿದೆ ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

ಟಿಟಿಡಿ ಪ್ರಕಟಣೆಯ ಪ್ರಕಾರ, ದೇವಸ್ಥಾನದ ವಿವಿಧ ಲಾಡು ಕೌಂಟರ್‌ಗಳ ಬಳಿ ಈ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗಿದೆ.

ಹೆಚ್ಚುವರಿ ಲಾಡು ಪಡೆಯುವುದಕ್ಕಾಗಿ ಭಕ್ತಾದಿಗಳು ಸರದಿ ಸಾಲಿನಲ್ಲಿ ನಿಂತು ಕೌಂಟರ್‌ಗಳ ಬಳಿಯೇ ಪಾವತಿ ಮಾಡಬೇಕಿತ್ತು. ಆದರೆ, ಇನ್ನು ಮುಂದೆ ಹೆಚ್ಚುವರಿ ಲಾಡುಗಳು ಬೇಕಾಗಿದ್ದರೆ ಕಿಯೋಸ್ಕ್‌ಗೆ ಯುಪಿಐ ಮೂಲಕ ಪಾವತಿ ಮಾಡಬೇಕು. ನಂತರ ಸಿಗುವ ಪಾವತಿ ಚೀಟಿಯನ್ನು ಲಡ್ಡು ಕೌಂಟರ್‌ಗೆ ನೀಡಿ ಹೆಚ್ಚುವರಿ ಲಡ್ಡು ಪಡೆಯಬಹುದಾಗಿದೆ. ಇದರಿಂದ ಕ್ಯೂನಲ್ಲಿ ಕಾಯಬೇಕಾದ ಪರಿಸ್ಥಿತಿ ಇರುವುದಿಲ್ಲ ಎಂದೂ ಟಿಟಿಡಿ ತಿಳಿಸಿದೆ.

'ವಿಮಾನ ದುರಂತ ಭಾರತದಲ್ಲೇ ಇದೆ ಬ್ಲ್ಯಾಕ್‌ಬಾಕ್ಸ್'

ಪುಣೆ (ಪಿಟಿಐ): 'ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾಗಿದ್ದ ಏರ್ ಇಂಡಿಯಾ ವಿಮಾನದ ಬ್ಲ್ಯಾಕ್‌ಬಾಕ್ಸ್ ಅನ್ನು ವಿಮಾನ ಅಪಘಾತ ತನಿಖಾ ಸಂಸ್ಥೆಯು (ಎಎಐಬಿ) ಪರಿಶೀಲಿಸುತ್ತಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ ನಾಯ್ಡು ಮಂಗಳವಾರ ತಿಳಿಸಿದ್ದಾರೆ.


ರಾಮಮೋಹನ ನಾಯ್ಡು

ಬ್ಲ್ಯಾಕ್‌ಬಾಕ್ಸ್ ಅನ್ನು ವಿಶ್ಲೇಷಣೆಗಾಗಿ ವಿದೇಶಕ್ಕೆ ಕಳುಹಿಸಲಾಗುತ್ತದೆ ಎಂಬ ಊಹಾಪೋಹವನ್ನು ಅವರು ತಳ್ಳಿಹಾಕಿದ್ದಾರೆ.

'ಬ್ಲ್ಯಾಕ್‌ಬಾಕ್ಸ್ ಭಾರತದಲ್ಲೇ ಇದೆ. ಎಎಐಬಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ' ಎಂದು ಹೇಳಿದ್ದಾರೆ.

ಪ್ರದೀಪ್ ವಿರುದ್ಧ ಸ್ವಪಕ್ಷೀಯರ ಕೆಂಡ

ಚಿಕ್ಕಬಳ್ಳಾಪುರ: ಕೋಲಾರ ನಂತರ ಚಿಕ್ಕಬಳ್ಳಾಪುರ ಕಾಂಗ್ರೆಸ್‌ನಲ್ಲಿಯೂ ಅಸಮಾಧಾನದ ಹೊಗೆ ದಟ್ಟವಾಗಿದೆ. ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಹಲವು ದಿನಗಳಿಂದ ಪಕ್ಷದಲ್ಲಿದ್ದ ಭಿನ್ನಮತ ಈಗ ಹೈಕಮಾಂಡ್ ಅಂಗಳ ತಲುಪಿದೆ.

ಶಾಸಕರ ಧೋರಣೆ ವಿರುದ್ಧ ಚಿಕ್ಕಬಳ್ಳಾಪುರ ಕ್ಷೇತ್ರದ ಸ್ವಪಕ್ಷೀಯ ಮುಖಂಡರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅವರಿಗೆ ಮೂರು ಪುಟಗಳ ದೂರು ಸಲ್ಲಿಸಿದ್ದಾರೆ.


'ಶಾಸಕ ಪ್ರದೀಪ್ ಈಶ್ವರ್ ಧೋರಣೆಯಿಂದ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ದಿವಾಳಿ ಆಗುತ್ತಿದೆ. ಈ ಬೆಳವಣಿಗೆ ಗಮನಿಸಲು ಕೆಪಿಸಿಸಿ ಕ್ಷೇತ್ರಕ್ಕೆ ಒಬ್ಬ ವೀಕ್ಷಕರನ್ನು ನೇಮಕ ಮಾಡಬೇಕು' ಎಂಬ ಬೇಡಿಕೆ ಮುಂದಿಟ್ಟಿದ್ದಾರೆ.

'ಯಾವ ಪುರುಷಾರ್ಥಕ್ಕೆ ಶಾಸಕರಾಗಿರಬೇಕು'

ಸಚಿವರು ನಮ್ಮ ಪತ್ರವನ್ನೇ ನೋಡುವುದಿಲ್ಲ ಸಿ.ಎಂ ನನ್ನ ಸಮಸ್ಯೆ ಏನೆಂದು ಕೇಳಿಲ್ಲ: ಶಾಸಕ ರಾಜು ಕಾಗೆ ಮತ್ತೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವರು ಕೈಗೆ ಸಿಗುವುದಿಲ್ಲ. ಸಿಕ್ಕಿದಾಗ ನಮಸ್ಕಾರ ಮಾಡಿದರೆ, ಪ್ರತಿ ನಮಸ್ಕಾರ ಮಾಡುವುದಿಲ್ಲ. ನಮ್ಮ ಪತ್ರವನ್ನು ಸರಿಯಾಗಿ ನೋಡುವುದಿಲ್ಲ. ಯಾವ ಪುರುಷಾರ್ಥಕ್ಕೆ ನಾವು ಶಾಸಕರಾಗಿ ಇರಬೇಕು' ಎಂದು ಕಾಗವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಜು ಕಾಗೆ ಮತ್ತೆ ಕಿಡಿಕಾರಿದ್ದಾರೆ.


ರಾಜು ಕಾಗೆ

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ, ಸಚಿವರು ವಾರದಲ್ಲಿ ಒಂದು ದಿನವಾದರೂ ಶಾಸಕರಿಗೆ ಸಿಗಬೇಕು' ಎಂದ ಅವರು, '2013–18ರವರೆಗೆ ಇದ್ದಂತಹ ಸಿ.ಎಂ ಸಿದ್ದರಾಮಯ್ಯ ಈಗ ಇಲ್ಲ. ಯಾಕೆಂದು ಗೊತ್ತಿಲ್ಲ' ಎಂದರು.


'ಶಾಸಕಾಂಗ ಪಕ್ಷದ ಸಭೆಯಲ್ಲಿ ನನ್ನ ನೋವು ತೋಡಿಕೊಂಡಿದ್ದೆ. ಆದರೆ, ಸಿ.ಎಂ, ಸಚಿವರು ನನ್ನ ಸಮಸ್ಯೆ ಏನೆಂದು ಕೇಳಿಲ್ಲ. ಅನುದಾನ ಕೊಟ್ಟಿಲ್ಲ. ಮುಖ್ಯಮಂತ್ರಿ ಕರೆದರೆ ಹೋಗಿ ಮಾತನಾಡುತ್ತೇನೆ. ನಾನು ಹಿರಿಯ. 30 ವರ್ಷಗಳಿಂದ ಶಾಸಕನಾಗಿದ್ದೇನೆ. ಹಿರಿಯ ಶಾಸಕರಿಗೆ ಹೀಗಾದರೆ ಹೊಸ ಶಾಸಕರಿಗೆ ಹೇಗೆ ಆಗಬೇಕು?' ಎಂದರು.

'ಐಎಎಸ್ ಅಧಿಕಾರಿ ರಾಜೇಂದ್ರ ಕಟಾರಿಯಾ ನನಗೆ ಅಪಮಾನ ಮಾಡಿದ್ದರು. ಅವರ ವಿರುದ್ಧ ವಿಧಾನ ಸಭೆಯಲ್ಲಿ ಹಕ್ಕುಚ್ಯುತಿ ತಂದಿದ್ದೆ. ಚರ್ಚೆಯೂ ಆಗಿತ್ತು. ಆ ಅಧಿಕಾರಿಯನ್ನು ವರ್ಗಾವಣೆ ಮಾಡಲು 60 ಶಾಸಕರು ಮುಖ್ಯಮಂತ್ರಿಗೆ ಪತ್ರ ಕೊಟ್ಟಿದ್ದರು. ಆದರೆ, ಯಾವ ಕ್ರಮವೂ ಆಗಲಿಲ್ಲ. ಇಲ್ಲಿ ಅಧಿಕಾರಿ ಮುಖ್ಯವೊ, ಶಾಸಕರೊ ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮಗೇನೂ ಮಾನ, ಮರ್ಯಾದೆ ಇಲ್ಲವೇ?' ಎಂದೂ ಕಾಗೆ ಆಕ್ರೋಶ ವ್ಯಕ್ತಪಡಿಸಿದರು.

'ಬಸವೇಶ್ವರ ನೀರಾವರಿ ಯೋಜನೆ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ 10 ಬಾರಿ ಹೇಳಿದ್ದೇನೆ. ಆದರೆ, ಏನೂ ಕ್ರಮ ಆಗಿಲ್ಲ' ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

'ಶಾಸಕರಿಗೆ ಸಮಯ ಕೊಡಲಿ'

'ಶಾಸಕರಿಗೆ ಸಚಿವರು ಸಮಯ ಕೊಡಬೇಕು. ಅವರ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.


ಆರ್.ವಿ. ದೇಶಪಾಂಡೆ

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಬಿ.ಆರ್. ಪಾಟೀಲರು ಹಿರಿಯ ಶಾಸಕರು. ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆ ವಿಚಾರಗಳನ್ನು ಮುಖ್ಯಮಂತ್ರಿಯ ಗಮನಕ್ಕೆ ತಂದು, ಚರ್ಚೆ ಮಾಡಬಹುದಿತ್ತು. ಮುಖ್ಯಮಂತ್ರಿ ಯಾವುದೇ ಕ್ರಮ ತೆಗೆದುಕೊಳ್ಳದಿದ್ದಾಗ ಮಾತನಾಡಬೇಕಿತ್ತು' ಎಂದರು.

'ಪಾಟೀಲರ ಕ್ಷೇತ್ರಕ್ಕೆ ಹಣ ಮಂಜೂರಾತಿಗೂ ಮೊದಲು ಸಂಬಂಧಿಸಿದ ಸಚಿವರ ಗಮನಕ್ಕೆ ತರಬೇಕಿತ್ತು. ಆಡಳಿತ ವ್ಯವಸ್ಥೆ ಕುಸಿದಿದೆ ಎಂದು ಹೇಳುವುದು ಸರಿಯಲ್ಲ. ಆಡಳಿತ ವ್ಯವಸ್ಥೆ ಸರಿಯಾಗಿಯೇ ಇದೆ. ಶಾಸಕರಾದವರು ತಮ್ಮ ಅಧಿಕಾರ ಚಲಾಯಿಸಲು ಒಂದು ವ್ಯವಸ್ಥೆ ಇದೆ' ಎಂದು ಹೇಳಿದರು.

'ಅನುದಾನ ಸಿಗದಿದ್ದರೆ ಬೇಸರ ಸಹಜ'

'ಅನುದಾನ ಸಿಗದಿದ್ದರೆ ಶಾಸಕರ ಬೇಸರ ಸಹಜ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.


ಜಿ.ಪರಮೇಶ್ವರ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕ್ಷೇತ್ರಗಳಿಗೆ ಅನುದಾನ ಬಂದಿಲ್ಲ ಎಂದು ಕೆಲವು ಶಾಸಕರು ಹೇಳಿರುವುದನ್ನು ನಾನು ಗಮನಿಸಿದ್ದೇನೆ' ಎಂದರು.

'ಸರ್ಕಾರದ ಬಳಿ ದುಡ್ಡಿಲ್ಲ' ಎಂಬ ತಮ್ಮ ಹೇಳಿಕೆ ಬಗ್ಗೆ ಸ್ಪಷ್ಟನೆ ನೀಡಿದ ಪರಮೇಶ್ವರ, 'ದುಡ್ಡಿಲ್ಲವೆಂದು ಯಾರು ಹೇಳಿದ್ದು? ನಾನು ತಮಾಷೆಗೆ ಹೇಳಿದ್ದೇನೆ ಅಷ್ಟೇ. ಯಾವುದೇ ರೀತಿಯ ಆರ್ಥಿಕ ಮುಗ್ಗಟ್ಟು ಇಲ್ಲ. ಹಣ ಬಿಡುಗಡೆ ಸ್ವಲ್ಪ ನಿಧಾನ ಆಗಿರಬಹುದು' ಎಂದರು.

'ಭ್ರಷ್ಟಾಚಾರಕ್ಕೆ ಕೌಂಟರ್ ತೆರೆದ ಸರ್ಕಾರ'

'ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರಕ್ಕೆ ಕೌಂಟರ್‌ಗಳನ್ನು ತೆರೆಯಲಾಗಿದೆ. ಸಚಿವಾಲಯದಿಂದ ಗ್ರಾಮ ಪಂಚಾಯಿತಿ ಕಚೇರಿವರೆಗೂ ಲಂಚವಿಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.


ಬಿ.ವೈ. ವಿಜಯೇಂದ್ರ

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕಮಿಷನ್ ಮಾಫಿಯಾಗೆ ಬೆಂಬಲ ನೀಡುತ್ತಿದೆ. ಕಮಿಷನ್ ಮಾಫಿಯಾವೇ ಆಡಳಿತ ನಡೆಸುತ್ತಿದೆ. ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳುವ ಏಕೈಕ ಕಾರಣಕ್ಕೆ ಸಿದ್ದರಾಮಯ್ಯನವರು ಕಣ್ಮುಚ್ಚಿ ಕುಳಿತಿದ್ದಾರೆ' ಎಂದು ಆರೋಪಿಸಿದರು.

'ಯಾಕ್ರೀ ಹೊಟ್ಟೆ ಉರಿಸ್ತೀರಿ. ನಿಮ್ಮ ರೇಟ್ ಲಿಸ್ಟ್ ಹಾಕಿ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ. ಗೃಹ ಸಚಿವ ಜಿ.ಪರಮೇಶ್ವರ ಅವರು ಬಾದಾಮಿಯಲ್ಲಿ 'ಸಿದ್ದರಾಮಯ್ಯ ಅವರ ಬಳಿ ಹಣವಿಲ್ಲ, ದಯವಿಟ್ಟು ಹಣ ಕೇಳಲು ಬರಬೇಡಿ' ಎಂಬ ಸಂದೇಶವನ್ನು ಶಾಸಕರಿಗೆ ಪರೋಕ್ಷವಾಗಿ ಸಂದೇಶ ನೀಡಿದ್ದಾರೆ ಎಂದು ಟೀಕಿಸಿದರು.

ಲಂಚ ಸಂಗ್ರಹಕ್ಕೆ ಮುಖ್ಯಮಂತ್ರಿಗಳೇ ಹೊರಗುತ್ತಿಗೆ ನೀಡಿದ್ದಾರೆ. ಬಿ.ಆರ್. ಪಾಟೀಲರ ಆರೋಪದ ಬಳಿಕವೂ ವಸತಿ ಸಚಿವ ಜಮೀರ್ ಅಹಮದ್ ಅವರ ರಾಜೀನಾಮೆ ಪಡೆದಿಲ್ಲ. ರಾಜು ಕಾಗೆ, ಎನ್.ವೈ. ಗೋಪಾಲಕೃಷ್ಣ ಸೇರಿದಂತೆ ತಮ್ಮದೇ ಪಕ್ಷದ ಶಾಸಕರ ಆರೋಪಗಳ ಕುರಿತು ರಾಜ್ಯದ ಜನರಿಗೆ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು.

ಹಣ ಪಡೆದವರು ಹುಳು ಬಿದ್ದು ಸಾಯುತ್ತಾರೆ: ಸಚಿವ ಜಮೀರ್ ಅಹಮದ್ ಹೇಳಿಕೆ

'ಆರೋಪ ಸಾಬೀತಾದರೆ 24 ಗಂಟೆ ಒಳಗೆ ರಾಜೀನಾಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರಿಗೆ ನೀಡುವ ಮನೆಗಳಿಗೆ ಹಣ ಪಡೆದು ಬದುಕುವ ದರಿದ್ರ ಸ್ಥಿತಿ ಬಂದಿಲ್ಲ. ಆರೋಪ ಸಾಬೀತು ಮಾಡಿದರೆ 24 ಗಂಟೆಗಳ ಒಳಗೆ ರಾಜೀನಾಮೆ ನೀಡುವೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.


ಜಮೀರ್ ಅಹಮದ್

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಡವರು ವಾಸಿಸುವ ಮನೆಗಳಿಗೆ ಹಣ ಪಡೆಯುವುದು ಅಕ್ಷಮ್ಯ ಅಪರಾಧ. ಹಣ ಪಡೆದವರು ಹುಳು ಬಿದ್ದು ಸಾಯುತ್ತಾರೆ. ಸರ್ಕಾರ ಅಂತಹ ಕೆಲಸಕ್ಕೆ ಅವಕಾಶ ನೀಡುವುದಿಲ್ಲ. ಹಾಗೆ ಮಾಡಿದ್ದರೆ ಮುಖ್ಯಮಂತ್ರಿ ಕೇಳುವುದಕ್ಕೂ ಮುಂಚೆಯೇ ರಾಜೀನಾಮೆ ನೀಡುತ್ತಿದ್ದೆ' ಎಂದರು.

'ಹಿರಿಯ ಶಾಸಕ ಬಿ.ಆರ್. ಪಾಟೀಲ ಅವರು ಸಹ ಸಚಿವರು ಹಣ ಪಡೆದಿದ್ದಾರೆ ಎಂದು ಹೇಳಿಲ್ಲ. ಅಧಿಕಾರಿಗಳ ಹೆಸರನ್ನೂ ಉಲ್ಲೇಖಿಸಿಲ್ಲ. ಅವರು ಮಾಡಿರುವ ಆರೋಪದ ಬಗ್ಗೆ ತನಿಖೆಗೆ ಆದೇಶಿಸಲಾಗುವುದು. ತನಿಖೆ ನಂತರ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಬಿ.ಆರ್. ಪಾಟೀಲ ಜತೆಯೂ ಚರ್ಚೆ ನಡೆಸಲಾಗುವುದು. ಪಂಚಾಯಿತಿ ಮಟ್ಟದಲ್ಲಿ ಯಾರಾದರೂ ಹಣ ಪಡೆದಿದ್ದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿದ್ದರೆ ಸಿಬಿಐ ತನಿಖೆ ನಡೆಸಲಿ. ಯಾರೇ ತಪ್ಪು ಮಾಡಿದ್ದರೂ ಕಠಿಣ ಶಿಕ್ಷೆಯಾಗಲಿ' ಎಂದು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಈ ವಿಚಾರದ ಬಗ್ಗೆ ಮಾಹಿತಿ ನೀಡಿದ್ದೇನೆ. ಪ್ರವಾಸದಲ್ಲಿ ಇದ್ದ ಕಾರಣ ಮಾತನಾಡಲು ಸಾಧ್ಯವಾಗಿರಲಿಲ್ಲ. ಬೆಂಗಳೂರಿಗೆ ಬಂದ ತಕ್ಷಣ ಅಧಿಕಾರಿಗಳ ಸಭೆ ಕರೆದು ಮಾಹಿತಿ ಪಡೆದುಕೊಂಡಿದ್ದೇನೆ' ಎಂದರು.

ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಸಚಿವರು ರಾಜೀನಾಮೆ ನೀಡಬೇಕು ಎಂದಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ, 'ಅವರಿಗೆ ವಾಸ್ತವ ಬಗ್ಗೆ ಮಾಹಿತಿ ಇಲ್ಲ. ಮನೆ ಹಂಚಿಕೆ ವಿಚಾರದಲ್ಲಿ ಇಲಾಖೆಯ ಪಾತ್ರವೇ ಇರುವುದಿಲ್ಲ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ನಡೆಯುತ್ತದೆ. ಶಾಸಕರ ಪತ್ರದ ಆಧಾರದಲ್ಲೇ ಮನೆ ಹಂಚಿಕೆ ಮಾಡಲಾಗುವುದು. ಆಳಂದ ಕ್ಷೇತ್ರಕ್ಕೂ ಬಿ.ಆರ್. ಪಾಟೀಲ ಅವರ ಪತ್ರದ ಆಧಾರದಲ್ಲೇ 950 ಮನೆಗಳನ್ನು ಹಂಚಿಕೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

'ರಾಜ್ಯದಲ್ಲಿ ಒಟ್ಟು 14 ಲಕ್ಷ ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. 9 ಲಕ್ಷ ಮನೆಗಳು ನಿರ್ಮಾಣ ಹಂತದಲ್ಲಿವೆ. ಶಾಸಕರ ಬೇಡಿಕೆಯಂತೆ ಇನ್ನೂ 3.5 ಲಕ್ಷ ಮನೆಗಳ ಅಗತ್ಯವಿದೆ ಎಂದು ಮುಖ್ಯಮಂತ್ರಿಗೆ ಹೇಳಿದ್ದೆ. ಅವರೂ ಒಪ್ಪಿಕೊಂಡಿದ್ದಾರೆ. ₹1.20 ಲಕ್ಷದ ಬದಲು ₹3.50 ಲಕ್ಷ ನೀಡಲು ಒಪ್ಪಿಗೆ ನೀಡಿದ್ದಾರೆ. ಆದರೆ, ಆರ್ಥಿಕ ಇಲಾಖೆ ಅನುಮತಿ ಸಿಕ್ಕಿಲ್ಲ' ಎಂದರು.

ಬಿಜೆಪಿ ನಾಯಕರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ. ಬಡವರಿಗೆ ಜಿಎಸ್‌ಟಿ ಹಾಕಬೇಡಿ ಎಂದು ಕೇಂದ್ರಕ್ಕೆ ಒತ್ತಾಯ ಮಾಡಲಿ. ₹1.5 ಲಕ್ಷ ಕೇಂದ್ರದಿಂದ ಬರುತ್ತದೆ. ಅದಕ್ಕೆ ಜಿಎಸ್‌ಟಿ ಹಾಕಿ ಮತ್ತೆ ₹1.3 ಲಕ್ಷ ವಾಪಸ್ ಪಡೆಯುತ್ತಾರೆ. ಕೊಳಚೆ ನಿರ್ಮೂಲನಾ ಮಂಡಳಿಯಿಂದ ₹9,500 ಕೋಟಿ ಫಲಾನುಭವಿಗಳ ಹಣ ಬರಬೇಕಿದೆ ಎಂದು ದೂರಿದರು.

'ಮಾಧ್ಯಮಕ್ಕೆ ಹೇಳಿದ್ದನ್ನೇ ಸಿ.ಎಂಗೆ ಹೇಳುವೆ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ನಾನು ಏನು ಹೇಳಬೇಕೆಂದುಕೊಂಡಿದ್ದೆನೊ ಅದನ್ನು ಈಗಾಗಲೇ ಕಲಬುರಗಿಯಲ್ಲಿ ಹೇಳಿದ್ದೇನೆ. ಪೇಪರ್‌ನಲ್ಲಿ ಏನು ಪ್ರಕಟವಾಗಿದೆಯೋ ಅದನ್ನೇ ನಾನು ಬುಧವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಅವರಿಗೆ ತಿಳಿಸುವೆ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಶಾಸಕ ಬಿ.ಆರ್.ಪಾಟೀಲ ಹೇಳಿದರು.


ಬಿ.ಆರ್. ಪಾಟೀಲ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಪಾಲ್ಗೊಳ್ಳಲು ಮಂಗಳವಾರ ಕ್ಯಾಂಪಸ್‌ಗೆ ಬಂದಿದ್ದ ಅವರು ಮಾಧ್ಯಮದವರಿಗೆ ಹೀಗೆ ಪ್ರತಿಕ್ರಿಯಿಸಿದರು.

ಹಲವು ಶಾಸಕರಲ್ಲಿ ಹಾಗೂ ದೇಶಪಾಂಡೆ, ರಾಯರೆಡ್ಡಿ ಅವರಂತಹ ಹಿರಿಯ ಮುಖಂಡರಲ್ಲಿ ಸರ್ಕಾರದ ವಿರುದ್ಧ ಅಸಮಾಧಾನ ಹೊಗೆಯಾಡುತ್ತಿರುವ ಕುರಿತ ಪ್ರಶ್ನೆಗೆ 'ಸಂಸಾರ ಎಂದ ಮೇಲೆ ಗಂಡ ಹೆಂಡತಿ ಜಗಳ ಇದ್ದೇ ಇರುತ್ತದೆ, ಅದೇ ರೀತಿಯಲ್ಲಿ ಪಕ್ಷದಲ್ಲೂ ಇದೆ ಅಷ್ಟೇ' ಎಂದರು.

ಪಾಟೀಲರಿಗೆ ಪದೇ ಪದೇ ಫೋನ್: ರಾಜ್ಯದ ಹಲವೆಡೆಗಳಿಂದ ವಸತಿ ಯೋಜನೆಗೆ ಲಂಚ ಕೇಳಿದ ಕುರಿತಂತೆ ಪಾಟೀಲರಿಗೆ ಫೋನ್ ಕರೆಗಳು ಬರುತ್ತಿದ್ದು, ಮಂಗಳವಾರವೂ ಮಾಧ್ಯಮಗಳ ಜತೆಗೆ ಮಾತನಾಡುತ್ತಿದ್ದಾಗಲೇ ಕರೆಗಳು ಬಂದವು. 'ದೇವರಹಿಪ್ಪರಗಿ ಕ್ಷೇತ್ರದ ತುರಗಾನೂರು ಗ್ರಾಮದಿಂದ ಬಸನಗೌಡ ಪಾಟೀಲ್ ಎಂಬುವವರು ಕರೆ ಮಾಡಿದ್ದರು. ಅಂಬೇಡ್ಕರ್ ವಸತಿ ನಿಗಮದ ಮನೆಗೆ ₹20 ಸಾವಿರ ಕೇಳುತ್ತಿದ್ದಾರೆ, ಬಸವ ವಸತಿ ಯೋಜನೆಯ ಮನೆಗೆ ₹15 ಸಾವಿರ ಕೇಳುತ್ತಿದ್ದಾರೆ ಎಂದು ನನ್ನಲ್ಲಿ ದೂರಿಕೊಂಡಿದ್ದಾರೆ' ಎಂದು ಅವರು ಮಾಧ್ಯಮದವರಿಗೆ ತಿಳಿಸಿದರು.

'ಮನೆ ಪಡೆಯಲು ಲಂಚ ಕೇಳ್ತಾರೆ ಎಂದು ದೂರಿ ಬಹಳಷ್ಟು ಜನ ಫೋನ್ ಮಾಡ್ತಾರೆ, ಇಂತಹ ಫೋನ್ ಕರೆ ಸ್ವೀಕರಿಸಿ ನನಗೆ ಸಾಕಾಗಿದೆ' ಎಂದು ಹೇಳಿದರು.

11 ತಿಂಗಳಿಂದ ವೇತನ ಇಲ್ಲ: ವಿಶ್ವವಿದ್ಯಾಲಯದ 47 ಮಂದಿ ಗುತ್ತಿಗೆ ಕಾರ್ಮಿಕರ ಪೈಕಿ ಕೆಲವರು ಪಾಟೀಲ ಅವರನ್ನು ಭೇಟಿ ಮಾಡಿ, ತಮಗೆ 11 ತಿಂಗಳಿಂದ ಸಂಬಳ ನೀಡಿಲ್ಲ ಎಂದು ದೂರಿದರು. ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟದ ಕುರಿತಂತೆ ಮುಖ್ಯಮಂತ್ರಿ ಅವರ ಗಮನಕ್ಕೆ ತರುವುದಾಗಿ ಅವರು ಭರವಸೆ ನೀಡಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಿ.ಎಂ ಸಿದ್ದರಾಮಯ್ಯ ಮನವಿ

'7 ಮಸೂದೆಗೆ ಅಂಗೀಕಾರ ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಶಾಸಕಾಂಗ ಅಂಗೀಕರಿಸಿದ ಏಳು ಮಸೂದೆಗಳಿಗೆ ಅಂಗೀಕಾರ ನೀಡುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಮುಖ್ಯಮಂತ್ರಿ, 'ಈ ಮಸೂದೆಗಳನ್ನು ಸಂಬಂಧಿತ ಇಲಾಖೆಗಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ ಮತ್ತು ಅಭಿಪ್ರಾಯ ಪಡೆದ ನಂತರ, ಒಪ್ಪಿಗೆ ನೀಡುವ ಬಗ್ಗೆ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ರಾಷ್ಟ್ರಪತಿ ಭರವಸೆ ನೀಡಿದರು' ಎಂದರು. ರಾಷ್ಟ್ರಪತಿ ಅವರೊಂದಿಗಿನ ಸಭೆ ಸೌಹಾರ್ದಯುತವಾಗಿತ್ತು ಎಂದು ಹೇಳಿದರು.

ಯಾವೆಲ್ಲ ಮಸೂದೆ ಬಾಕಿ: ಒಂದರಿಂದ ಐದನೇ ತರಗತಿವರೆಗೆ ಮಾತೃ ಭಾಷೆ ಮಾಧ್ಯಮದಲ್ಲೇ ಶಿಕ್ಷಣ ಕಡ್ಡಾಯವಾಗಿ ಕಲಿಸುವ ಕುರಿತ 'ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ಕರ್ನಾಟಕ ತಿದ್ದುಪಡಿ) ಮಸೂದೆ', ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ಕಲ್ಪಿಸಲು ಅವಕಾಶ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತಿದ್ದುಪಡಿ (ಕೆಟಿಪಿಪಿ) ಮಸೂದೆ', ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಯ 'ಎ' ವರ್ಗದ ದೇವಾಲಯಗಳಲ್ಲಿ ಸಂಗ್ರಹವಾಗುವ 'ಸಾಮಾನ್ಯ ಸಂಗ್ರಹಣಾ ನಿಧಿ'ಯ ಶೇ 5ರಿಂದ ಶೇ 10ರಷ್ಟು ಆದಾಯವನ್ನು 'ಸಿ' ವರ್ಗದ ದೇವಸ್ಥಾನಗಳ ಅಭಿವೃದ್ಧಿಗೆ ಬಳಸುವುದನ್ನು ಕಡ್ಡಾಯಗೊಳಿಸುವ 'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ', 'ಕರ್ನಾಟಕ ನೋಂದಣಿ ತಿದ್ದುಪಡಿ ಮಸೂದೆ–2024', ಕರ್ನಾಟಕ ನೋಂದಣಿ ತಿದ್ದುಪಡಿ ಮಸೂದೆ–2025, 'ನೋಟರಿ ಕರ್ನಾಟಕ ತಿದ್ದುಪಡಿ ಮಸೂದೆ, ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ಮಸೂದೆ–2024.

ಮುಖ್ಯಾಂಶಗಳು

- ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಭೇಟಿ, ಚರ್ಚೆ
- ತಲಾ ಆದಾಯ: ಮಾನದಂಡ ಪರಿಷ್ಕರಣೆ ಮನವಿ

ಹಣಕಾಸು ಸಚಿವರಿಗೆ ಮನವಿ: ಸಿದ್ದರಾಮಯ್ಯ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ 15 ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು 16ನೇ ಹಣಕಾಸು ಆಯೋಗದಲ್ಲಿ ಸರಿದೂಗಿಸಬೇಕು ಎಂದು ಮನವಿ ಮಾಡಿದರು.


ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ಸಿದ್ದರಾಮಯ್ಯ ಚರ್ಚಿಸಿದರು. ಸಚಿವರಾದ ಎಚ್‌.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಸತೀಶ ಜಾರಕಿಹೊಳಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

'ತಲಾವಾರು ಆದಾಯವನ್ನು ಪರಿಗಣಿಸುವ ಮಾನದಂಡವನ್ನು ಶೇ 45 ರಿಂದ ಶೇ 20 ಕ್ಕೆ ಇಳಿಸಬೇಕೆಂದು ಕೋರಲಾಗಿದೆ. ಕೇರಳ, ಆಂಧ್ರ, ತಮಿಳುನಾಡು ರಾಜ್ಯಗಳಿಗೆ ನೀಡಿದಂತೆ ಆದಾಯ ಕೊರತೆ ಅನುದಾನವನ್ನು ಕರ್ನಾಟಕಕ್ಕೂ ನೀಡಬೇಕು. ಇಲ್ಲವೇ ಯಾವುದೇ ರಾಜ್ಯಗಳಿಗೆ ನೀಡಬಾರದು. ರಾಜಸ್ವ ಹೆಚ್ಚಳದಲ್ಲಿ ಖರ್ಚಿಗಿಂತ ಆದಾಯ ಹೆಚ್ಚಿದ್ದು, ವಿತ್ತೀಯ ಕೊರತೆಯಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಿರುತ್ತದೆ. ರಾಜಸ್ವ ಹೆಚ್ಚಳದಲ್ಲಿದ್ದ ಕರ್ನಾಟಕ ಕಳೆದ ವರ್ಷದಿಂದ ವಿತ್ತೀಯ ಕೊರತೆ ಎದುರಿಸುತ್ತಿದ್ದು, ಮುಂದಿನ ವರ್ಷಕ್ಕೆ ಈ ಪರಿಸ್ಥಿತಿ ಸುಧಾರಿಸಲಿದೆ. ನಿರಂತರವಾಗಿ ವಿತ್ತೀಯ ಕೊರತೆಯಲ್ಲಿರುವ ರಾಜ್ಯಗಳಿಗೆ ವಿತ್ತೀಯ ಕೊರತೆ ಅನುದಾನ ನೀಡಲಾಗುತ್ತದೆ. ಹಣಕಾಸಿನ ಕಾರ್ಯಕ್ಷಮತೆ ತೋರದಿರುವ ರಾಜ್ಯಗಳಿಗೆ ವಿತ್ತೀಯ ಕೊರತೆ ಅನುದಾನ ನೀಡುತ್ತಿರುವ ಕೇಂದ್ರದ ಕ್ರಮ ಸರಿಯಾದುದಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಬೆಂಗಳೂರು ಜಾಗತಿಕ ನಗರವಾಗಿದ್ದು, ನಗರದ ಬಂಡವಾಳ ಕಾರ್ಯಗಳಿಗೆ ₹1.15 ಲಕ್ಷ ಕೋಟಿ ಬೇಕಾಗಿದೆ. ಇದಕ್ಕಾಗಿ ವಿಶೇಷ ಅನುದಾನ ನೀಡುವಂತೆ ಕೋರಲಾಗಿದೆ. ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಪ್ರವಾಹದಿಂದಾಗುವ ಅನಾಹುತಗಳನ್ನು ನಿಭಾಯಿಸಲು ವಿಶೇಷ ಅನುದಾನ, ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಅನುದಾನ ನೀಡುವಂತೆ ಕೋರಲಾಗಿದೆ' ಎಂದರು.

ಲಂಚ ಹಗರಣ: ಹೈಕಮಾಂಡ್ ಗರಂ

ಒಂದನೇ ಪುಟದಿಂದ...

'ಸರ್ಕಾರದ ಕಾರ್ಯಶೈಲಿ ವಿರುದ್ಧ ಹೇಳಿಕೆ ನೀಡುವ ಶಾಸಕರ ಸಂಖ್ಯೆ ಹೆಚ್ಚುತ್ತಿದೆ. ಇದು ವಿಪಕ್ಷಗಳಿಗೆ ಆಹಾರವಾಗುತ್ತಿದೆ. ಶಾಸಕರು ತಮ್ಮ ದುಗುಡ ಏನಿದ್ದರೂ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಜತೆಗೆ ಹೇಳಿಕೊಳ್ಳಬೇಕು. ಅದು ಬಿಟ್ಟು ಬಹಿರಂಗ ಹೇಳಿಕೆ ನೀಡಿದರೆ ಹೈಕಮಾಂಡ್ ಶಿಸ್ತುಕ್ರಮ ಕೈಗೊಳ್ಳಲಿದೆ' ಎಂದು ಹೈಕಮಾಂಡ್ ನಾಯಕರು ಎಚ್ಚರಿಸಿದರು ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಬುಧವಾರ ಬೆಳಿಗ್ಗೆ ಭೇಟಿ ಮಾಡಿ ಚರ್ಚಿಸಲಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿದ್ದಾರೆ. ರಾಹುಲ್ ಅವರನ್ನು ಸಿದ್ದರಾಮಯ್ಯ ಮುಂದಿನ ವಾರ ಭೇಟಿ ಮಾಡಲಿದ್ದಾರೆ. ಆ ಬಳಿಕ ಸುರ್ಜೇವಾಲಾ ಅವರು ರಾಜ್ಯಕ್ಕೆ ಭೇಟಿ ಮಾಡಿ ರಾಜ್ಯ ನಾಯಕರು ಹಾಗೂ ಶಾಸಕರ ಜತೆಗೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಧಾನ ಪರಿಷತ್‌ಗೆ ನಾಲ್ವರು ಸದಸ್ಯರ ನಾಮನಿರ್ದೇಶನ ಪ್ರಕ್ರಿಯೆ ಬಾಕಿ ಇದೆ. ಈ ಪಟ್ಟಿಯನ್ನು ಪರಿಷ್ಕರಣೆ ಮಾಡುವಂತೆ ಹೈಕಮಾಂಡ್ ಈ ಹಿಂದೆಯೇ ಸೂಚಿಸಿದೆ. ಪಟ್ಟಿ ಪರಿಷ್ಕರಣೆ ಮಾಡಿದರೆ ಇನ್ನಷ್ಟು ಗೊಂದಲ ಸೃಷ್ಟಿಯಾಗಲಿದ್ದು, ಈ ಪಟ್ಟಿಯನ್ನೇ ಅಂತಿಮಗೊಳಿಸುವುದು ಸೂಕ್ತ' ಎಂದು ಮುಖ್ಯಮಂತ್ರಿಯವರು ಹೈಕಮಾಂಡ್ ನಾಯಕರ ಗಮನಕ್ಕೆ ತಂದರು ಎಂದು ಗೊತ್ತಾಗಿದೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಖರ್ಗೆ ಅವರಲ್ಲಿ ಸಿದ್ದರಾಮಯ್ಯ ಪ್ರಸ್ತಾಪಿಸಿದರು. ಈ ಸ್ಥಾನಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಥವಾ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ನೇಮಿಸುವುದು ಸೂಕ್ತ ಎಂದರು. ಈ ಬಗ್ಗೆ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಳ್ಳಲಿದೆ ಎಂದು ಖರ್ಗೆ ತಿಳಿಸಿದರು ಎಂದು ಮೂಲಗಳು ಹೇಳಿವೆ.

'ಐದು ವರ್ಷವೂ ಸಿದ್ದರಾಮಯ್ಯ ಸಿಎಂ'

'ಮುಂದಿನ ಮೂರು ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ' ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕೆಲವರು ಮಾನಸಿಕ ನೆಮ್ಮದಿಗೆ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳಿಕೆ ನೀಡುತ್ತಿರುತ್ತಾರೆ. ಸಿದ್ದರಾಮಯ್ಯ ಅವರಿಗೆ ಬಹುತೇಕ ಶಾಸಕರ ಬೆಂಬಲ ಇದೆ. ಜುಲೈನಲ್ಲಿ ಮುಖ್ಯಮಂತ್ರಿಯವರು ಇನ್ನಷ್ಟು ಉತ್ತಮ ಆಡಳಿತ ನೀಡಲಿದ್ದಾರೆ' ಎಂದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು, ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ರಾಜ್ಯದಲ್ಲಿ 'ಎಸ್' ಟ್ಯಾಕ್ಸ್ ಚಾಲ್ತಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ರಾಜ್ಯ ಸರ್ಕಾರ 'ಎಸ್ ಟ್ಯಾಕ್ಸ್' ಎಂಬ ಹೊಸ ತೆರಿಗೆ ನೀತಿ ಜಾರಿಗೆ ತಂದಿದೆ. ಸರ್ಕಾರದ ಹಂತದಲ್ಲಿ ಕಾಮಗಾರಿ ಬಿಲ್ ಪಾಸ್ ಮಾಡಲು ಗುತ್ತಿಗೆದಾರರಿಗೆ ಹಾಗೂ ಅಧಿಕಾರಿಗಳ ವರ್ಗಾವಣೆಗೆ ಈ ತೆರಿಗೆ ವಿಧಿಸಲಾಗುತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.


ನಿಖಿಲ್ ಕುಮಾರಸ್ವಾಮಿ

'ಎಸ್ ಟ್ಯಾಕ್ಸ್'ನಲ್ಲಿಯ 'ಎಸ್' ಅಂದರೆ ಏನು ಎಂದು ನಾನು ಬಿಡಿಸಿ ಹೇಳಬೇಕಾಗಿಲ್ಲ. ಅದನ್ನು ಕೇಳಿದ ತಕ್ಷಣ ಎಲ್ಲರಿಗೂ 'ಎಸ್' ಎಂದರೆ ಏನು, ಯಾರು ಎಂದು ಅರ್ಥವಾಗುತ್ತದೆ' ಎಂದರು.

ತಾಲ್ಲೂಕಿನ ಕೂಡ್ಲೂರಿನಲ್ಲಿ ಮಂಗಳವಾರ ನಡೆದ ಪಕ್ಷದ ಕಾರ್ಯಕರ್ತರ ಸಭೆ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದರು.

'ಡಿ.ಕೆ ಸಹೋದರರ ಆಶೀರ್ವಾದ ಇದ್ದರೆ ಕ್ಷೇತ್ರಕ್ಕೆ ಅನುದಾನ ಗ್ಯಾರಂಟಿ' ಎಂದು ಶಾಸಕರೊಬ್ಬರು ಹೇಳಿದ್ದಾರೆ. ಹಾಗಾದರೆ ಅವರ ಆಶೀರ್ವಾದದಿಂದ ಯಾವೆಲ್ಲ ಶಾಸಕರಿಗೆ ಎಷ್ಟು ವಿಶೇಷ ಅನುದಾನ ಸಿಕ್ಕಿದೆ ಎಂದು ಸರ್ಕಾರ ಬಹಿರಂಗಪಡಿಸಬೇಕು ಎಂದರು.


'ರಾಜ್ಯದಲ್ಲಿ ವಸತಿ ಯೋಜನೆ ಅಡಿ ಮನೆ ಪಡೆಯಲು ಖುದ್ದಾಗಿ ಶಾಸಕರೇ ಸಚಿವರನ್ನು ಭೇಟಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ' ಎಂದರು.

ರಾಹುಲ್ ಗಾಂಧಿ ಆರೋಪ; ಚುನಾವಣಾ ಆಯೋಗದ ವಿರುದ್ಧ ಮತ್ತೆ ವಾಗ್ದಾಳಿ

'ಮಹಾ' ಚುನಾವಣೆ: 'ಮತ ಕಳ್ಳತನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ವಿಚಾರ ಮುಂದಿಟ್ಟುಕೊಂಡು, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧದ ವಾಗ್ದಾಳಿಯನ್ನು ಮಂಗಳವಾರ ಮತ್ತಷ್ಟು ಹರಿತಗೊಳಿಸಿದ್ದಾರೆ.


ರಾಹುಲ್ ಗಾಂಧಿ

ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 'ಮತ ಕಳ್ಳತನ' ನಡೆದಿದೆ ಎಂದು ಆರೋಪಿಸಿರುವ ಅವರು, 'ಈ ವಿಚಾರವನ್ನು 'ಮುಚ್ಚಿ ಹಾಕುವುದಕ್ಕಾಗಿ' ನಡೆಸಿದ ಪ್ರಯತ್ನಗಳು ಚುನಾವಣಾ ಆಯೋಗದ ತಪ್ಪೊಪ್ಪಿಗೆಯೇ ಆಗಿದೆ' ಎಂದು ಆರೋಪಿಸಿದ್ದಾರೆ.

'ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿ, ಮತ ಯಂತ್ರಗಳಲ್ಲಿ (ಇವಿಎಂ) ದಾಖಲಾಗಿರುವ ಮತದಾರರ ವಿವರಗಳು ಹಾಗೂ ಸಿ.ಸಿ.ಟಿ.ವಿ ದೃಶ್ಯಗಳನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದೂ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಕ್ಷೇತ್ರದಲ್ಲಿ, ಚುನಾವಣೆಗೂ ಆರು ತಿಂಗಳು ಮೊದಲು 29 ಸಾವಿರ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲಾಗಿತ್ತು. ಈ ಕುರಿತು ಪರಿಶೀಲನೆ ನಡೆಸಿರಲಿಲ್ಲ ಎಂಬ 'ನ್ಯೂಸ್‌ಲಾಂಡ್ರಿ' ವರದಿ ಉಲ್ಲೇಖಿಸಿ, ರಾಹುಲ್ ಗಾಂಧಿ ಈ ಟೀಕಾಪ್ರಹಾರ ನಡೆಸಿದ್ದಾರೆ.

'ಅಪರಿಚಿತ ವ್ಯಕ್ತಿಗಳು ಮತ ಚಲಾಯಿಸುತ್ತಿದ್ದ ಕುರಿತು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ವರದಿ ನೀಡಿದ್ದರು. ಪರಿಶೀಲನೆಗೆ ಒಳಗಾಗದೇ ಇರುವಂತಹ ವಿಳಾಸ ಹೊಂದಿದ್ದ ಸಾವಿರಾರು ಮತದಾರರು ಮತ ಚಲಾಯಿಸಿದ್ದ ಕುರಿತು ಮಾಧ್ಯಮಗಳು ವರದಿ ಮಾಡಿವೆ' ಎಂದು ಆರೋಪಿಸಿದ್ದಾರೆ.

ಚುನಾವಣೆಗೆ ಸಂಬಂಧಿಸಿ ಮಾಡಿಕೊಂಡಿದ್ದ ಸಿದ್ಧತೆಗಳು ಹಾಗೂ ಖಾಸಗಿತನ ಸಂರಕ್ಷಣೆ ಕಾರಣ ನೀಡಿದ್ದ ಚುನಾವಣಾ ಆಯೋಗ, ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಮತಗಟ್ಟೆಗಳಿಗೆ ಸಂಬಂಧಿಸಿದ ಸಿ.ಸಿ.ಟಿ.ವಿ ದೃಶ್ಯಗಳನ್ನು ಹಂಚಿಕೊಳ್ಳುವುದಕ್ಕೆ ಇತ್ತೀಚೆಗೆ ನಿರಾಕರಿಸಿತ್ತು.

'ಸೋಲಿನ ನೋವು ಹೆಚ್ಚುತ್ತಿದೆ'

'ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಅನುಭವಿಸಿದ ಹೀನಾಯ ಸೋಲಿನಿಂದಾಗಿರುವ ನೋವು ದಿನದಿಂದ ದಿನಕ್ಕೆ ಉಲ್ಬಣಿಸುತ್ತಿದೆ ಎಂಬುದು ಅರ್ಥವಾಗುತ್ತದೆ. ಆದರೆ, ಎಷ್ಟು ದಿನ ನೀವು ಗಾಳಿಯಲ್ಲಿ ಗುಂಡು ಹಾರಿಸುತ್ತಾ ಇರುವಿರಿ?' ಎಂದು ಹೇಳುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿರುಗೇಟು ನೀಡಿದ್ದಾರೆ.


ದೇವೇಂದ್ರ ಫಡಣವೀಸ್

'ಕಾಂಗ್ರೆಸ್ ಪಕ್ಷ 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದಿದ್ದು, ಈ ಕ್ಷೇತ್ರಗಳಲ್ಲಿ ಮತ ಪ್ರಮಾಣದಲ್ಲಿನ ಹೆಚ್ಚಳವು ಶೇ 8ಕ್ಕಿಂತಲೂ ಅಧಿಕ' ಎಂದೂ ಫಡಣವೀಸ್ ಹೇಳಿದ್ದಾರೆ.

'ಲೋಕಸಭೆ ಚುನಾವಣೆಗೆ ಹೋಲಿಸಿದಲ್ಲಿ, ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 25ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮತಪ್ರಮಾಣದಲ್ಲಿನ ಹೆಚ್ಚಳ ಶೇ 8ಕ್ಕಿಂತ ಅಧಿಕ ಇತ್ತು. ಅಲ್ಲದೇ, ಈ ಪೈಕಿ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಕೂಡ ಗೆದ್ದಿದ್ದಾರೆ' ಎಂದಿದ್ದಾರೆ.

'ಮತದಾರರ ಪಟ್ಟಿಯ ಕರಡು ನೀಡಲಾಗಿತ್ತು'

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರ ಮುಖ್ಯ ಚುನಾವಣಾ ಅಧಿಕಾರಿ, 'ವಿಧಾನಸಭೆ ಚುನಾವಣೆಗೂ ಮುನ್ನ, 2024ರಲ್ಲಿ ವಿಶೇಷ ಪರಿಶೀಲನೆ ನಂತರ ಮತದಾರರ ಪಟ್ಟಿಯ ಕರಡುವನ್ನು ಸಿದ್ಧಪಡಿಸಲಾಗಿತ್ತು. ಈ ಕರಡುವನ್ನು ಕಾಂಗ್ರೆಸ್ ಸೇರಿ ಎಲ್ಲ ಪಕ್ಷಗಳಿಗೂ ಒದಗಿಸಲಾಗಿತ್ತು' ಎಂದಿದ್ದಾರೆ.

'ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸುವುದಕ್ಕೂ ಮೊದಲು, 19,27,508 ಆಕ್ಷೇಪಣೆಗಳು/ಕ್ಲೇಮುಗಳು ಸಲ್ಲಿಕೆಯಾಗಿದ್ದವು. ವಿವರಗಳ ತಪ್ಪಾಗಿ ಸೇರ್ಪಡೆ ಅಥವಾ ಅಳಿಸಿ ಹಾಕಿರುವಂತಹ ಕ್ರಮಗಳಿಗೆ ಸಂಬಂಧಿಸಿ ಕೇವಲ 89 ದೂರುಗಳನ್ನು ಸ್ವೀಕರಿಸಲಾಗಿತ್ತು' ಎಂದೂ ಸ್ಪಷ್ಟಪಡಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ




ಸುಭಾಷಿತ

ಯಾರು ಅಸಹನೆಯ ವಿಚಾರದಿಂದ ಮುಕ್ತರಾಗುತ್ತಾರೋ ಅಂತಹವರಲ್ಲಿ ಶಾಂತಿ ಎನ್ನುವುದು ಸಹಜವಾಗಿಯೇ ಹುಟ್ಟುತ್ತದೆ.
-ಗೌತಮ ಬುದ್ಧ

ಸಂಪಾದಕೀಯ

ತುರ್ತು ಪರಿಸ್ಥಿತಿಯ ನೆನಪುಗಳು ಕಲಿಯಬೇಕಾದ ಪಾಠ ಹಲವು

ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ, 1975ರ ಜೂನ್ 25ರಂದು ತುರ್ತು ಪರಿಸ್ಥಿತಿಯನ್ನು ಹೇರಿದ್ದುದು ದೇಶದ ಪ್ರಜಾತಂತ್ರ ವ್ಯವಸ್ಥೆ ಕಂಡ ಅತ್ಯಂತ ಕರಾಳ ಅಧ್ಯಾಯ. ದೇಶವು ತುರ್ತು ಪರಿಸ್ಥಿತಿಯನ್ನು ಕಂಡು 50 ವರ್ಷಗಳು ಸಂದಿವೆ. ಈ ಸಂದರ್ಭವು ಸರ್ವಾಧಿಕಾರದ ಅಪಾಯಗಳ ಬಗ್ಗೆ ನೆನಪು ಮಾಡಿಕೊಡಬೇಕು. ಯಾವುದೇ ಸಮಾಜ, ಯಾವುದೇ ವ್ಯವಸ್ಥೆ ಇಂತಹ ಸರ್ವಾಧಿಕಾರದ ತೆಕ್ಕೆಗೆ ಜಾರುವ ಅಪಾಯ ಇರುತ್ತದೆ. ಸರ್ವಾಧಿಕಾರವು ಯಾವುದೇ ಸಂದರ್ಭದಲ್ಲಿ, ಬಗೆ ಬಗೆಯ ರೂಪಗಳಲ್ಲಿ ಎದುರಾಗಬಹುದು. ತುರ್ತು ಪರಿಸ್ಥಿತಿ ಜಾರಿಗೆ ಬರುವ ಮೊದಲು, ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯು ಬೇರು ಬಿಡುತ್ತಿದೆ ಎಂದು ಭಾವಿಸಲಾಗಿತ್ತು. ಆದರೆ, ಜೀವಿಸುವ ಸ್ವಾತಂತ್ರ್ಯ ಸೇರಿದಂತೆ ಪ್ರಜೆಗಳ ಸಾಂವಿಧಾನಿಕ ಹಕ್ಕುಗಳನ್ನು ಅಮಾನತಿನಲ್ಲಿ ಇರಿಸಿದ್ದು, ವಿರೋಧ ಪಕ್ಷಗಳ ನಾಯಕರನ್ನು ಹಾಗೂ ಸಾಂವಿಧಾನಿಕ ಹಕ್ಕುಗಳ ಪರವಾಗಿ ಹೋರಾಟ ನಡೆಸುವವರನ್ನು ಸಾರಾಸಗಟಾಗಿ ಬಂಧಿಸಿದ್ದು, ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಿದ್ದು, ಸರ್ಕಾರವು ಮನಸೋಇಚ್ಛೆ ತೀರ್ಮಾನಗಳನ್ನು ಕೈಗೊಂಡಿದ್ದು, ವ್ಯಕ್ತಿಯೊಬ್ಬರ ಸುತ್ತ ಆಡಳಿತ ಮತ್ತು ರಾಜಕೀಯ ಗಿರಕಿ ಹೊಡೆದಿದ್ದು 'ಪ್ರಜಾತಂತ್ರ'ವನ್ನು ನಿರರ್ಥಕವಾಗಿಸಿತು. ವ್ಯಂಗ್ಯವೆಂದರೆ, ತುರ್ತು ಪರಿಸ್ಥಿತಿಯ ಮೂಲಕ ಪ್ರಜಾತಂತ್ರದ ಹೆಸರಿನಲ್ಲೇ ಪ್ರಜಾತಂತ್ರವನ್ನು ಹಾಳುಮಾಡಲಾಯಿತು. ಸ್ಥಿರತೆಯ ಅಗತ್ಯ, ಪ್ರಗತಿ ಮತ್ತು ಆಡಳಿತ, ಆಂತರಿಕ ಹಾಗೂ ಬಾಹ್ಯ ಬೆದರಿಕೆಗಳು ಸರ್ವಾಧಿಕಾರವನ್ನು ಹೇರಲು ಸಿಗುವ ನೆಪಗಳು. ತುರ್ತು ಪರಿಸ್ಥಿತಿ 21 ತಿಂಗಳಿಗೆ ಕೊನೆಗೊಂಡಿತು ಎಂಬುದು ಅದರ ಕುರಿತಾಗಿನ ಒಂದು ಒಳ್ಳೆಯ ಸಂಗತಿ. ತುರ್ತು ಪರಿಸ್ಥಿತಿ ಜಾರಿಗೆ ತಂದಿದ್ದಕ್ಕೆ ನೈತಿಕ ಮತ್ತು ರಾಜಕೀಯ ಹೊಣೆ ಹೊರಬೇಕಿರುವುದು ಕಾಂಗ್ರೆಸ್ ಪಕ್ಷ. ಆ ಸಂದರ್ಭದಲ್ಲಿ ಅತಿರೇಕಗಳು ನಡೆದವು ಎಂಬುದನ್ನು ಕಾಂಗ್ರೆಸ್ ಒಪ್ಪಿಕೊಂಡಿದೆಯಾದರೂ ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದನ್ನು ಬೇಷರತ್ತಾಗಿ ಮತ್ತು ಪೂರ್ಣವಾಗಿ ಖಂಡಿಸುವ ಕೆಲಸವನ್ನು ಅದು ಇನ್ನೂ ಮಾಡಿಲ್ಲ. ತುರ್ತು ಪರಿಸ್ಥಿತಿ ಬಗ್ಗೆ ಆಗಾಗ ಕೆಲವು ವಿವರಣೆಗಳನ್ನು ಪಕ್ಷವು ನೀಡಿದೆ. ಅವು ವಾಸ್ತವದಲ್ಲಿ ಮಾರುವೇಷದ ಸಮರ್ಥನೆಗಳು.




> ಯಾವುದೇ ಸಮಾಜ, ಯಾವುದೇ ವ್ಯವಸ್ಥೆಯು ಸರ್ವಾಧಿಕಾರದ ತೆಕ್ಕೆಗೆ ಜಾರುವ ಅಪಾಯ ಇರುತ್ತದೆ. ಸರ್ವಾಧಿಕಾರವು ಯಾವುದೇ ಸಂದರ್ಭದಲ್ಲಿ, ಬಗೆಬಗೆಯ ರೂಪಗಳಲ್ಲಿ ಎದುರಾಗಬಹುದು

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತುರ್ತು ಪರಿಸ್ಥಿತಿಯ ಸ್ಮರಣಾರ್ಥವಾಗಿ ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿದೆ. 'ಭಾರತದ ಪ್ರಜಾತಂತ್ರದ ಇತಿಹಾಸದಲ್ಲಿನ ಅತ್ಯಂತ ಕರಾಳ ಅವಧಿ'ಯ ಬಗ್ಗೆ ಜನರಿಗೆ ನೆನಪು ಮಾಡಿಕೊಡಲು ಸರ್ಕಾರವು ಕಾರ್ಯಕ್ರಮಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದೆ. ಆಗಿನ ಸಂದರ್ಭದ ದಾಳಿಗಳ ಬಗ್ಗೆ ಯಾವ ನೆನಪುಗಳೂ ಇಲ್ಲದ ಯುವಜನರಿಗೆ ಅದರ ಬಗ್ಗೆ ಹೇಳಬೇಕಾದ ಅಗತ್ಯ ಇದೆ. ಆದರೆ, ತುರ್ತು ಪರಿಸ್ಥಿತಿಯು ಈಗಲೂ ಗತ ಪದ ಅಲ್ಲ. ನಾಗರಿಕ ಸ್ವಾತಂತ್ರ್ಯಕ್ಕೆ ಈಗಲೂ ಲಗಾಮು ಬೀಳುತ್ತಿದೆ, ಅಭಿವ್ಯಕ್ತಿ ಸ್ವಾತಂತ್ರ್ಯವು ಇಂದಿಗೂ ಬಂಧಮುಕ್ತ ಆಗಿಲ್ಲ, ಮುನ್ನೆಚ್ಚರಿಕೆಯ ಕ್ರಮಕ್ಕಾಗಿ ಬಂಧಿಸುವುದು ಮುಂದುವರಿದಿದೆ, ವಿರೋಧ ಪಕ್ಷಗಳ ನಾಯಕರನ್ನು ಮತ್ತು ನಾಗರಿಕ ಹಕ್ಕುಗಳ ಪರವಾಗಿ ಹೋರಾಟ ನಡೆಸುವವರನ್ನು ಗುರಿಯಾಗಿಸಿಕೊಳ್ಳಲು ಕಾನೂನು ಜಾರಿ ಸಂಸ್ಥೆಗಳು ಹಾಗೂ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದ ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ದೇಶದ ಸಂಸತ್ತಿನ ಮಹತ್ವವನ್ನು ಕುಗ್ಗಿಸಲಾಗಿದೆ, ಭಿನ್ನ ಅಭಿಪ್ರಾಯಗಳ ಬಗ್ಗೆ ಸಹಿಷ್ಣುತೆ ಕಾಣುತ್ತಿಲ್ಲ, ನಾಯಕನೊಬ್ಬನನ್ನು ಕೇಂದ್ರೀಕರಿಸಿಕೊಂಡು ವ್ಯಕ್ತಿಪೂಜೆ ನಡೆಯುತ್ತಿದೆ. ಇವೆಲ್ಲವೂ ತುರ್ತು ಪರಿಸ್ಥಿತಿಯ ಗುಣಲಕ್ಷಣಗಳು, ಸರ್ವಾಧಿಕಾರದ ಸೂಚಕಗಳು. 'ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿ ಇದೆ' ಎಂಬ ಮಾತನ್ನು ವಿರೋಧ ಪಕ್ಷಗಳ ಹಲವು ನಾಯಕರು ಹೇಳಿದ್ದಾರೆ. ಆದರೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಡೆದವುಗಳನ್ನು ಸಮರ್ಥಿಸಲು ಈಗಿನ ಸಂದರ್ಭದಲ್ಲಿ ಆಗುತ್ತಿರುವುದನ್ನು ಬಳಸಿಕೊಳ್ಳುವುದು ಖಂಡಿತ ತಪ್ಪು.

ತುರ್ತು ಪರಿಸ್ಥಿತಿ ಎಂಬುದು ಸರ್ವಾಧಿಕಾರಿ ಮನಃಸ್ಥಿತಿಯ ಸರ್ಕಾರ ಬಳಸಿದ ರಾಜಕೀಯ ಹಾಗೂ ಕಾನೂನು ಅಸ್ತ್ರ ಮಾತ್ರವೇ ಅಲ್ಲ. ಅದು ಸ್ವಾತಂತ್ರ್ಯಕ್ಕೆ ಮತ್ತು ಸಂವಿಧಾನದ ಅತ್ಯುತ್ತಮ ಮೌಲ್ಯಗಳಿಗೆ ವಿರುದ್ಧವಾಗಿ ವರ್ತಿಸುವ ಅಧಿಕಾರದ ಒಳಗೆ ಕೂತಿರುವ ಮನಃಸ್ಥಿತಿ. ನಮ್ಮ ಸ್ವಾತಂತ್ರ್ಯದ ವಿಚಾರದಲ್ಲಿ ಸರ್ಕಾರಗಳನ್ನು ಹಾಗೂ ರಾಜಕೀಯ ಪಕ್ಷಗಳನ್ನು ನಂಬಲು ಆಗುವುದಿಲ್ಲ ಎಂಬುದು ದೇಶ ಕಂಡ ತುರ್ತು ಪರಿಸ್ಥಿತಿಯ ವರ್ಷಾಚರಣೆಯ ಈ ಸಂದರ್ಭದಲ್ಲಿ ಅಗತ್ಯವಾಗಿ ಮನನ ಮಾಡಿಕೊಳ್ಳಬೇಕಾದ ಪಾಠ. ತಮ್ಮ ಸ್ವಾತಂತ್ರ್ಯವನ್ನು ಜನ ತಾವೇ ರಕ್ಷಿಸಿಕೊಳ್ಳಬೇಕು, ಆ ಸ್ವಾತಂತ್ರ್ಯ ಕಾಪಾಡುವ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಜನರೇ ಬಲಪಡಿಸಬೇಕು. ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಹೊಣೆ ನಮ್ಮದೇ ಆಗಿರುತ್ತದೆ.

ಯುದ್ಧ ಮರುಕಳಿಸದಿರಲಿ



ಇರಾನ್ ವಿರುದ್ಧ ಅಮೆರಿಕ– ಇಸ್ರೇಲ್ ನಡೆಸಿದ ಆಕ್ರಮಣಕಾರಿ ಯುದ್ಧಕ್ಕೆ ವಿರಾಮ ದೊರೆತಿರುವುದು ಸ್ವಾಗತಾರ್ಹ. ಕದನ ವಿರಾಮವನ್ನು ಶಾಶ್ವತಗೊಳಿಸಲು ಹಾಗೂ ಅಪಾಯಕಾರಿ, ವಿವೇಕರಹಿತ, ಪರಿಣಾಮಗಳ ಅರಿವಿಲ್ಲದ ಯುದ್ಧ ಮರುಕಳಿಸುವುದನ್ನು ನಿವಾರಿಸುವಂತಹ ಪರಿಸ್ಥಿತಿಯನ್ನು ಸೃಷ್ಟಿಸಲು ಎಲ್ಲರೂ ಸರ್ವ ಪ್ರಯತ್ನ ನಡೆಸಬೇಕು.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ, 'ಎಕ್ಸ್'ನಿಂದ

ಕಿಡಿನುಡಿ



ಯುನೆಸ್ಕೊ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿ ದಿಗಿಲು ಹುಟ್ಟಿಸುತ್ತದೆ. ವಿಶ್ವದ ಶೇಕಡ 92ರಷ್ಟು ಜನರು ಮುಂದಿನ ಆರು ದಶಕಗಳಲ್ಲಿ ತಾವು ಮಾತನಾಡುವ ಭಾಷೆ ಮರೆತು, ಶೇ 8ರಷ್ಟು ಜನರು ಮಾತನಾಡುವ ಭಾಷೆ ಮೇಲೆ ಅವಲಂಬಿತರಾಗುತ್ತಾರೆ. ಭಾಷೆ ಬಗ್ಗೆ ಎಚ್ಚರಿಕೆ ಇರದಿದ್ದರೆ ನಾವೂ ನಮ್ಮ ಭಾಷೆಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

25 ವರ್ಷಗಳ ಹಿಂದೆ

ಭಾನುವಾರ, 25-6-2000

● **'ಅಖಂಡ ಕರ್ನಾಟಕ ಒಡೆಯದಿರಲಿ'**

ಬಾಗಲಕೋಟೆ, (ಸತ್ಯಕಾಮ ವೇದಿಕೆ), ಜೂನ್ 24– ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಮತ್ತು ಹುಬ್ಬಳ್ಳಿಯಲ್ಲಿ ನೈಋತ್ಯ ರೈಲ್ವೆ ವಲಯ ಸ್ಥಾಪಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರವು ತುರ್ತು ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ 68ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಶಾಂತಾದೇವಿ ಮಾಳವಾಡ ಇಂದಿಲ್ಲಿ ಆಗ್ರಹಪಡಿಸಿದರು.

ಪ್ರಾದೇಶಿಕ ಅಸಮಾನತೆಯ ಪರಿಣಾಮವಾಗಿ ಭುಗಿಲೆದ್ದಿರುವ ಪ್ರತ್ಯೇಕ ರಾಜ್ಯದ ಕೂಗನ್ನು ಈ ಮೂಲಕ ಕೊನೆಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

'ಅಖಂಡ ಕರ್ನಾಟಕ ಎಂದಿಗೂ ಒಡೆದು ಹೋಗದಂತೆ ಸರ್ಕಾರ ರಾಜ್ಯದ ಎಲ್ಲ ಪ್ರದೇಶಗಳ ಅಭಿವೃದ್ಧಿಯನ್ನು ಸಮ ಪ್ರಮಾಣದಲ್ಲಿ ಸಾಧಿಸಬೇಕು' ಎಂದು ಹೇಳಿದರು.

75 ವರ್ಷಗಳ ಹಿಂದೆ

ಭಾನುವಾರ, 25-6-1950

● **ಲಂಡನ್ ಬಾಲಕನ ಪವಾಡ**

ಲಂಡನ್, ಜೂನ್ 24– ನಾಲ್ಕು ವರ್ಷ ವಯಸ್ಸಿನ ರಸೆಲ್‌ಟಾಂಗೆ ಜೂನ್ ಎಂಬ ಮಿಯಾಮಿಯ ಬಾಲಕನು ತನ್ನ ಹತ್ತು ತಿಂಗಳ ವಯಸ್ಸಿನಿಂದಲೇ ಈಜುವುದನ್ನು ಪ್ರಾರಂಭ ಮಾಡಿದ್ದಾನೆ. ಆಗಸ್ಟ್ ತಿಂಗಳಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ಈಜುವುದರ ಮೂಲಕ ದಾಟಬಹುದೆಂದು ಅವನ ತಂದೆ ತಿಳಿಸಿದ್ದಾರೆ.

ಮಿಸಿಸ್ಸಿಪಿ ನದಿಯಲ್ಲಿ 22 ಮೈಲಿಗಳ ಉದ್ದ ಈಗಾಗಲೇ ತಡೆಯಿಲ್ಲದೆ ಈಜಿದ್ದಾನೆ ಎಂಬುದಾಗಿ ಈ ದಿನದ 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಕಥೆಗಳಲ್ಲಿ ಸೂಚಿಸಲಾಗಿದೆ.

ಜಾತಿ ಜನಗಣತಿಯ ಚಕ್ರವ್ಯೂಹ



ವಿಶ್ಲೇಷಣೆ

ಬಿ.ಎಸ್. ಅರುಣ್

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಚಿವ ಸಂಪುಟವು ಜಾತಿ ಜನಗಣತಿಯನ್ನು (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ಪುನಃ ನಡೆಸಲು ನಿರ್ಧರಿಸಿದೆ. ಈ ನಿರ್ಧಾರವು ಜಾತಿ ಜನಗಣತಿ ಬಗ್ಗೆ ಇದ್ದ ಗೊಂದಲವನ್ನು ಒಂದಷ್ಟು ಕಡಿಮೆ ಮಾಡಿದ್ದರೂ ಅನೇಕ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟಿದೆ.

ಮೊದಲನೆಯದಾಗಿ, ಗಣತಿ ಮಾಡುವ ಬಗ್ಗೆ. ಮುಂದಿನ ಮೂರು ತಿಂಗಳ ಒಳಗಾಗಿ ಜಾತಿ ಜನಗಣತಿಯನ್ನು ಮುಗಿಸುತ್ತೇವೆಂದೂ ಮತ್ತು ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಈ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳುವುದೆಂದೂ ಮುಖ್ಯಮಂತ್ರಿ ಹೇಳಿರುವುದಾಗಿ ವರದಿಯಾಗಿದೆ. ಸದ್ಯಕ್ಕೆ ಈ ಆಯೋಗದಲ್ಲಿ, ಆರು ತಿಂಗಳ ಹಿಂದೆ ನೇಮಕಗೊಂಡ ಅಧ್ಯಕ್ಷರಷ್ಟೇ ಇದ್ದಾರೆ. ಐವರು ಸದಸ್ಯರ ನೇಮಕ ಇನ್ನೂ ಆಗಬೇಕಿದೆ. ಇನ್ನು, ಕಳೆದ ಬಾರಿ 55 ಪ್ರಶ್ನೆಗಳು ಇದ್ದ ಹಾಗೆ ಈ ಬಾರಿಯೂ ಪ್ರಶ್ನಾವಳಿ ತಯಾರಿ ನಡೆಯಬೇಕಿದೆ. ಮನೆಗಳ ಗುರುತು, ಸಮೀಕ್ಷೆ ನಡೆಸುವವರಿಗೆ ತರಬೇತಿ, ಡಿಜಿಟಲೀಕರಣ ಯಾವ ರೀತಿ ಇರಬೇಕು ಎನ್ನುವ ಸ್ಪಷ್ಟತೆ, ಈ ಎಲ್ಲವೂ ಸಮೀಕ್ಷೆ ಪ್ರಾರಂಭಗೊಳ್ಳುವ ಮೊದಲೇ ಆಗಬೇಕು. ಸಮೀಕ್ಷೆಯ ನಂತರ ಕಚ್ಚಾ ದತ್ತಾಂಶಗಳ ವಿಶ್ಲೇಷಣೆ ಆಗಬೇಕು. ನಂತರವಷ್ಟೇ ವರದಿಯ ತಯಾರಿಕೆ.

ಹೊಸ ಗಣತಿಯನ್ನು ಮಾಡುವವರು ಯಾರು ಎನ್ನುವುದು ನಂತರದ ಪ್ರಶ್ನೆ. ಸಾಮಾನ್ಯವಾಗಿ, ಗಣತಿ ಕಾರ್ಯವನ್ನು ನಡೆಸಿಕೊಡುವವರು ಶಿಕ್ಷಕರು. ಆದರೆ, ಈಗಾಗಲೇ ಶಾಲೆಗಳು ಪ್ರಾರಂಭವಾಗಿರುವುದರಿಂದ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರಿಗೆ ಬಿಡುವಿರುವುದಿಲ್ಲ. ಮುಂದಿನ ವರ್ಷ ಫೆಬ್ರುವರಿ–ಮಾರ್ಚ್‌ವರೆಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಅವರು ನಿರತರಾಗಿರುತ್ತಾರೆ. ಶಿಕ್ಷಕರಿಂದಲೇ ಗಣತಿ ಕಾರ್ಯ ಮಾಡಿಸಬೇಕೆಂದಿದ್ದರೆ, 2026ರ ಏಪ್ರಿಲ್‌ವರೆಗೂ ಕಾಯಬೇಕು. ಜಾತಿ ಜನಗಣತಿಯಲ್ಲಿ ಶಿಕ್ಷಕರನ್ನು ಬಳಸಿಕೊಳ್ಳುವುದಿಲ್ಲ ಎಂದು ಶಿಕ್ಷಣ ಸಚಿವರೇನೋ ಹೇಳಿದ್ದಾರೆ. ಆದರೆ, ಶಿಕ್ಷಕರ ಬದಲು ಯಾರು ಗಣತಿ ನಡೆಸುತ್ತಾರೆ ಎನ್ನುವುದನ್ನವರು ಸ್ಪಷ್ಟಗೊಳಿಸಿಲ್ಲ.

ಶಿಕ್ಷಕರ ಬದಲು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಂದ ಗಣತಿ ಕಾರ್ಯ ನಡೆಸುವ ಬಗ್ಗೆ ಯೋಚಿಸಲಾಗುತ್ತಿದೆ ಎನ್ನಲಾಗಿದೆ. ಹಾಗೇನಾದರೂ ಆದಲ್ಲಿ, ಅವರು ನಿರ್ವಹಿಸುತ್ತಿರುವ ಕರ್ತವ್ಯದಲ್ಲಿ ವ್ಯತ್ಯಯವಾಗುವುದಿಲ್ಲವೇ? ಬಹುಶಃ, ಇದು ಕೂಡ ಕಾರ್ಯಸಾಧುವಲ್ಲ. ಇವೆರಡೂ ಆಗದಿದ್ದ ಪಕ್ಷದಲ್ಲಿ ಸರ್ಕಾರೇತರ ಸಂಸ್ಥೆಗಳಿಗೆ ಜಾತಿ ಜನಗಣತಿಯ ಕೆಲಸ ವಹಿಸುವುದನ್ನು ಸರ್ಕಾರ ಪರಿಗಣಿಸಬಹುದೇ? ಆದರೆ, ಇಲ್ಲಿ ಹೊಣೆಗಾರಿಕೆಯ ಪ್ರಶ್ನೆ ಉದ್ಭವಿಸುತ್ತದೆ ಹಾಗೂ ಬಹು ಮಹತ್ವದ ಕೆಲಸವನ್ನು ಸರ್ಕಾರೇತರ ಸಂಸ್ಥೆ ಕೈಗೆತ್ತಿಕೊಳ್ಳುವುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗುವ ಸಾಧ್ಯತೆ ಹೆಚ್ಚು.

ಈಗ ಮಳೆಗಾಲ. ಸೆಪ್ಟೆಂಬರ್– ಅಕ್ಟೋಬರ್ ಕೊನೆಯವರೆಗೂ ಮಳೆ ಇರುತ್ತದೆ. ಕೃಷಿ ಚಟುವಟಿಕೆಗಳು ನಡೆಯುವ ಸಮಯದಲ್ಲಿ ಸಮೀಕ್ಷೆ ನಡೆಸುವುದು ಅಸಾಧ್ಯ. ಇದು ಸರ್ಕಾರಕ್ಕೆ ಗೊತ್ತಿಲ್ಲದ ಸಂಗತಿಯೇನಲ್ಲ.

ಈ ಹಿಂದೆ, ಕಾಂತರಾಜ ಆಯೋಗವು ನಡೆಸಿದ್ದ ಜಾತಿ ಜನಗಣತಿಯಲ್ಲಿ 1.6 ಲಕ್ಷ ಸಿಬ್ಬಂದಿ ಭಾಗಿ ಆಗಿದ್ದರು. ಅದರಲ್ಲಿ ಶಿಕ್ಷಕರ ಸಂಖ್ಯೆಯೇ 1.33 ಲಕ್ಷದಷ್ಟಿತ್ತು. ಈ ಭಾರಿ ಇಷ್ಟೇ ಸಂಖ್ಯೆಯ ಶಿಕ್ಷಕರು ಶೈಕ್ಷಣಿಕ ವರ್ಷ ಪ್ರಾರಂಭವಾದ ನಂತರ ಸಿಗುವುದು ಕಷ್ಟಸಾಧ್ಯ. ಅಷ್ಟೇ ಅಲ್ಲ, 'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು' ಕಾಯ್ದೆಯ ಪ್ರಕಾರ, ಶೈಕ್ಷಣಿಕ ವರ್ಷ ಪ್ರಾರಂಭವಾದ ಮೇಲೆ ಶಿಕ್ಷಕರಿಗೆ ಬೇರೆ ಯಾವುದೇ ಕೆಲಸವನ್ನೂ ಕೊಡುವಂತಿಲ್ಲ. ಕಾಂತರಾಜ ಆಯೋಗವು 2015ರ ಏಪ್ರಿಲ್ 11ರಿಂದ ಮೇ 30ರವರೆಗೆ ನಡೆಸಿದ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಸುಮಾರು 50 ದಿನಗಳಲ್ಲೇ ಮುಗಿದರೂ ಅದು ನಡೆದದ್ದು ಶಾಲೆಗಳಿಗೆ ರಜೆ ಇದ್ದ ದಿನಗಳಲ್ಲಿ.

ಆಗಿನ ಜನಸಂಖ್ಯೆಯ 6.35 ಕೋಟಿಯಲ್ಲಿ ಸಮೀಕ್ಷೆಗೆ ಒಳಪಟ್ಟವರು 5.98 ಕೋಟಿ. ಈಗಿನ ಜನಸಂಖ್ಯೆ 7 ಕೋಟಿ ಮೀರುವ ಸಾಧ್ಯತೆ ಹೆಚ್ಚು. ಕಳೆದ ಬಾರಿಯ ಸಮೀಕ್ಷೆಗೆ ಆದ ವೆಚ್ಚ ₹165 ಕೋಟಿ. ಹೊಸ ಸಮೀಕ್ಷೆಯ ವೆಚ್ಚದ ಬಗ್ಗೆ ಸರ್ಕಾರ ಯಾವುದೇ ಹೇಳಿಕೆ ನೀಡಿಲ್ಲದಿದ್ದರೂ ಈ ಬಾರಿ ಆ ಮೊತ್ತ ₹300 ಕೋಟಿ ದಾಟುವ ಸಾಧ್ಯತೆ ಇದೆ.

ಕಾಂತರಾಜ ಹಾಗೂ ಜಯಪ್ರಕಾಶ್ ಹೆಗ್ಡೆ ವರದಿ ಬಗ್ಗೆ ತನ್ನ ನಿಲುವು ಏನೆಂದು ಸರ್ಕಾರ ಈವರೆಗೂ ಸ್ಪಷ್ಟನೆ ನೀಡಿಲ್ಲ. ವರದಿಯನ್ನು ಸ್ವೀಕರಿಸಿರುವುದು ಮಾತ್ರವೋ ಅಥವಾ ಒಪ್ಪಿಕೊಳ್ಳಲಾಗಿದೆಯೋ ಎನ್ನುವುದರ ಬಗ್ಗೆ ಸರ್ಕಾರ ಏನನ್ನೂ ಹೇಳಿಲ್ಲ. ಏನೇ ತೀರ್ಮಾನವಿದ್ದರೂ ವರದಿಯನ್ನು ಬಹಿರಂಗವಂತೂ ಮಾಡಿಲ್ಲ. ಈವರೆಗೆ ತಿಳಿದುಬಂದಿರುವ ವಿವರಗಳೆಲ್ಲ, ವರದಿಯಿಂದ ಸೋರಿಕೆಗೊಂಡು ಮಾಧ್ಯಮಗಳಲ್ಲಿ ಪ್ರಕಟಗೊಂಡಿರುವ ದತ್ತಾಂಶಗಳಷ್ಟೇ.

ಸೋರಿಕೆಗೊಂಡ ದತ್ತಾಂಶಗಳ ಪ್ರಕಾರ ಪ್ರಬಲ ಜಾತಿಗಳಾದ ಲಿಂಗಾಯತ, ಒಕ್ಕಲಿಗರ ಜನಸಂಖ್ಯೆಯು ಆ ಸಮುದಾಯಗಳ ಸಂಘಟನೆಗಳು ಪ್ರತಿಪಾದಿಸುತ್ತಿರುವ ಸಂಖ್ಯೆಗೆ ಹೋಲಿಸಿದರೆ ಭಾರಿ ಪ್ರಮಾಣದಲ್ಲಿ ಕಡಿಮೆ ಇದೆ. ಈ ವ್ಯತ್ಯಾಸಕ್ಕೆ ಈ ಎರಡು ಸಮುದಾಯಗಳ ವ್ಯಾಪಕ ವಿರೋಧವೂ ವ್ಯಕ್ತವಾಗಿದೆ. ಈ ಸಂಗತಿಯನ್ನು, ಉಪ ಮುಖ್ಯಮಂತ್ರಿ ಹಾಗೂ ಒಕ್ಕಲಿಗ ನಾಯಕ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ದೆಹಲಿಯಲ್ಲಿ ಹೇಳಿದ್ದಾರೆ.

ದೇವರಾಜ ಅರಸು ಅವರು ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ತುಳಿತಕ್ಕೊಳಗಾದ ಸಮುದಾಯಗಳಿಗೆ ಭರವಸೆ ತುಂಬಿ, ಅಧಿಕಾರದಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಅವರಿಗೆ ಹೆಚ್ಚಿನ ಪಾಲು ದೊರಕಿಸಿಕೊಡಲು ಶ್ರಮಿಸಿದ್ದರು. ಅದೇ ರೀತಿ, ಅವಕಾಶವಂಚಿತರಿಗೆ ನ್ಯಾಯ ದೊರಕಿಸಿಕೊಡುವ ದಿಸೆಯಲ್ಲಿ ಕಳೆದ ಸಮೀಕ್ಷೆಯೂ ಮಹತ್ವದ ಹೆಜ್ಜೆ ಇರಿಸಿತ್ತು. ತೆಲಂಗಾಣ ಮತ್ತು ಬಿಹಾರದಲ್ಲಿ ಹಿಂದುಳಿದ ಸಮುದಾಯಗಳಿಗೆ ಜಾತಿ ಸಮೀಕ್ಷೆಯು ಬಲವನ್ನು ತಂದುಕೊಟ್ಟಂತೆ, ಸಿದ್ದರಾಮಯ್ಯನವರ ಅವಧಿಯಲ್ಲಿ ತಮಗೂ ನ್ಯಾಯ ದೊರೆಯುತ್ತದೆ ಎಂದು ಈ ಸಮುದಾಯಗಳು ಕಾಯುತ್ತಿದ್ದರೆ ಆಶ್ಚರ್ಯವೇನಿಲ್ಲ.

> ಹೊಸದಾಗಿ ಜಾತಿ ಜನಗಣತಿ ನಡೆಸುವ ಕರ್ನಾಟಕ ಸರ್ಕಾರದ ನಿರ್ಧಾರವು ಹೊಸ ಸಮಸ್ಯೆಗಳನ್ನು ಆಹ್ವಾನಿಸುವಂತಿದೆ. ರಾಜಕೀಯ ಸವಾಲುಗಳ ಜೊತೆಗೆ ವಿವಿಧ ಸಮುದಾಯಗಳ ಅಸಮಾಧಾನವನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎದುರಿಸಬೇಕಾಗಬಹುದು. ಅವರು ಈ ಸವಾಲುಗಳನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವುದು ಕುತೂಹಲಕರ

ಕಾಂತರಾಜ ಆಯೋಗದ ವರದಿಯನ್ನು ಆಧಾರವಾಗಿಟ್ಟುಕೊಂಡು ಜಯಪ್ರಕಾಶ್ ಹೆಗ್ಡೆ ಆಯೋಗವು ರಾಜ್ಯದ ಹಿಂದುಳಿದ ವರ್ಗಗಳ ಜನಸಂಖ್ಯೆಯು ಶೇ 70ರಷ್ಟಿದ್ದು, ಅವರಿಗೆ ಮೀಸಲಾತಿಯನ್ನು ಶೇ 32ರಿಂದ ಶೇ 51ಕ್ಕೆ ಏರಿಸಬೇಕೆಂದು ಶಿಫಾರಸು ಮಾಡಿತ್ತು. ಮುಸ್ಲಿಮರ ಜನಸಂಖ್ಯೆ ಹೆಚ್ಚಾಗಿರುವುದನ್ನು ಗುರುತಿಸಿರುವ ಸಮೀಕ್ಷೆ ಆ ಸಮುದಾಯಕ್ಕೂ ಮೀಸಲಾತಿಯನ್ನು ಏರಿಸಬೇಕು ಎಂದು ಹೇಳಿತ್ತು.

ಜಾತಿ ಲೆಕ್ಕಾಚಾರದಲ್ಲಿ ಬಲಿಷ್ಠವಾಗಿರುವ ಲಿಂಗಾಯತ, ಒಕ್ಕಲಿಗ ಸಮುದಾಯಗಳಿಗೆ ರಾಜ್ಯ ಸರ್ಕಾರ ಮಣಿದಿರುವುದು ಸ್ಪಷ್ಟ. ಕಳೆದ ಸುಮಾರು ಒಂದೂವರೆ ದಶಕದ ಅವಧಿಯಲ್ಲಿ ಹಿಂದುಳಿದ ಸಮುದಾಯಗಳ ನಾಯಕರಾಗಿ ಹೊರಹೊಮ್ಮಿರುವ ಸಿದ್ದರಾಮಯ್ಯನವರಿಗೆ ಹಿನ್ನಡೆಯಾಗಿರುವುದೂ ಸ್ಪಷ್ಟ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಈ ನಡೆಯಿಂದ ಹಿಂದುಳಿದ ಸಮುದಾಯದ ಮುಂದಿನ ಹೆಜ್ಜೆ ಏನು ಎನ್ನುವುದನ್ನು ಕಾದು ನೋಡಬೇಕು.

ಇತ್ತೀಚಿನವರೆಗೂ ಆಯೋಗದ ವರದಿಯನ್ನು ಬಲವಾಗಿ ಸಮರ್ಥನೆ ಮಾಡುತ್ತಿದ್ದ ಸಿದ್ದರಾಮಯ್ಯ, ಪಕ್ಷದ ಹೈಕಮಾಂಡ್ ಹೇಳಿದ್ದರಿಂದ ಮರು ಸಮೀಕ್ಷೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಸಮೀಕ್ಷೆ ನಡೆದು 10 ವರ್ಷ ಮೀರಿರುವುದರಿಂದ, ಮರು ಸಮೀಕ್ಷೆ ಆಗಲೇಬೇಕೆಂದು ಹೇಳುತ್ತಾ, ತಮ್ಮ ದಿಢೀರ್ ಮನಃಪರಿವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅವರ ಮಾತನ್ನು ಒಪ್ಪಿಕೊಳ್ಳುವುದಾದಲ್ಲಿ, ಅವರು ಎರಡನೇ ಬಾರಿ ಅಧಿಕಾರಕ್ಕೆ ಬಂದ ತಕ್ಷಣ, 2023ರಲ್ಲಿಯೇ ವರದಿಯನ್ನು ಒಪ್ಪಿಕೊಂಡು ಜಾರಿಗೆ ತರಬಹುದಾಗಿತ್ತಲ್ಲ? ಆಗಿನ್ನೂ ವರದಿ ಕೊಟ್ಟು 10 ವರ್ಷ ಕಳೆದಿರಲಿಲ್ಲ. ಇವೆಲ್ಲವೂ ಗೊತ್ತಿದ್ದರೂ ವಿಳಂಬಕ್ಕೆ ಅವಕಾಶ ಮಾಡಿಕೊಟ್ಟ ಅವರ ವರ್ತನೆಯು ತಾವು ಹಿಂದುಳಿದ ವರ್ಗಗಳ ನಾಯಕ ಎಂದು ಬಿಂಬಿಸಿಕೊಳ್ಳಲು ನಡೆಸಿದ ತಂತ್ರವಾಗಿತ್ತೇ?

ಈಗ ಆಗಿರುವ ಜಾತಿ ಜನಗಣತಿಯನ್ನು ಕಾಂಗ್ರೆಸ್ ಹೈಕಮಾಂಡ್ ತಿರಸ್ಕರಿಸಿದೆ ಎಂದೇ ಹೇಳಬೇಕಾಗುತ್ತದೆ. ಇದೇ ಏಪ್ರಿಲ್ ತಿಂಗಳಿನಲ್ಲಿ ಅಹಮದಾಬಾದ್‌ನಲ್ಲಿ ನಡೆದ ಎಐಸಿಸಿ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದ ಈ ಜಾತಿ ಜನಗಣತಿಯನ್ನು ಪ್ರಸ್ತಾಪಿಸಿ ಹೊಗಳಿದ್ದರು; ವರದಿಯನ್ನು ತಕ್ಷಣವೇ ಜಾರಿಗೊಳಿಸಿ ಎಂದು ಹೇಳಿದ್ದರು. ಅಹಮದಾಬಾದ್‌ನಿಂದ ಮರಳಿದ ನಂತರ ಮುಖ್ಯಮಂತ್ರಿ ಮಾಡಿದ ಮೊದಲ ಕೆಲಸ, ಕ್ಯಾಬಿನೆಟ್ ಮೀಟಿಂಗ್ ಕರೆದು ಸಮೀಕ್ಷೆ ಕುರಿತು ಚರ್ಚಿಸಿದ್ದು. ಈಗ ಕಾಂಗ್ರೆಸ್ ವರಿಷ್ಠರು ತೆಲಂಗಾಣದ ಜಾತಿ ಸಮೀಕ್ಷೆಯನ್ನು ಹೊಗಳುತ್ತಿದ್ದಾರೆ. ನೆರೆ ರಾಜ್ಯದ ಸಮೀಕ್ಷೆ ಕಾಂತರಾಜ ಆಯೋಗದ ರೀತಿ 55 ಪ್ರಶ್ನೆಗಳನ್ನು ಒಳಗೊಂಡಿತ್ತು ಹಾಗೂ ಅಲ್ಲಿನ ಆಯೋಗ ಪ್ರಾರಂಭದಿಂದ ಹಿಡಿದು ವರದಿ ಕೊಡುವವರೆಗೂ ತೆಗೆದುಕೊಂಡಿದ್ದು ಕೇವಲ 6 ತಿಂಗಳು. ತೆಲಂಗಾಣದ ಸಮೀಕ್ಷೆಯ ಪ್ರಶಂಸೆ ಹಾಗೂ ಕರ್ನಾಟಕದ ಸಮೀಕ್ಷೆಯ ತಿರಸ್ಕಾರ ಸಿದ್ದರಾಮಯ್ಯನವರಿಗೆ ನುಂಗಲಾರದ ತುತ್ತಷ್ಟೇ ಅಲ್ಲ, ತೀವ್ರ ಮುಜುಗರ ತರುವ ವಿಷಯವೂ ಹೌದು.

ಹೊಸತಾಗಿ ಸಮೀಕ್ಷೆ ನಡೆಸುವ ಕರ್ನಾಟಕ ಸರ್ಕಾರದ ನಡೆ ಹಿಂದುಳಿದ ಸಮುದಾಯಗಳ ಕೆಂಗಣ್ಣಿಗೆ ಗುರಿಯಾಗುವುದಂತೂ ಸ್ಪಷ್ಟ. ತಳ ಸಮುದಾಯಗಳ ಆ ಅಸಮಾಧಾನವನ್ನು ಸಿದ್ದರಾಮಯ್ಯ ಅವರು ಹೇಗೆ ನಿಭಾಯಿಸುತ್ತಾರೆ ಎನ್ನುವುದು ಕುತೂಹಲಕರ.

ಮುಂದಿನ ಗಣತಿಯ ವರದಿ ಹಾಗೂ ಜಾತಿ ಜನಗಣತಿ ಒಳಗೊಂಡಂತೆ ಕೇಂದ್ರ ಸರ್ಕಾರ ನಡೆಸುವ ರಾಷ್ಟ್ರೀಯ ಜನಗಣತಿ, ಕರ್ನಾಟಕ ಸರ್ಕಾರಕ್ಕೆ ಹೊಸ ಸಮಸ್ಯೆಯನ್ನೇ ತಂದೊಡ್ಡಬಹುದು. ರಾಜ್ಯ ಹಾಗೂ ಕೇಂದ್ರದ ಜಾತಿಗಣತಿಯ ವಿವರ, ಶಿಫಾರಸುಗಳು ಕಳೆದ ಸಮೀಕ್ಷೆಗಿಂತ ಭಿನ್ನವಾಗಿದ್ದರೆ, ನೊಂದ ಸಮುದಾಯಗಳ ಪ್ರತಿಕ್ರಿಯೆ ಏನಿರಬಹುದು? ಮುಂದಿನ ಎರಡೂ ಗಣತಿಗಳು ಹಿಂದಿನ ಸಮೀಕ್ಷೆಯಂತೆಯೇ ಇದ್ದರೆ, ಪ್ರಬಲ ಜಾತಿಗಳ ನಿಲುವು ಏನಾಗಬಹುದು? ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜೊತೆಗೆ ಹಿಂದುಳಿದ ಸಮುದಾಯ ಕೂಡ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಭಾರಿ ವಿಜಯಕ್ಕೆ ಕಾರಣವಾಗಿತ್ತು.

ಈ ಮಧ್ಯೆ, ಅಕ್ಟೋಬರ್–ನವೆಂಬರ್‌ನಲ್ಲಿ ರಾಜ್ಯದಲ್ಲಿ ಮಹತ್ತರ ರಾಜಕೀಯ ಬೆಳವಣಿಗೆಗಳಾಗಬಹುದು ಎನ್ನಲಾಗುತ್ತಿದೆ. ನವೆಂಬರ್‌ಗೆ ಸಿದ್ದರಾಮಯ್ಯನವರ ಅಧಿಕಾರಾವಧಿ ಎರಡೂವರೆ ವರ್ಷ ಪೂರೈಸುತ್ತದೆ. ಆ ಸಮಯದಲ್ಲಿ, ಅಧಿಕಾರದ ಹಸ್ತಾಂತರ ನಡೆದು, ಮುಖ್ಯಮಂತ್ರಿ ಬದಲಾವಣೆ ಆಗಬಹುದು ಎಂದು ಹೇಳಲಾಗುತ್ತಿದೆ. ಹಾಗೇನಾದರೂ ಆದಲ್ಲಿ, ಮುಂದೆ ನಡೆಸಲಿರುವ ಜಾತಿ ಜನಗಣತಿಗಳ ಮೇಲೆ ಅದು ಯಾವ ರೀತಿಯ ಪರಿಣಾಮ ಬೀರಬಹುದು ಎನ್ನುವುದೂ ಕುತೂಹಲಕಾರಿ.

ಲೇಖಕ: ಹಿರಿಯ ಪತ್ರಕರ್ತ

ವಾಚಕರ ವಾಣಿ

ಎಣ್ಣೆಗಾಣಕ್ಕೆ ಮರುಜೀವ ಸ್ತುತ್ಯರ್ಹ

ಮಂಡ್ಯ ಜಿಲ್ಲೆಯಲ್ಲಿ ಸಾಂಪ್ರದಾಯಿಕ ಎಣ್ಣೆಗಾಣಗಳಿಗೆ ಮರುಜೀವ ನೀಡಲು ಜಿಲ್ಲಾ ಪಂಚಾಯಿತಿ ಕೈಗೊಂಡಿರುವ ತೀರ್ಮಾನವು ಸ್ತುತ್ಯರ್ಹ (ಪ್ರ.ವಾ., ಜೂನ್ 24). ಗ್ರಾಮಗಳ ಆರ್ಥಿಕ ಸಬಲೀಕರಣ, ಉದ್ಯೋಗ ಸೃಷ್ಟಿಯಂಥ ಅನುಕೂಲಗಳಿಂದ ಇಂತಹ ಯೋಜನೆಗಳ ಜಾರಿಗೆ ಮುಂದಾಗಿರುವುದು ಉತ್ತಮ ನಡೆಯಾಗಿದೆ. ಆದರೆ, ಇಂದಿನ ಗ್ರಾಮೀಣ ಪರಿಸರದಲ್ಲಿ ಇಂಥ ಯೋಜನೆಗಳ ಜಾರಿಯು ಸವಾಲಿನ ಕೆಲಸವೇ ಆಗಿದೆ. ಯೋಜನೆಗಳ ಯಶಸ್ಸಿನ ಹಿಂದೆ ಅಧಿಕಾರಿಗಳು ಮತ್ತು ಫಲಾನುಭವಿಗಳ ಜವಾಬ್ದಾರಿಯೂ ಇದೆ. ಈ ಯೋಜನೆ ವಿಫಲಗೊಂಡರೆ ಗ್ರಾಮೀಣಾಭಿವೃದ್ಧಿಯನ್ನು ಮತ್ತೆ ಸರಿದಾರಿಗೆ ತರಲು ಹಲವು ದಶಕಗಳೇ ಹಿಡಿಯಲಿದೆ.

ಸಂತೋಷ ಕೌಲಗಿ, ಮೇಲುಕೋಟೆ

ಯುವಜನರಿಗೆ ಸತ್ಯ ದರ್ಶನ ಬೇಡವೇ?

'ಯುವಜನ: ಜನಪ್ರಿಯತೆಯ ವಿಷಗಾಳಿ' ಲೇಖನವು (ಪ್ರ.ವಾ., ಜೂನ್ 24) ಸತ್ಯಾಂಶಗಳಿಂದ ಕೂಡಿದೆ. ಈಗಿನ ಯುವಜನರು ದೀಪದ ಹುಳುಗಳಂತೆ; ತಾತ್ಕಾಲಿಕವಾಗಿ ತನ್ನತ್ತ ಸೆಳೆಯುವ ದೀಪದ ಬೆಳಕಿಗೆ ಆಕರ್ಷಿತಗೊಂಡು ಸುಟ್ಟು ಕರಕಲಾಗುತ್ತಿದ್ದಾರೆ. ತಮ್ಮ ಸ್ವಂತ ಬೆಳವಣಿಗೆ ಮರೆತು ತಾತ್ಕಾಲಿಕ ಸಂತೋಷ ಕೊಡುವ ವಿಷಯಗಳತ್ತ ಬಹುಬೇಗ ಆಕರ್ಷಿತರಾಗುವುದು ಸರಿಯಲ್ಲ. ಇದರಿಂದ ಜೀವನ ಸಂಕಷ್ಟಕ್ಕೆ ಸಿಲುಕಲಿದೆ. ಇದೆಲ್ಲದಕ್ಕೂ ಶಿಕ್ಷಣವೇ ಪರಿಹಾರ. ಶೈಕ್ಷಣಿಕ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಈ ಬಗ್ಗೆ ಸತ್ಯ ದರ್ಶನ ಮಾಡಿಕೊಟ್ಟರೆ ಅವರು ಸರಿದಾರಿಯಲ್ಲಿ ಸಾಗಲು ಸಹಕಾರಿಯಾಗಲಿದೆ. ಈ ದಿಸೆಯಲ್ಲಿ ಪೋಷಕರು ಮತ್ತು ಬೋಧಕರ ಗುರುತರ ಜವಾಬ್ದಾರಿ ಹೆಚ್ಚಿದೆ.

ಎಂ.ಎಸ್. ದಿವ್ಯಶ್ರೀ, ಬೇಲೂರು

ಶಿಕ್ಷಕರ ವರ್ಗಾವಣೆ ತೊಡಕು ನಿವಾರಿಸಿ

2007ರಲ್ಲಿ ಕೊಪ್ಪಳ ಜಿಲ್ಲೆಯ ತಾಲ್ಲೂಕುವೊಂದಕ್ಕೆ ನಾನು ಪ್ರೌಢಶಾಲಾ ಶಿಕ್ಷಕಿಯಾಗಿ ನೇಮಕಗೊಂಡೆ. ಅದೇ ತಾಲ್ಲೂಕಿನಲ್ಲಿ ಮುಂದುವರಿದಿದ್ದರೆ ಈ ವೇಳೆಗೆ ವರ್ಗಾವಣೆ ಆಗಿರುತ್ತಿದ್ದೆ. ಆದರೆ, 2019ರಲ್ಲಿ ಅದೇ ಜಿಲ್ಲೆಯ ಬೇರೊಂದು ತಾಲ್ಲೂಕಿಗೆ ನನ್ನನ್ನು ಹೆಚ್ಚುವರಿ ಶಿಕ್ಷಕಿಯಾಗಿ ವರ್ಗಾಯಿಸಲಾಯಿತು. ಈಗಿನ ವರ್ಗಾವಣೆ ನಿಯಮದ ಪ್ರಕಾರ ಶೇ 25ರಷ್ಟು ಹುದ್ದೆಗಳು ಖಾಲಿ ಇರಬೇಕು ಮತ್ತು ಒಂದೇ ಬ್ಲಾಕ್‌ನಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿರುವುದು ಕಡ್ಡಾಯವಾಗಿದೆ. ಹಾಗಾಗಿ, ನಾನು ಮೂರ್ನಾಲ್ಕು ಬಾರಿ ವರ್ಗಾವಣೆಯಿಂದ ವಂಚಿತಳಾಗಿದ್ದೇನೆ.

ಇದೇ ನಿಯಮಗಳು ಮುಂದುವರಿದರೆ ನನಗೆ ವರ್ಗಾವಣೆಯಾಗಲು ಇನ್ನೂ ನಾಲ್ಕು ವರ್ಷ ಬೇಕು. ನನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತಾಗಿದೆ. ವರ್ಗಾವಣೆ ಪ್ರಕ್ರಿಯೆಯಲ್ಲಿ ಎದುರಾಗಿರುವ ತೊಡಕುಗಳಿಗೆ ಶಿಕ್ಷಣ ಸಚಿವರು ಪರಿಹಾರ ಹುಡುಕಬೇಕಿದೆ.

ರೂಪಾ ದೊಡಮನಿ, ಕುಷ್ಟಗಿ

ನಾಚಿಕೆಪಡುವಂಥ ಕಾಲ!

ನಾನು ಐಐಟಿಯಲ್ಲಿ ಎಂ.ಟೆಕ್ ಓದುವಾಗ ಅಲ್ಲಿ ಬೇರೆ ರಾಜ್ಯದ ಸಂಘಗಳಿದ್ದವು. ಕನ್ನಡ ಸಂಘದ ಕಾರ್ಯಕ್ರಮಗಳಿಗೆ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಷ್ಟೇ ಬರುತ್ತಿದ್ದರು. ಸ್ನಾತಕ ಪದವಿ ವಿದ್ಯಾರ್ಥಿಗಳು ಬಾರದಿರುವುದು ಸೋಜಿಗವೆನಿಸಿತ್ತು. ಬಹಳ ದಿನಗಳ ನಂತರ ಇದಕ್ಕೆ ಕಾರಣವೂ ಗೊತ್ತಾಯಿತು. ಹಿಂದಿ ಅಥವಾ ಇಂಗ್ಲಿಷ್‌ನಲ್ಲಷ್ಟೇ ಮಾತನಾಡಬೇಕೆಂದು ಈ ವಿದ್ಯಾರ್ಥಿಗಳು ತಮ್ಮಲ್ಲೇ ಕಡ್ಡಾಯ ಮಾಡಿಕೊಂಡಿದ್ದರು. ಯಾವುದೇ ವಿದ್ಯಾರ್ಥಿಯು ತಮ್ಮ ರಾಜ್ಯದವರ ಜೊತೆ ಸೇರಿದರೆ ಅವರನ್ನು 'ಹಿಂದಿವಾಲಾ'ಗಳು ಆಡಿಕೊಳ್ಳುತ್ತಿದ್ದರು. ದಕ್ಷಿಣ ಭಾರತದವರನ್ನು ಅಪಹಾಸ್ಯ ಮಾಡುತ್ತಿದ್ದರು.

ಆದರೆ, ತಮಿಳು ಹುಡುಗರು ಇಂಥದ್ದಕ್ಕೆಲ್ಲ ಸೊಪ್ಪು ಹಾಕುತ್ತಿರಲಿಲ್ಲ. ಕನ್ನಡ ಹುಡುಗರು ಕಂಡರೂ ಕಾಣದಂತೆ ಹೋಗಿಬಿಡುತ್ತಿದ್ದರು. ಇದಕ್ಕೆ ಮೂಲ ಕಾರಣವೆಂದರೆ ಬಂಗಾಳಿ, ತಮಿಳು, ಮಲಯಾಳ, ಮರಾಠಿ ಭಾಷಿಕರನ್ನು ಬಿಟ್ಟರೆ ಉಳಿದವರು ಹಿಂದಿ ಯಜಮಾನಿಕೆಯನ್ನು ಒಪ್ಪಿಕೊಂಡಿರುವುದಾಗಿದೆ. ಇಂಗ್ಲಿಷ್ ಮಾತನಾಡುವವರು ನಾಚಿಕೆ ಪಟ್ಟುಕೊಳ್ಳುವ ಕಾಲ ಬರಲಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಹೇಳಿದ್ದನ್ನು ಕೇಳಿ ಹಳೆಯ ಈ ಪ್ರಸಂಗಗಳು ನೆನಪಾದವು. ಅಂದಹಾಗೆ 'ಕನ್ನಡ ಮಾತನಾಡುವವರು ನಾಚಿಕೆಪಡುವ ಕಾಲ'ವನ್ನು ನಾನು ಆಗಲೇ ಕಂಡಿದ್ದೆ.

ಶಶಿಧರ ಪಾಟೀಲ, ಬಾಗಲಕೋಟೆ

ಮನೆ ಮಂಜೂರಿಗೆ ಲಂಚ ಹೊಸತೇನಲ್ಲ

'ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಲಂಚ ನೀಡಬೇಕಿದೆ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಮಾಡಿರುವ ಆರೋಪವು ಹೊಸದೇನಲ್ಲ. ಎಲ್ಲ ಪಕ್ಷಗಳ ಅಧಿಕಾರಾವಧಿಯಲ್ಲಿ ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆಯಲ್ಲಿ ಫಲಾನುಭವಿಗಳು ಲಂಚ ನೀಡಿದರಷ್ಟೇ ಮನೆ ಮಂಜೂರಾಗಲಿದೆ. ಇದರಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗೀದಾರರಾಗಿದ್ದಾರೆ.


ವಿ.ಜಿ. ಇನಾಮದಾರ, ಸಾರವಾಡ

ಶಿಕ್ಷಕರ ಮೇಲೆ ಕಣ್ಗಾವಲು ಸರಿಯೇ?

ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಮುಖಚರ್ಯೆ ಆಧಾರಿತ ಇ-ಹಾಜರಾತಿ ಕಡ್ಡಾಯಕ್ಕೆ ರಾಜ್ಯ ಸರ್ಕಾರ ಮುಂದಾಗಿರುವ ಸುದ್ದಿ ಓದಿ ಅಚ್ಚರಿಯಾಯಿತು (ಪ್ರ.ವಾ., ಜೂನ್ 22). ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ತಪಾಸಣಾ ಅಧಿಕಾರಿಗಳು ಇಲ್ಲವೇ? ನಕಲಿ ದಾಖಲಾತಿ ತೋರಿಸುತ್ತಿದ್ದರೆ ಅಂತಹ ಶಿಕ್ಷಕರಿಗೆ ಶಿಕ್ಷೆ ಏಕಿಲ್ಲ? ಸಮಾಜದಲ್ಲಿ ಶಿಕ್ಷಕ ವೃತ್ತಿ ಪವಿತ್ರವೆಂದು ಭಾವಿಸಲಾಗಿದೆ. ಈಗ ಶಿಕ್ಷಕರ ಮೇಲೆಯೇ ಕಣ್ಗಾವಲು ಇಡುವ ಪರಿಸ್ಥಿತಿ ಬಂದಿರುವುದು ದುರಂತ.

ರವಿ ಯಲಿಗಾರ, ಮುನವಳ್ಳಿ

ಚುರುಮುರಿ



ಮಾವಿನ ನೋವು

● ಮಣ್ಣೆ ರಾಜು

'ಅಮ್ಮಾವ್ರೇ, ತಾಜಾ ಮಾವಿನ ಹಣ್ಣು ತಗೊಳ್ಳಿ...' ಎಂದು ಕೂಗಿದ ಮಾರಣ್ಣ.

'ಬೇಡ, ನಿನ್ನತ್ರ ರೇಟ್ ಜಾಸ್ತಿ, ಬೆಲೆ ಕುಸಿದಿದೆ ಎಂದು ಬೆಳೆಗಾರರು ಮಾವಿನ ಹಣ್ಣನ್ನು ರಸ್ತೆಗೆ ಸುರಿಯುತ್ತಿದ್ದಾರೆ...' ಎನ್ನುತ್ತಲೇ ಹೊರಗೆ ಬಂದ ಸುಮಿ ಹಣ್ಣು ಆರಿಸಿಕೊಳ್ಳತೊಡಗಿದಳು.

'ತಿಂದು ನೋಡಿ, ರುಚಿಯಾಗಿಲ್ಲವೆಂದರೆ ನಾಳೆ ದುಡ್ಡು ವಾಪಸ್ ಕೊಡ್ತೀನಿ' ಅಂದ ಮಾರಣ್ಣ.

'ಒಳ್ಳೆ ಕಲರ್ ಇರುವ ಹಣ್ಣು ಕೊಡು'.

'ಕಲರ್, ಡಿಸೈನು ನೋಡ್ಬೇಡಿ, ರುಚಿ ನೋಡಿ' ಎಂದು ಆರಿಸಿಕೊಟ್ಟ ಮಾರಣ್ಣ.

'ಬೆಲೆ ಕುಸಿದರೂ ಮಾವಿನ ವ್ಯಾಪಾರ ಬಿಟ್ಟಿಲ್ಲ, ಕಷ್ಟಕಾಲದಲ್ಲೂ ಮಾವು ಮುನ್ನಡೆಸುವ ಮಾವುತ ನೀನು' ಎನ್ನುತ್ತಾ ಶಂಕ್ರಿ ಬಂದ.

'ಹಣ್ಣು ತಿನ್ನೋರು ಕಮ್ಮಿಯಾಗಿದ್ದಾರೆ ಸಾರ್. ಒಂದು ಪೂರ್ತಿ ಹಲಸಿನ ಹಣ್ಣನ್ನು ನಾನೊಬ್ಬನೇ ತಿಂತೀನಿ, ಒಂದೇ ಬಾರಿಗೆ ಡಜನ್ ಮಾವಿನ ಹಣ್ಣು ಮುಗಿಸ್ತೀನಿ' ಎಂದು ತನ್ನ ಸಾಮರ್ಥ್ಯ ಹೇಳಿಕೊಂಡ.

'ನಮ್ಮ ಮಕ್ಕಳು ಆಸೆಪಟ್ಟು ಹಣ್ಣು ತಿನ್ನೋದಿಲ್ಲ. ಜಂಕ್ ಫುಡ್, ಹಾಳುಮೂಳುಗೆ ಆಸೆಪಡ್ತಾರೆ. ಒಂದು ಹೋಳು ಮಾವು ತಿಂದರೆ ಹೆಚ್ಚು, ಎರಡು ಹಲಸಿನ ತೊಳೆ ತಿಂದರೆ ಜಾಸ್ತಿ' ಎಂದ ಶಂಕ್ರಿ.

'ಸರ್ಕಾರ ಮಾವಿನ ಹಣ್ಣು ಖರೀದಿಸಿ ಮಾವು ಭಾಗ್ಯ ತಂದು ಬಿಸಿಯೂಟದ ಜೊತೆ ಮಾವಿನ ಹಣ್ಣು ಕೊಟ್ಟು ಮಕ್ಕಳಲ್ಲಿ ಹಣ್ಣಿನ ರುಚಿ, ಅಭಿರುಚಿ ಬೆಳೆಸಬೇಕು'.

'ಮಕ್ಕಳು ತರಕಾರಿಯನ್ನೂ ತಿನ್ನೋದಿಲ್ಲಾರೀ... ತಿಳಿಸಾರು, ಬಿಳಿ ಅನ್ನ ತಿಂದರೆ ಸಾಕೆ? ಹಣ್ಣಿನ ಜೊತೆ ಹೆಚ್ಚೆಚ್ಚು ತರಕಾರಿ ತಿನ್ನೋದನ್ನೂ ಶಾಲೆಗಳು ಮಕ್ಕಳಿಗೆ ಕಲಿಸಬೇಕು' ಎಂದಳು ಸುಮಿ.

'ಮಾವಿನ ಹಣ್ಣನ್ನು ಮಕ್ಕಳಿಗೆ ತಿನ್ನಿಸಿ, ವಾಟೆಯನ್ನು ಮಕ್ಕಳ ಹೆಸರಿನಲ್ಲಿ ರಸ್ತೆ ಬದಿಯೋ, ಖಾಲಿ ಜಾಗದಲ್ಲೋ ಹೂಣಿರಿ. ಮೊಳೆತು ಗಿಡವಾಗಿ ಮಕ್ಕಳು ಬೆಳೆದಂತೆ ಮಾಮರವೂ ಬೆಳೆದು ಹೆಮ್ಮರವಾಗಲಿ...' ಎಂದು ಹೇಳಿ ಮಾರಣ್ಣ ಗಾಡಿ ತಳ್ಳಿಕೊಂಡು ಹೊರಟ.

ಸಂಗತ

ಶಿಕ್ಷಣ ವ್ಯವಸ್ಥೆ: ಕಲ್ಪನಾತೀತ ದುರವಸ್ಥೆ

ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಸರ್ಕಾರಿ ಶಾಲಾ– ಕಾಲೇಜುಗಳು ಅಲಕ್ಷ್ಯಕ್ಕೆ ಒಳಗಾಗಿವೆ. ಖಾಸಗಿ ಕಾಲೇಜುಗಳಿಗೆ ಶಿಕ್ಷಣ ವ್ಯಾಪಾರದ ಸರಕಾಗಿದೆ

● ಸಿ.ಎನ್. ರಾಮಚಂದ್ರನ್

ಸುಮಾರು ಐವತ್ತು ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ದುಡಿದಿರುವ ನನಗೆ ಭಾರತೀಯ ಶಿಕ್ಷಣ ಕ್ಷೇತ್ರದ ಬಗ್ಗೆ, ಮುಖ್ಯವಾಗಿ ಪ್ರವೇಶ ಹಾಗೂ ಪರೀಕ್ಷೆಗಳಲ್ಲಿ ಸ್ವಲ್ಪಮಟ್ಟಿಗೆ ಸದಾ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಒಂದಷ್ಟು ಗೊತ್ತಿತ್ತು: ಖಾಸಗಿ ಶಾಲಾ– ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊಡಬೇಕಾದ ಲಕ್ಷಗಟ್ಟಲೆ ಹಣ, ಪ್ರಶ್ನೆಪತ್ರಿಕೆಗಳ ಸೋರಿಕೆ, ತಮ್ಮ ಶಾಲೆಗೆ ಉತ್ತಮ ಫಲಿತಾಂಶ ಬರಲೆಂದು ಶಿಕ್ಷಕರು, ಪ್ರಾಂಶುಪಾಲರೇ ಪರೀಕ್ಷೆಗಳಲ್ಲಿ ನಕಲು ಮಾಡಲು ವಿದ್ಯಾರ್ಥಿಗಳನ್ನು ಉತ್ತೇಜಿಸುವುದು, ಅಂಕಪಟ್ಟಿಯ ತಿದ್ದುವಿಕೆ ಇತ್ಯಾದಿ.

ಆದರೆ, 'ಸರ್ಕಾರಿ ಶಾಲೆಗೆ 'ಖಾಸಗಿ' ಮಕ್ಕಳು' ಸುದ್ದಿಯನ್ನು (ಪ್ರ.ವಾ., ಜೂನ್ 21) ಓದಿದ ನಂತರ, ಈ ವ್ಯವಸ್ಥೆ ಬಗ್ಗೆ ನನಗೇನೂ ಗೊತ್ತಿಲ್ಲ ಎನಿಸಿತು. ಅಷ್ಟು ಕಲ್ಪನಾಶಕ್ತಿ ನನಗಿಲ್ಲ.

ಹತ್ತು ವಿದ್ಯಾರ್ಥಿನಿಯರು ಒಂದು ಖಾಸಗಿ ಶಾಲೆಯಲ್ಲಿ ಒಂಬತ್ತು ವರ್ಷ ಓದಿ ಹತ್ತನೇ ತರಗತಿಗೆ ಹೋದಾಗ ಮತ್ತು ಕಟ್ಟಬೇಕಾದ ಹಣವನ್ನು ಕಟ್ಟಿದ ನಂತರ ಅದೇ ಶಾಲೆಗೆ (ಪೋಷಕರಿಗೆ ತಿಳಿಸದೆ) ಹತ್ತಿರದಲ್ಲಿರುವ ಸರ್ಕಾರಿ ಶಾಲೆಗೆ ಅವರನ್ನು 'ಅನಾಥ' ಮಕ್ಕಳು ಎಂದು ಹೇಳಿ ಸೇರಿಸಿ, ವರ್ಷಾಂತ್ಯದ ಪರೀಕ್ಷೆಗೆ ಅವರನ್ನು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಎಂದು ಪ್ರವೇಶ ಪತ್ರ ಕೊಟ್ಟು, ಅವರು ಆ ಶಾಲೆಯಲ್ಲೇ ಪರೀಕ್ಷೆ ತೆಗೆದುಕೊಳ್ಳಲು ಹೇಳುತ್ತದೆ; ಮತ್ತು ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ಫೇಲಾದ ನಂತರ ಪೋಷಕರಿಗೆ ಆ 'ರಹಸ್ಯ' ಗೊತ್ತಾಗುತ್ತದೆ ಎಂಬ ಘಟನೆಯನ್ನು ಈಗಲೂ ನಂಬಲಾಗುತ್ತಿಲ್ಲ. ಇದು ಹೇಗೆ ಸಾಧ್ಯ? ಈ ಪ್ರಶ್ನೆ ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

ಖಾಸಗಿ ಶಾಲೆಯಲ್ಲಿ ಪ್ರತಿದಿನ ತರಗತಿಗಳಲ್ಲಿ ಹಾಜರಾತಿ ತೆಗೆದುಕೊಳ್ಳುವಾಗ ತಮ್ಮ ಶಾಲೆಯಲ್ಲಿ ಸೇರಿರದ ವಿದ್ಯಾರ್ಥಿನಿಯರ ಹಾಜರಾತಿಯನ್ನು ಹೇಗೆ ಗುರುತಿಸುತ್ತಿದ್ದರು? ಆಂತರಿಕ ಪರೀಕ್ಷೆಗಳು ನಡೆದಾಗ ಈ ಹತ್ತು ವಿದ್ಯಾರ್ಥಿನಿಯರ ಅಂಕಗಳನ್ನು ಎಲ್ಲಿ, ಹೇಗೆ ಗುರುತಿಸುತ್ತಿದ್ದರು? ಹಾಗೆಯೇ, ಇಡೀ ವರ್ಷ 10 ವಿದ್ಯಾರ್ಥಿನಿಯರು ತರಗತಿಗಳಿಗೆ ಬರದೇ ಇರುವುದು (ಆಗ ಅವರು 'ತಮ್ಮ' ಖಾಸಗಿ ಶಾಲೆಯಲ್ಲಿರುತ್ತಿದ್ದರು) ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರ ಗಮನಕ್ಕೆ ಬರಲಿಲ್ಲವೆ?

ಒಂದು ದಿನವೂ ತರಗತಿಗಳಿಗೆ ಬರದ ವಿದ್ಯಾರ್ಥಿನಿಯರಿಗೆ ಸರ್ಕಾರಿ ಶಾಲೆಯಿಂದ ಪ್ರವೇಶ ಪತ್ರ ಹೇಗೆ ಕೊಡಲಾಯಿತು? ಅಂದರೆ, ಈ ಅವ್ಯವಹಾರದಲ್ಲಿ ಖಾಸಗಿ ಶಾಲೆಯೊಡನೆ ಸರ್ಕಾರಿ ಶಾಲೆಯೂ ಶಾಮೀಲಾಗಿ ಇರಲೇಬೇಕು. ಈ ಅವ್ಯವಹಾರ ಅಥವಾ ಘೋರ ಅಪರಾಧ ಎಷ್ಟು ವರ್ಷಗಳಿಂದ ನಡೆಯುತ್ತಿದೆ? ಈ ಬಗೆಯ ಅಪರಾಧ ಕೃತ್ಯಗಳು ಇತರ ಶಾಲಾ– ಕಾಲೇಜುಗಳಲ್ಲಿಯೂ ನಡೆಯುತ್ತಿವೆಯೇ?



ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಆಮೂಲಾಗ್ರ ತನಿಖೆ ಮಾಡಬೇಕು. ಏಕೆಂದರೆ, ಈ ಕೃತ್ಯ ಪೋಷಕರು, ವಿದ್ಯಾರ್ಥಿನಿಯರು ಮತ್ತು ಸರ್ಕಾರ, ಇವೆಲ್ಲವುಗಳ ಮೇಲೆ ಎಸಗಿರುವ ಕ್ರೂರ ಅಪರಾಧ. ತನಿಖೆ ಆದಷ್ಟು ಬೇಗ ಆಗಿ, ಅಪರಾಧದಲ್ಲಿ ಭಾಗಿಯಾಗಿರುವ ಎಲ್ಲರಿಗೂ ಶಿಕ್ಷೆಯಾಗಬೇಕು. 'ಆದಷ್ಟು ಬೇಗ' ಎಂದು ಹೇಳುತ್ತಿರುವುದು ಏಕೆಂದರೆ, ಈಗಾಗಲೇ ಕೆಲವು ಸಾಮಾಜಿಕ ಜಾಲತಾಣಗಳು ಈ ಕೃತ್ಯಕ್ಕೆ 'ಕೋಮುವಾದ'ದ ಬಣ್ಣ ಬಳಿಯಲು ಪ್ರಯತ್ನಿಸುತ್ತಿವೆ. ತನಿಖೆ ತಡವಾದಷ್ಟೂ ಈ ವಿಷಯವು ರಾಜಕಾರಣಿಗಳ ಪರಸ್ಪರ ಕೆಸರು ಎರಚಾಟಕ್ಕೆ ಬಲಿಯಾಗುತ್ತದೆ.

ಎರಡು, ಮೂರು ದಶಕಗಳಿಂದ ಶಿಕ್ಷಣ ಇಲಾಖೆಯ ಬಗ್ಗೆ ಹಾಗೂ ಅದರ ನೀತಿ– ನಿಯಮಗಳ ಕುರಿತು ಒಂದು ಬಗೆಯ ದಿವ್ಯ ನಿರ್ಲಕ್ಷ್ಯವು ಖಾಸಗಿ ಶಾಲಾ–ಕಾಲೇಜುಗಳಲ್ಲಿ ಕಂಡುಬರುತ್ತಿದೆ.

ಸುಮಾರು ಹದಿನೈದು ವರ್ಷಗಳ ಹಿಂದೆ ಇಂತಹುದೇ ಅವ್ಯವಹಾರವು ಬೆಳಕಿಗೆ ಬಂದಿತ್ತು. ಸಾಗರದ ಒಂದು ಪ್ರತಿಷ್ಠಿತ ಕಾಲೇಜಿನಿಂದ ಫೆಬ್ರುವರಿಯಲ್ಲಿ ಹಾಜರಾತಿ ಕಮ್ಮಿ ಇದೆಯೆಂದು ಪರೀಕ್ಷೆಗೆ ಪ್ರವೇಶ ಪತ್ರ ದೊರೆಯದ ವಿದ್ಯಾರ್ಥಿಗಳು ಅಲ್ಲಿಯೇ ಹತ್ತಿರದಲ್ಲಿ ಇದ್ದ ಆನಂದಪುರದಲ್ಲಿ ಹೊಸದಾಗಿ ಆರಂಭಗೊಂಡಿದ್ದ ಖಾಸಗಿ ಕಾಲೇಜಿಗೆ (ವರ್ಷಾಂತ್ಯದಲ್ಲಿ) ಸೇರಿ, ಆ ಕಾಲೇಜಿನಿಂದ ಪ್ರವೇಶ ಪತ್ರ ಪಡೆದಿದ್ದರೂ ಪರೀಕ್ಷೆಗೆ ಹಾಜರಾಗಲು ತಮ್ಮ ಹಿಂದಿನ ಕಾಲೇಜಿಗೇ ಬರುತ್ತಿದ್ದರು.

ಒಂದು ವರ್ಷ ಪರೀಕ್ಷಕರಿಗೆ ಈ ವಿಷಯ ತಿಳಿದು, ಆನಂತರ ಆ ಅವ್ಯವಹಾರದ ಬಗ್ಗೆ ಪತ್ರಿಕೆಯೊಂದು ದೀರ್ಘ ಲೇಖನವನ್ನು ಪ್ರಕಟಿಸಿತು. ಅದರ ಪರಿಣಾಮ, ಖಾಸಗಿ ಕಾಲೇಜಿಗೆ ಕೊಟ್ಟಿದ್ದ ಮಾನ್ಯತೆಯನ್ನು ಕುವೆಂಪು ವಿಶ್ವವಿದ್ಯಾಲಯ ಹಿಂತೆಗೆದುಕೊಂಡಿತು ಹಾಗೂ ಆ ಹೊಸ ಖಾಸಗಿ ಕಾಲೇಜು ಮುಚ್ಚಿತು.

ಇಂತಹ ಪರಿಸ್ಥಿತಿಗೆ ಕಾರಣಗಳೇನು ಎಂದು ಚಿಂತಿಸುತ್ತಾ ಹೋದರೆ ಮತ್ತೊಂದು ಕಗ್ಗಂಟು ಎದುರಾಗುತ್ತದೆ. ಮುಖ್ಯ ಕಾರಣ, ಎಲ್ಲಾ ಸರ್ಕಾರಗಳೂ ಪಕ್ಷಾತೀತವಾಗಿ 1980ರಿಂದ ಶಿಕ್ಷಣ ಇಲಾಖೆಯನ್ನು ಗಂಭೀರವಾಗಿ ಪರಿಗಣಿಸದಿರುವುದು. ಸರ್ಕಾರಗಳ ನಿರ್ಲಕ್ಷ್ಯದಿಂದಾಗಿಯೇ ಸರ್ಕಾರಿ ಶಾಲಾ– ಕಾಲೇಜುಗಳು ಶಿಕ್ಷಕರಿಲ್ಲದೆ, ಅವಶ್ಯಕವಾದ ಅನುದಾನವಿಲ್ಲದೆ ಸೊರಗುತ್ತಿವೆ. ಖಾಸಗಿ ಶಾಲಾ– ಕಾಲೇಜುಗಳು ಶಿಕ್ಷಣವನ್ನು ಮಾರಾಟದ ವಸ್ತುವನ್ನಾಗಿಸುತ್ತವೆ. ಈ ಕಗ್ಗಂಟನ್ನು ಬಿಡಿಸಲು ಸಾಧ್ಯವೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನಿರಂಕುಶ ಪ್ರಭುತ್ವದ ನೆನಪು



ಬೆಂಗಳೂರಿನಲ್ಲಿ 1976ರ ನವೆಂಬರ್ 4ರಂದು ನಡೆದಿದ್ದ ಸಾರ್ವಜನಿಕ ಸಭೆಯಲ್ಲಿ ಇಂದಿರಾ ಗಾಂಧಿ ಭಾಗವಹಿಸಿದ್ದರು

1975ರಲ್ಲಿ ಇಂದಿರಾ ಗಾಂಧಿ ಅವರು ಹೇರಿದ್ದ ತುರ್ತು ಪರಿಸ್ಥಿತಿ ದೇಶದ ಇತಿಹಾಸದಲ್ಲಿ ಕಪ್ಪು ಚುಕ್ಕೆ. ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಕ್ತವಾಗಿ ಬದುಕುತ್ತಿದ್ದ ಜನರು ಒಮ್ಮೆಗೇ ಸರ್ವಾಧಿಕಾರಿ ಆಡಳಿತದ ಕರಾಳ ರೂಪ ಕಂಡು ಬೆಚ್ಚಿಬಿದ್ದಿದ್ದರು. ಅವರ ಹಕ್ಕುಗಳು, ಅಭಿವ್ಯಕ್ತಿ, ಮಾಧ್ಯಮಗಳು ಎಲ್ಲವೂ ದಮನಕ್ಕೊಳಗಾಗಿದ್ದವು. ತುರ್ತು ಪರಿಸ್ಥಿತಿಯು ಒಂದು ರಾಜಕೀಯ ವಿದ್ಯಮಾನವಾಗಿ, ನಿರಂಕುಶ ಪ್ರಭುತ್ವದ ನೆನಪಾಗಿ, ಒಂದು ಎಚ್ಚರವಾಗಿ ಜನರ ಸ್ಮೃತಿಯಲ್ಲಿ ದಾಖಲಾಗಿದೆ. 21 ತಿಂಗಳು ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿ ನಡೆದು ಬಂದ ಹಾದಿ ಇಲ್ಲಿದೆ



ಪ್ರಜಾವಾಣಿ

ರಾಷ್ಟ್ರಾದ್ಯಂತ ತುರ್ತುಸ್ಥಿತಿ ಘೋಷಣೆ

ಭಾರತ ರಕ್ಷಣಾ ಶಾಸನದ ಪೂರ್ಣ

ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಲಾದ ಸುದ್ದಿಯು 1975ರ ಜೂನ್ 27ರ 'ಪ್ರಜಾವಾಣಿ' ಸಂಚಿಕೆಯ ಮುಖಪುಟದಲ್ಲಿ ಪ್ರಕಟವಾಗಿತ್ತು

1971 ಮಾರ್ಚ್: ಮೂರನೇ ಎರಡು ಪ್ರಚಂಡ ಬಹುಮತದೊಂದಿಗೆ ಮತ್ತೆ ಪ್ರಧಾನಿಯಾಗಿ ಅಧಿಕಾರಕ್ಕೆ ಏರಿದ ಇಂದಿರಾ ಗಾಂಧಿ

1971 ಮಾರ್ಚ್: ಉತ್ತರ ಪ್ರದೇಶದ ರಾಯ್ ಬರೇಲಿ ಲೋಕಸಭಾ ಕ್ಷೇತ್ರದಲ್ಲಿ ಇಂದಿರಾ ಗಾಂಧಿ ಅವರ ವಿರುದ್ಧ ಸೋತಿದ್ದ ರಾಜ್ ನಾರಾಯಣ್ ಅವರಿಂದ ನ್ಯಾಯಾಲಯದಲ್ಲಿ ದಾವೆ. ಇಂದಿರಾ ಅವರು ಚುನಾವಣೆಯಲ್ಲಿ ಅವ್ಯವಹಾರ ಎಸಗಿ ಗೆದ್ದಿದ್ದಾರೆ, 1951ರ ಜನಪ್ರಾತಿನಿಧ್ಯ ಕಾಯ್ದೆ ಉಲ್ಲಂಘಿಸಿದ್ದಾರೆ ಎಂದು ಆರೋಪ

1973 ಏಪ್ರಿಲ್: ಸುಪ್ರೀಂ ಕೋರ್ಟ್‌ನ ಮೂವರು ಅತ್ಯಂತ ಹಿರಿಯ ನ್ಯಾಯಮೂರ್ತಿಗಳ ಹೆಸರನ್ನು ಕೈಬಿಟ್ಟು, ಎ.ಎನ್.ರಾಯ್ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಿದ ಇಂದಿರಾ

1974 ಜನವರಿ: ಭ್ರಷ್ಟಾಚಾರದ ಆರೋಪ ಎದುರಿಸುತ್ತಿದ್ದ ಗುಜರಾತ್ ಮುಖ್ಯಮಂತ್ರಿ ಚಿಮನ್ ಭಾಯಿ ಪಟೇಲ್ ಅವರ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ. ಚಿಮನ್ ಅವರ ಪದಚ್ಯುತಿಗೆ ಆಗ್ರಹಿಸಿ ನಡೆದ ನವನಿರ್ಮಾಣ ಆಂದೋಲನದ ಸಂದರ್ಭದಲ್ಲಿ ಸರ್ಕಾರಿ ಬಸ್, ಕಚೇರಿಗಳಿಗೆ ಬೆಂಕಿ


1974 ಮಾರ್ಚ್: ಮುಖ್ಯಮಂತ್ರಿ ಸ್ಥಾನ ತ್ಯಜಿಸುವಂತೆ ಚಿಮನ್ ಭಾಯಿ ಪಟೇಲ್ ಅವರಿಗೆ ಇಂದಿರಾ ಗಾಂಧಿ ಸೂಚನೆ

1974 ಏಪ್ರಿಲ್: ಬಿಹಾರ ರಾಜ್ಯ ಸರ್ಕಾರದ ಭ್ರಷ್ಟಾಚಾರ, ದುರಾಡಳಿತದ ವಿರುದ್ಧ ನಡೆಸಲಾಗುತ್ತಿದ್ದ ಹೋರಾಟದ ನಾಯಕತ್ವ ವಹಿಸುವಂತೆ ಛಾತ್ರ ಸಂಘರ್ಷ ಸಮಿತಿಯ ವಿದ್ಯಾರ್ಥಿ ನಾಯಕರಿಂದ ಜಯಪ್ರಕಾಶ್ ನಾರಾಯಣ್ (ಜೆ.ಪಿ) ಅವರಿಗೆ ಮನವಿ

1974 ಮೇ 8: ವೇತನ ಹೆಚ್ಚಳಕ್ಕೆ ಆಗ್ರಹಿಸಿ ದೇಶದಾದ್ಯಂತ ರೈಲ್ವೆ ಮುಷ್ಕರಕ್ಕೆ ಕರೆ ನೀಡಿದ ಜಾರ್ಜ್ ಫರ್ನಾಂಡಿಸ್. ಮೂರು ವಾರ ನಡೆದ ಮುಷ್ಕರ. ಹೋರಾಟವನ್ನು ಬಲವಂತವಾಗಿ ಹತ್ತಿಕ್ಕಿದ ಕೇಂದ್ರ ಸರ್ಕಾರ

1975 ಜನವರಿ 8: ಸರ್ಕಾರವನ್ನು ವಿರೋಧಿಸುತ್ತಿರುವವರನ್ನು ಬಂಧಿಸುವಂತೆ ಮತ್ತು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರುವಂತೆ ಇಂದಿರಾ ಗಾಂಧಿ ಅವರಿಗೆ ಪತ್ರ ಬರೆದ ಕಾಂಗ್ರೆಸ್ ನಾಯಕ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರ್ ರಾಯ್

1975 ಜೂನ್ 12: 1971ರ ಚುನಾವಣೆಯಲ್ಲಿ ರಾಯ್‌ಬರೇಲಿಯಲ್ಲಿ ಇಂದಿರಾ ವಿರುದ್ಧ ಸೋತಿದ್ದ ರಾಜ್ ನಾರಾಯಣ್ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ತೀರ್ಪು. ಇಂದಿರಾ ಅವರನ್ನು ಲೋಕಸಭಾ ಸದಸ್ಯತ್ವದಿಂದ ವಜಾಗೊಳಿಸಿದ ನ್ಯಾ. ಜಗಮೋಹನ್‌ಲಾಲ್ ಸಿನ್ಹಾ



ಪ್ರಜಾವಾಣಿ

ತುರ್ತು ಪರಿಸ್ಥಿತಿ

ತುರ್ತು ಪರಿಸ್ಥಿತಿ ಖಂಡಿಸಿ 'ಪ್ರಜಾವಾಣಿ'ಯು ಸಂಪಾದಕೀಯಕ್ಕೆ ಮೀಸಲಾಗಿದ್ದ ಜಾಗವನ್ನು ಖಾಲಿ ಬಿಟ್ಟು ಪ್ರತಿಭಟಿಸಿತ್ತು

1975 ಜೂನ್ 12: ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಜೆ.ಪಿ ಬೆಂಬಲಿತ, ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪರಿವಾರಕ್ಕೆ ಗೆಲುವು

1975 ಜೂನ್ 23: ವಿರೋಧ ಪಕ್ಷಗಳ ನಾಯಕರ ಬಂಧನಕ್ಕೆ ಸಿದ್ಧತೆ ಆರಂಭ

1975 ಜೂನ್ 24: ಇಂದಿರಾ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವುದಕ್ಕೆ ಭಾಗಶಃ ತಡೆಯಾಜ್ಞೆ ನೀಡಿದ ಸುಪ್ರೀಂ ಕೋರ್ಟ್. ಪ್ರಧಾನಿಯಾಗಿ ಮುಂದುವರಿಯಲು ಅವಕಾಶ

1975 ಜೂನ್ 25: ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರುವ ಸಂಬಂಧದ ಘೋಷಣೆಗೆ ಸಹಿ ಹಾಕಿದ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್

1975 ಜೂನ್ 26: ಜಯಪ್ರಕಾಶ್ ನಾರಾಯಣ್, ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಸೇರಿದಂತೆ ವಿರೋಧ ಪಕ್ಷಗಳ ಹಲವು ನಾಯಕರ ಬಂಧನ. ತುರ್ತು ಪರಿಸ್ಥಿತಿ ಹೇರಿಕೆ ಸುಗ್ರೀವಾಜ್ಞೆಯನ್ನು ಅನುಮೋದಿಸುವುದಕ್ಕಾಗಿ ಜೂನ್ 26ರ ಬೆಳಿಗ್ಗೆ 6 ಗಂಟೆಗೆ ಸಚಿವ ಸಂಪುಟ ಸಭೆ. ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಿಕೆ

1975 ಜೂನ್ 28: ಎರಡು ದಿನಗಳ ನಂತರ ದೆಹಲಿಯಲ್ಲಿ ಮುದ್ರಣ ಕಂಡ ದಿನಪತ್ರಿಕೆಗಳು. ಸೆನ್ಸಾರ್‌ಗೆ ಪತ್ರಕರ್ತರ ಖಂಡನೆ

1975 ಜೂನ್ 30: ಆಂತರಿಕ ಭದ್ರತಾ ನಿರ್ವಹಣೆ ಕಾಯ್ದೆಗೆ (ಮಿಸಾ) ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಜಾರಿ (ಇದರ ಅಡಿಯಲ್ಲಿ ವಶಕ್ಕೆ ಪಡೆದ ವ್ಯಕ್ತಿಗಳನ್ನು ಬಂಧಿಸಲು ಕಾರಣವನ್ನು ಬಹಿರಂಗಪಡಿಸಬೇಕಿಲ್ಲ)

1975 ಜುಲೈ 4: ಆರ್‌ಎಸ್‌ಎಸ್, ಆನಂದ ಮಾರ್ಗ, ಜಮಾತ್ ಎ-ಇಸ್ಲಾಮಿ, ನಕ್ಸಲರ ಮೇಲೆ ನಿಷೇಧ ಹೇರಿಕೆ

1975 ಜುಲೈ 21: ಸಂಸತ್ತಿನ ತುರ್ತು ಅಧಿವೇಶನ ಕರೆದು ತುರ್ತು ಪರಿಸ್ಥಿತಿ ಘೋಷಣೆಗೆ ಅನುಮೋದನೆ

1975 ಆಗಸ್ಟ್ 5: 1951ರ ಜನಪ್ರಾತಿನಿಧ್ಯ ಕಾಯ್ದೆಗೆ ಮಾಡಲಾದ ತಿದ್ದುಪಡಿಗಳನ್ನು ಪೂರ್ವಾನ್ವಯವಾಗುವಂತೆ ಅಂಗೀಕರಿಸಿದ ಸಂಸತ್ (ಕಾನೂನನ್ನು ಬದಲಿಸುವ ಮೂಲಕ ಇಂದಿರಾ ಗಾಂಧಿ ಅವರನ್ನು ಅನರ್ಹಗೊಳಿಸಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸುವುದನ್ನು ಕಾಂಗ್ರೆಸ್ ಬಯಸಿತ್ತು)



ತುರ್ತು ಪರಿಸ್ಥಿತಿ ಹೇರಿಕೆಯನ್ನು ಖಂಡಿಸಿ ಸಾಹಿತಿಗಳು, ಕಲಾವಿದರು ಮತ್ತು ಜನತಾ ಪಕ್ಷದ ಬೆಂಬಲಿಗರು ಬೆಂಗಳೂರಿನಲ್ಲಿ 1977ರ ಮಾರ್ಚ್ 14ರಂದು ಪ್ರತಿಭಟನಾ ಮೆರವಣಿಗೆ ನಡೆಸಿದ್ದರು



ಇಂದಿರಾ ಗಾಂಧಿ ಅವರ ನಿರ್ಧಾರದ ಪರವಾಗಿ ಅವರ ಬೆಂಬಲಿಗರು 1975ರ ಜುಲೈ 24ರಂದು ಬೆಂಗಳೂರಿನಲ್ಲಿ ಬೃಹತ್ ರ‍್ಯಾಲಿ ನಡೆಸಿದ್ದರು

1975 ನವೆಂಬರ್ 7: ರಾಯ್‌ಬರೇಲಿ ಕ್ಷೇತ್ರದಲ್ಲಿ ಇಂದಿರಾ ಆಯ್ಕೆಯನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್

1975 ನವೆಂಬರ್ 12: ಪೆರೋಲ್ ಮೇಲೆ ಜೆಪಿ ಬಿಡುಗಡೆ; ಆಸ್ಪತ್ರೆಗೆ ದಾಖಲು

1976 ಜನವರಿ: ಲೋಕಸಭಾ ಚುನಾವಣೆಯನ್ನು ಒಂದು ವರ್ಷ ಮುಂದೂಡಲು ಸಂಸತ್ತಿನಲ್ಲಿ ನಿರ್ಣಯ

1976 ಜನವರಿ 19: ಸರ್ಕಾರದ '20 ಅಂಶಗಳ ಕಾರ್ಯಕ್ರಮ' ಘೋಷಣೆ

1976 ಜನವರಿ 31: ತಮಿಳುನಾಡಿನಲ್ಲಿದ್ದ ಕರುಣಾನಿಧಿ ನೇತೃತ್ವದ ಡಿಎಂಕೆ ಸರ್ಕಾರವನ್ನು ವಜಾಗೊಳಿಸಿದ ರಾಷ್ಟ್ರಪತಿ

1976 ಮಾರ್ಚ್: ಗುಜರಾತ್‌ನ ಬಾಬು ಭಾಯಿ ಪಟೇಲ್ ನೇತೃತ್ವದ ಜನತಾ ಸರ್ಕಾರ ಪತನ

1976 ಅಕ್ಟೋಬರ್–ನವೆಂಬರ್: ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ಅಂಗೀಕರಿಸಿದ ಸಂಸತ್. ಇದು ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಪೂರ್ಣ ಅಧಿಕಾರ ನೀಡಿತಲ್ಲದೆ, ಸಂವಿಧಾನಕ್ಕೆ ಮಾಡಲಾದ ತಿದ್ದಪಡಿಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೂ ಅವಕಾಶ ಇಲ್ಲದಂತೆ ಮಾಡಿತು

1976 ನವೆಂಬರ್ 5: ಲೋಕಸಭೆಯ ಅವಧಿಯನ್ನು ಮತ್ತೆ ಒಂದು ವರ್ಷ ವಿಸ್ತರಿಸುವುದಕ್ಕೆ ನಿರ್ಣಯ ಅಂಗೀಕಾರ

1976 ನವೆಂಬರ್: ಗುವಾಹಟಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಸಂಜಯ್ ಗಾಂಧಿ ಅವರು ಇಂದಿರಾ ಗಾಂಧಿ ಅವರ ಉತ್ತರಾಧಿಕಾರಿಯಾಗಿ ಘೋಷಣೆ

1976 ಡಿಸೆಂಬರ್ 4: ವಿರೋಧ ಪಕ್ಷ ನಾಯಕರಾದ ಚರಣ್ ಸಿಂಗ್ ಮತ್ತು ಬಿಜು ಪಟ್ನಾಯಕ್ ಅವರು ಗೃಹ ವ್ಯವಹಾರಗಳ ರಾಜ್ಯ ಖಾತೆ ಸಚಿವ ಓಂ ಮೆಹ್ತಾ ಅವರನ್ನು ಭೇಟಿ ಮಾಡಿ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಚರ್ಚೆ

1977 ಜನವರಿ 1: ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿರುವ ಅಂಶಗಳನ್ನು ಉಲ್ಲೇಖಿಸಿ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಪತ್ರ ಬರೆದ ಬಿಜು ಪಟ್ನಾಯಕ್

1977 ಜನವರಿ: ವಿರೋಧ ಪಕ್ಷದ ನಾಯಕ ಅಶೋಕ ಮೆಹ್ತಾ ಅವರ ಪತ್ರಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಇಂದಿರಾ. ವಿರೋಧ ಪಕ್ಷಗಳು ಕೆಲವು ಷರತ್ತುಗಳನ್ನು ಒಪ್ಪಿಕೊಂಡರೆ ಸಂಸದೀಯ ಪ್ರಜಾಪ್ರಭುತ್ವವನ್ನು ಪುನರ್ ಸ್ಥಾಪಿಸಬಹುದು ಎಂದು ಪ್ರತಿಪಾದನೆ

1977 ಜನವರಿ 18: 1977ರ ಮಾರ್ಚ್‌ನಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ ಎಂದು ಘೋಷಿಸಿದ ಇಂದಿರಾ

1977 ಜನವರಿ 18: ಮೊರಾರ್ಜಿ ದೇಸಾಯಿ, ಅಡ್ವಾಣಿ ಜೈಲಿನಿಂದ ಬಿಡುಗಡೆ

1977 ಜನವರಿ 20: ಜನತಾ ಪಕ್ಷ ಸ್ಥಾಪನೆ

1977 ಮಾರ್ಚ್ 16–20: ಸಾರ್ವತ್ರಿಕ ಚುನಾವಣೆ


1977 ಮಾರ್ಚ್ 20: ರಾಯ್‌ಬರೇಲಿಯಲ್ಲಿ ಇಂದಿರಾ ಗಾಂಧಿಗೆ, ಅಮೇಠಿಯಲ್ಲಿ ಸಂಜಯ್ ಗಾಂಧಿಗೆ ಸೋಲು. ಜನತಾ ಪಕ್ಷ ನೇತೃತ್ವದ ಮೈತ್ರಿಕೂಟಕ್ಕೆ ಬಹುಮತ

1977 ಮಾರ್ಚ್ 21: ತುರ್ತು ಪರಿಸ್ಥಿತಿ ವಾಪಸ್

1977 ಮಾರ್ಚ್ 24: ದೇಶದ ಐದನೇ ಪ್ರಧಾನಿಯಾಗಿ ಮೊರಾರ್ಜಿ ದೇಸಾಯಿ ಪ್ರಮಾಣ ವಚನ ಸ್ವೀಕಾರ

ತುರ್ತು ಪರಿಸ್ಥಿತಿ ಸವಾಲು ಗೆದ್ದ ಪ್ರಜಾಪ್ರಭುತ್ವ

• ಬಸವರಾಜ ಬೊಮ್ಮಾಯಿ



1975ರ ಜೂನ್ 25ರಂದು ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದಲ್ಲಿ ಹೇರಿದ್ದ ಆಂತರಿಕ ತುರ್ತು ಪರಿಸ್ಥಿತಿಗೆ ಈಗ 50 ವರ್ಷ. ತುರ್ತು ಪರಿಸ್ಥಿತಿಯು 1947ರ ಸ್ವಾತಂತ್ರ್ಯಾನಂತರ ಭಾರತದ ಪ್ರಜಾಪ್ರಭುತ್ವಕ್ಕೆ ಇಂದಿರಾ ಗಾಂಧಿಯವರು ತಂದು ಒಡ್ಡಿದ ಅತ್ಯಂತ ದೊಡ್ಡ ಸವಾಲು. ರಾಜಕೀಯ ಕಾರಣಕ್ಕೆ ಜಾರಿಗೊಳಿಸಿದ ತುರ್ತು ಪರಿಸ್ಥಿತಿಯಿಂದಾಗಿ ಇಡೀ ದೇಶದ ಕಾನೂನು ಸುವ್ಯವಸ್ಥೆ ಹದಗೆಟ್ಟಿತ್ತು. ಭಾರತದ ಸುರಕ್ಷತೆಗೆ ಧಕ್ಕೆ ತರುವಂತಹ ದೇಶದ್ರೋಹದ ಚಟುವಟಿಕೆಗಳು, ಹಿಂಸಾಚಾರಗಳು ನಡೆದಾಗ ಮತ್ತು ದೇಶದ್ರೋಹ ಎಸಗಲು ನಿರಂತರ ಪ್ರಚೋದನೆ ನಡೆದ ಆಂತರಿಕ ತುರ್ತು ಪರಿಸ್ಥಿತಿ ಹೇರಲು ಸಂವಿಧಾನದ 352ನೇ ವಿಧಿಯು ಅವಕಾಶ ಕಲ್ಪಿಸಿದೆ. ಆದರೆ, ಮೇಲಿನ ಯಾವುದೇ ಅಂಶಗಳು ಇಲ್ಲದಿದ್ದರೂ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿನಿಂದ ತಮ್ಮ ಪ್ರಧಾನಿ ಸ್ಥಾನಕ್ಕೆ ಕುತ್ತು ಬರುತ್ತದೆ ಎಂಬ ಕಾರಣಕ್ಕೆ, ತಮ್ಮ ಕುರ್ಚಿ ಉಳಿಸಿಕೊಳ್ಳುವ ಉದ್ದೇಶದಿಂದ ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿ ಹೇರಿದ್ದರು.

ಆ ದಿನಗಳಲ್ಲಿ ನಾವೆಲ್ಲಾ ಕಾಲೇಜು ವಿದ್ಯಾರ್ಥಿಗಳು. ತುರ್ತು ಪರಿಸ್ಥಿತಿ ಹೇರಿಕೆಯಿಂದ ದೇಶದ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕಲಾಯಿತು. ಜನರಿಗೆ ಸ್ವಾತಂತ್ರ್ಯ ಎನ್ನುವುದೇ ಇರಲಿಲ್ಲ. ಯಾರೂ ಸರ್ಕಾರದ ವಿರುದ್ಧ ಮಾತನಾಡುವಂತಿರಲಿಲ್ಲ. ಮಾಧ್ಯಮಗಳನ್ನೂ ಸೆನ್ಸಾರ್‌ಗೆ ಒಳಪಡಿಸಲಾಗಿತ್ತು. ಇಂದಿರಾ ಕೈಗೊಂಡ ಕ್ರಮದ ವಿರುದ್ಧ ಮಾತನಾಡಿದವರನ್ನು ಬಂಧನಕ್ಕೊಳಪಡಿಸಲಾಗುತ್ತಿತ್ತು. ನಮ್ಮಂತವರನ್ನು ಬಂಧಿಸಲು ಪ್ರಯತ್ನ ನಡೆಯಿತು. ಆದರೆ, ಅವರು ಭೂಗತರಾಗಿ ತುರ್ತು ಪರಿಸ್ಥಿತಿ ಹೇರಿಕೆ ವಿರುದ್ಧ ಎಲ್ಲ ರೀತಿಯ ಹೋರಾಟಗಳಿಗೆ ಬೆಂಬಲ ಕೊಡಲು ಪ್ರಾರಂಭಿಸಿದರು.

ಹುಬ್ಬಳ್ಳಿಯಲ್ಲಿ ಇದರ ಬಗ್ಗೆ ಯಾವುದೇ ಪ್ರಭಾವ ಬೀಳದಿದ್ದರೂ, ನಮ್ಮ ಹಕ್ಕು ಮೊಟಕುಗೊಳಿಸುತ್ತಿದ್ದರೂ ಎಲ್ಲರೂ ಸುಮ್ಮನಿದ್ದಾರೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿತ್ತು. ನಾನು ಮತ್ತು ನನ್ನ ಗೆಳೆಯ, ಎಬಿವಿಪಿಯಲ್ಲಿ ಸಕ್ರಿಯರಾಗಿದ್ದ ಅನಂತಕುಮಾರ ಈ ಬಗ್ಗೆ ಹಲವಾರು ಬಾರಿ ಚಿಂತನೆ ಮಾಡಿ ನಾವಿದ್ದ ವಿಜ್ಞಾನ ಕಾಲೇಜು, ಕಲಾ, ವಾಣಿಜ್ಯ ಮತ್ತು ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಲು ತೀರ್ಮಾನಿಸಿದೆವು. ಅದಕ್ಕೆ ಬೇಕಾದ ರೂಪುರೇಷೆ ಸಿದ್ಧಪಡಿಸಿದೆವು. ಆದರೆ, ಅದರ ಬಗ್ಗೆ ಮಾತನಾಡುವವರಿಗೆ ಪೊಲೀಸರ ಭಯ ಇತ್ತು.


ಎಂಜಿನಿಯರಿಂಗ್ ಕಾಲೇಜಿನ ಹೋರಾಟ ಪರವಾದ ಬ್ಯಾನರ್ ತಲೆಗೆ, ಎಲ್ಲ ವಿದ್ಯಾರ್ಥಿಗಳು ಪಿಸಿ ಜಾಬಿನ್ ಕಾಲೇಜು ಬಸ್ ತಂಗುದಾಣದ ಬಳಿ ಸೇರುತ್ತ ಹೋರಾಟ ಪ್ರಾರಂಭಿಸಿದೆವು. ಇದರ ಬಗ್ಗೆ ಮಾಹಿತಿ ಇದ್ದ ಕಾರಣ ಅಲ್ಲಿ ಪೊಲೀಸರು ಇದ್ದರು. ಪೊಲೀಸರು ಬಂದು ನಿಯಂತ್ರಣ ಮಾಡುವ ಸಂದರ್ಭದಲ್ಲಿಯೇ ಪೊಲೀಸರ ಜೊತೆ ನಾನು ಮತ್ತು ಅನಂತಕುಮಾರ ವಾಗ್ವಾದಕ್ಕೆ ಇಳಿದೆವು. ಇದೇ ಸಂದರ್ಭದಲ್ಲಿ ಆಕ್ರೋಶಗೊಂಡ ಪೊಲೀಸರು ಲಾಠಿ ಚಾರ್ಜ್ ಮಾಡಿ ನಮ್ಮನ್ನು ಬಂಧಿಸುವ ಪ್ರಯತ್ನ ಮಾಡಿದರು. ನಾವು ಕಾಲೇಜು ಒಳಗೆ ಓಡಿ ಹೋದೆವು. ನಮ್ಮ ಕೆಲವು ಮಿತ್ರರು ಪೊಲೀಸರ ಕೈಗೆ ಸಿಕ್ಕಿಬಿದ್ದರು. ಅವರನ್ನು ಬಿಡಿಸಲು ಹೋದ ಅನಂತ ಕುಮಾರ ಬಂಧನಕ್ಕೆ ಒಳಗಾದರು. ಆ ಸಂದರ್ಭದಲ್ಲಿ ನಮಗೆಲ್ಲ ಜಯಪ್ರಕಾಶ್ ನಾರಾಯಣ ಅವರ ಭಾಷಣಗಳೇ ಸ್ಫೂರ್ತಿಯಾಗಿದ್ದವು. ಅವರ ಸಂಪೂರ್ಣ ಕ್ರಾಂತಿ ವಿಚಾರಕ್ಕೆ ಮನಸೋತು ನಾವೆಲ್ಲ ಚಳವಳಿಗೆ ಧುಮುಕಿದ್ದೆವು. ಬಹುತೇಕ ಪೊಲೀಸರ ಬಂಧನದ ಭೀತಿಯಲ್ಲಿ ಓಡಾಡುವ ಸ್ಥಿತಿ ನಿರ್ಮಾಣವಾಗಿತ್ತು. ಇಡೀ ದೇಶದಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ದೊಡ್ಡ ಕ್ರಾಂತಿ ಪ್ರಾರಂಭವಾಗಿ ಪೊಲೀಸರು ಕೂಡ ಸರ್ಕಾರಕ್ಕೆ ವಿರುದ್ಧವಾಗಿರುವ ಮನಸ್ಥಿತಿಯನ್ನು ತೋರಿಸಲು ಪ್ರಾರಂಭಿಸಿದರು. ಈ ವೇಳೆ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ವಾಪಸ್ ಪಡೆದರು.

ದೇಶದ ಹಲವು ಮುಖಂಡರು, ವಿರೋಧ ಪಕ್ಷದ ನಾಯಕರನ್ನು ಜೈಲಿಗೆ ಕಳುಹಿಸಿ ಜನರ ಧ್ವನಿಯನ್ನು ಹತ್ತಿಕ್ಕಿ, ಪ್ರಧಾನಿ ಸ್ಥಾನದಲ್ಲಿ ಮುಂದುವರಿದು ಈ ದೇಶವನ್ನು ಆಳಲು ಎಂದು ತಿಳಿದುಕೊಂಡಂತಹ ಇಂದಿರಾ ಗಾಂಧಿ ಅವರಿಗೆ ಇದ್ದ ಭ್ರಮೆ ಹುಸಿಯಾಯಿತು. ವ್ಯಕ್ತಿ ಮತ್ತು ಸಂಘಟನೆಗಿಂತ ನಮ್ಮ ಪ್ರಜಾಪ್ರಭುತ್ವ, ಸಂವಿಧಾನ ಬಹಳ ಗಟ್ಟಿ ಇದೆ ಎಂಬುದನ್ನು ತುರ್ತು ಪರಿಸ್ಥಿತಿ ತೋರಿಸಿಕೊಟ್ಟಿತು. ದುರಾಡಳಿತ, ಸ್ವಜನಪಕ್ಷಪಾತ, ದೌರ್ಜನ್ಯ, ಹಿಂಸೆ, ಭ್ರಷ್ಟಾಚಾರದಿಂದ ಭಾರತದಂತಹ ದೇಶದ ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬುದನ್ನು ಇದು ತೋರಿಸಿಕೊಟ್ಟಿತು. ಜನರಿಂದ, ಜನರಿಗಾಗಿ, ಜನರೇ ಆಡಳಿತ ನಡೆಸುವ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗೆಲುವು ಸಿಕ್ಕಿತು. ಸ್ವತಂತ್ರ ಭಾರತದ ಜೊತೆಗೆ ಪ್ರಜಾಸತ್ತಾತ್ಮಕ ಭಾರತ ಕೂಡ ಜನನಿದೆ ಎನ್ನುವುದನ್ನು ಎಲ್ಲ ಆಡಳಿತಗಾರರು ಮನಗಾಣಬೇಕು.

ಜನಸ್ತೋಮವು ಉತ್ತುಂಗದಲ್ಲಿದ್ದ ಇಂದಿರಾ ಅವರಿಗೆ ಪ್ರಜಾಪ್ರಭುತ್ವ ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಗೊತ್ತಾಗಲು 20 ತಿಂಗಳು ಬೇಕಾಯಿತು. ತುರ್ತು ಪರಿಸ್ಥಿತಿಯಿಂದ ಉದ್ಭವಿಸಿದ ಪ್ರಜಾಪ್ರಭುತ್ವದ ಯುದ್ಧವು ಜನಶಕ್ತಿ ಮತ್ತು ರಾಜಶಕ್ತಿಯ ನಡುವೆ ನಡೆದ ಸಂಘರ್ಷವಾಗಿತ್ತು. ಇದರಲ್ಲಿ ಜನಶಕ್ತಿಗೆ ಗೆಲುವಾಗಿ ಪ್ರಜಾಪ್ರಭುತ್ವವನ್ನು ಆಳವಾಗಿ ಗಟ್ಟಿಯಾಗಿ ಬೇರೂರಿರುವ ಭವ್ಯ ಭಾರತದ ನಿರ್ಮಾಣಕ್ಕೆ ಅಡಿಪಾಯವಾಯಿತು. ಈ ಪ್ರಜಾಪ್ರಭುತ್ವದ ಯುದ್ಧದಲ್ಲಿ ಜಯಗಳಿಸಿದ ಜನತೆಯ ರಾಷ್ಟ್ರ ಪ್ರಜ್ಞೆ ಇಂದಿಗೂ ಜೀವಂತವಾಗಿದೆ. ನ್ಯಾಯಸಮ್ಮತ ಮತ್ತು ಸ್ವತಂತ್ರವಾಗಿರುವ ಪ್ರಜಾಪ್ರಭುತ್ವ ಈ ದೇಶದ ಹಿರಿಮೆ.

ಲೇಖಕ: ಸಂಸದ, ಮಾಜಿ ಮುಖ್ಯಮಂತ್ರಿ

ಸಂವಿಧಾನ ಏನು ಹೇಳುತ್ತದೆ?



ದೇಶದ ರಕ್ಷಣೆ, ಸಮಗ್ರತೆಯನ್ನು ರಕ್ಷಿಸುವ ಸಲುವಾಗಿ ಭಾರತೀಯ ಸಂವಿಧಾನವು ತುರ್ತು ಪರಿಸ್ಥಿತಿ ಘೋಷಿಸುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡುತ್ತದೆ. ಸಂವಿಧಾನದ 352ನೇ ವಿಧಿಯು ರಾಷ್ಟ್ರೀಯ ತುರ್ತು ಪರಿಸ್ಥಿತಿಯ ನಿಬಂಧನೆಯನ್ನು ಒಳಗೊಂಡಿದ್ದರೆ, 356ನೇ ವಿಧಿಯು ಸಾಂವಿಧಾನಿಕ ಅಥವಾ ರಾಜ್ಯ ತುರ್ತು ಪರಿಸ್ಥಿತಿ, 360ನೇ ವಿಧಿಯು ಆರ್ಥಿಕ ತುರ್ತು ಪರಿಸ್ಥಿತಿಯ ನಿಬಂಧನೆ ಒಳಗೊಂಡಿದೆ.

ಇಡೀ ದೇಶದಲ್ಲಿ ಅಥವಾ ದೇಶದ ಯಾವುದೇ ಒಂದು ಭಾಗದಲ್ಲಿ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಸಶಸ್ತ್ರ ದಂಗೆಗಳು ಉಂಟಾದಾಗ 352ನೇ ವಿಧಿಯ ಪ್ರಕಾರ ರಾಷ್ಟ್ರಪತಿಯು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದಾಗಿದೆ. ಈ ಮೂರು ಸಂದರ್ಭಗಳಲ್ಲಿ ದೇಶದ ಭದ್ರತೆಗೆ ಅಪಾಯ ಸಂಭವಿಸಬಹುದು ಎಂದು ಭಾವಿಸಿದರೆ, ಯುದ್ಧ, ಬಾಹ್ಯ ಆಕ್ರಮಣ ಅಥವಾ ಸಶಸ್ತ್ರ ದಂಗೆಗಳು ಸಂಭವಿಸುವುದಕ್ಕಿಂತ ಮುಂಚೆಯೇ ರಾಷ್ಟ್ರಪತಿಯು ತುರ್ತು ಪರಿಸ್ಥಿತಿ ಘೋಷಿಸಬಹುದು. ತುರ್ತುಪರಿಸ್ಥಿತಿಯನ್ನು ರದ್ದುಪಡಿಸುವ ಘೋಷಣೆ ಹೊರಡಿಸುವ ಅಧಿಕಾರವೂ ರಾಷ್ಟ್ರಪತಿಯವರದ್ದೇ ಆಗಿದೆ. ಆದರೆ, ಪ್ರಧಾನಿಯನ್ನು ಒಳಗೊಂಡ ಕೇಂದ್ರ ಸಚಿವ ಸಂಪುಟವು ಈ ಬಗ್ಗೆ ನಿರ್ಧಾರ ತಳೆದು, ಅದನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರೆ ಮಾತ್ರವೇ ರಾಷ್ಟ್ರಪತಿಯು ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಘೋಷಣೆ ಮಾಡಬಹುದಾಗಿದೆ. ಆಗ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಅಮಾನತಿನಲ್ಲಿಡಲಾಗುತ್ತದೆ. ದೇಶದಲ್ಲಿ ಇದುವರೆಗೆ ಮೂರು ಬಾರಿ (1962ರ ಭಾರತ–ಚೀನಾ ಯುದ್ಧದ ಸಂದರ್ಭದಲ್ಲಿ ಮತ್ತು 1971ರ ಭಾರತ–ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಮತ್ತು 1975ರಲ್ಲಿ) ರಾಷ್ಟ್ರೀಯ ತುರ್ತು ಪರಿಸ್ಥಿತಿ ಹೇರಲಾಗಿದೆ.

356ನೇ ವಿಧಿಯ ಪ್ರಕಾರ, ಯಾವುದೇ ರಾಜ್ಯ ಸರ್ಕಾರ ಸಂವಿಧಾನದ ನಿಯಮಗಳಿಗೆ ಅನುಸಾರವಾಗಿ ಆಡಳಿತ ನಡೆಸಲು ವಿಫಲವಾಗಿದೆ ಎಂದು ರಾಜ್ಯಪಾಲರು ವರದಿ ಸಲ್ಲಿಸಿದರೆ, ಅದರ ಆಧಾರದ ಮೇಲೆ ರಾಷ್ಟ್ರಪತಿಯು ರಾಜ್ಯ ಸರ್ಕಾರವನ್ನು ವಜಾಗೊಳಿಸಿ, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಮೂಲಕ ತುರ್ತು ಪರಿಸ್ಥಿತಿ ಘೋಷಣೆ ಮಾಡಬಹುದು. ದೇಶದ ಅನೇಕ ರಾಜ್ಯಗಳಲ್ಲಿ ಅನೇಕ ಬಾರಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಾಗಿದೆ.

360ನೇ ವಿಧಿಯ ಅನ್ವಯ ರಾಷ್ಟ್ರಪತಿಯು ದೇಶದಲ್ಲಿ ಆರ್ಥಿಕ ತುರ್ತುಪರಿಸ್ಥಿತಿಯನ್ನೂ ಘೋಷಿಸಬಹುದಾಗಿದೆ. ರಾಷ್ಟ್ರಪತಿಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನೌಕರರಿಗೆ (ನ್ಯಾಯಮೂರ್ತಿಗಳೂ ಸೇರಿದಂತೆ) ಸಂಬಳ ಮತ್ತು ಭತ್ಯೆಗಳನ್ನು ಕಡಿತಗೊಳಿಸುವಂತೆ ನಿರ್ದೇಶನ ನೀಡುತ್ತಾರೆ. ದೇಶವು ತೀವ್ರ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದರೆ, ಇದನ್ನು ಜಾರಿ ಮಾಡಬಹುದು. ದೇಶದಲ್ಲಿ ಇದುವರೆಗೆ ಒಮ್ಮೆಯೂ ಆರ್ಥಿಕ ತುರ್ತುಪರಿಸ್ಥಿತಿ ಜಾರಿಯಾಗಿಲ್ಲ.

ಆಧಾರ: ಕೂಮಿ ಕಪೂರ್ ಅವರ 'ದಿ ಎಮರ್ಜೆನ್ಸಿ ಎ ಪರ್ಸನಲ್ ಹಿಸ್ಟರಿ' ಕೃತಿ

ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

ನುಡಿ ಬೆಳಗು

ಪಿ.ಚಂದ್ರಿಕಾ




ವ್ಯರ್ಥ ಪ್ರಯತ್ನ

ಹೊಸ ವಿನ್ಯಾಸಗಳಿರುವ ಬಟ್ಟೆಯ ದೊಡ್ಡ ಅಂಗಡಿಗೆ ಯುವತಿಯೊಬ್ಬಳು ಬರುತ್ತಾಳೆ. ಅಲ್ಲಿ ತುಂಬಿದ್ದ ಜನರು ಬಟ್ಟೆಗಳ ರಾಶಿಯಲ್ಲಿ ತಮ್ಮ ಮೈಮಾಟಕ್ಕೆ, ತಮ್ಮ ವ್ಯಕ್ತಿತ್ವಕ್ಕೆ ಹೊಂದುವ ಬಟ್ಟೆಗಳ ಹುಡುಕಾಟದಲ್ಲಿದ್ದರು. ಹುಡುಗಿ ತುಂಬು ಖುಷಿಯಲ್ಲಿ ತನಗೆ ಬೇಕಾದ ಬಟ್ಟೆಗಳನ್ನು ಹುಡುಕಿ ತೆಗೆದುಕೊಂಡು ಹಣ ಪಾವತಿಸಲು ಬರುತ್ತಾಳೆ. ಅಂಗಡಿ ಮಾಲೀಕನ ಹಿಂಭಾಗದಲ್ಲಿ ಗಾಜಿನ ಬೀರುವಿನಲ್ಲಿ ಅತ್ಯಂತ ಜತನದಿಂದ ಇಟ್ಟಿದ್ದ ಉಡುಪೊಂದು ಅವಳನ್ನು ಬಹುವಾಗಿ ಸೆಳೆಯುತ್ತದೆ. ಅದನ್ನು ನೋಡಿದ ತಕ್ಷಣ ಹೆಚ್ಚು ಬೆಲೆಯುಳ್ಳದ್ದು ಎಂದು ಗೊತ್ತಾಗುವಂತಿತ್ತು. 'ಏನದು, ಅದನ್ನು ಮಾತ್ರ ಯಾಕೆ ಅಲ್ಲಿಟ್ಟಿದ್ದೀರಿ' ಎಂದು ಅವನನ್ನು ಪ್ರಶ್ನಿಸುತ್ತಾಳೆ. 'ಅದು ನನ್ನ ಕಲ್ಪನೆಯ ಸುಂದರಿಗಾಗಿ ಮಾಡಿಟ್ಟಿರುವುದು. ಕಾಯುತ್ತಿದ್ದೇನೆ; ಇದುವರೆಗೂ ಇದಕ್ಕೆ ಹೊಂದಿಕೆಯಾಗುವ ಒಬ್ಬ ಹುಡುಗಿಯೂ ಸಿಕ್ಕಿಲ್ಲ' ಎನ್ನುತ್ತಾನೆ. ಆಗ ಹುಡುಗಿ, 'ಪ್ರಯತ್ನ ಮಾಡುವೆ- ನನಗೆ ಸರಿಹೊಂದಿದರೆ ಎಷ್ಟು ಬೆಲೆ ಹೇಳುತ್ತೀಯೋ ಅಷ್ಟನ್ನು ಕೊಡುವೆ' ಎಂದಳು. ಮಾಲೀಕ ಹೇಳಿದ, 'ನನಗೆ ಇದನ್ನು ಮಾಡಲಿಕ್ಕೆ ಎಷ್ಟು ಖರ್ಚಾಗಿದೆ ಅದರ ಅರ್ಧ ಬೆಲೆಗೆ ಕೊಡುವೆ'.

ಉಡುಪು ಆ ಹುಡುಗಿಗೆ ಸರಿಹೊಂದಲಿಲ್ಲ. ಅದರ ಬಗ್ಗೆ ವಿಪರೀತ ಆಸೆ ಇಟ್ಟುಕೊಂಡಿದ್ದ ಅವಳು 'ಇನ್ನೊಂದು ಇಂಥದ್ದೇ ಉಡುಪು ಮಾಡಿಕೊಡಲಿಕ್ಕಾಗುತ್ತದೆಯೇ, ನನಗಿದು ತುಂಬಾ ಇಷ್ಟವಾಗಿದೆ' ಎನ್ನುತ್ತಾಳೆ. 'ಇದನ್ನು ಹೊಲಿಯಲಿಕ್ಕೆ ನಾನು ಏಳೆಂಟು ವರ್ಷಗಳನ್ನೇ ತೆಗೆದುಕೊಂಡಿದ್ದೇನೆ. ನನ್ನ ಶ್ರಮ, ಕಲ್ಪನೆ ಎಲ್ಲವನ್ನೂ ಸೇರಿಸಿ ಅದ್ಭುತ ಎನ್ನುವ ಹಾಗೆ ಮಾಡಿದ್ದೇನೆ. ಇನ್ನೊಂದು ಸಲ ಇದನ್ನು ಮಾಡಲಿಕ್ಕೂ ಆಗಲ್ಲ, ಆ ತಾಳ್ಮೆಯೂ ನನಗೆ ಈಗಿಲ್ಲ' ಎನ್ನುತ್ತಾನೆ. ಯುವತಿ ವಿಪರೀತ ಕೋಪದಿಂದ 'ಅಲ್ಲಯ್ಯ, ನೀನು ಎಂಥ ಮೂರ್ಖ. ಇಂಥಾ ಸುಂದರ ಉಡುಪನ್ನು ಹೊಲಿಯುವ ನೈಪುಣ್ಯ ಇರುವವನು ವ್ಯಕ್ತಿಗೆ ಸರಿ ಹೊಂದುವಂಥ ಉಡುಪು ಹೊಲಿಯಬೇಕೆಂದು ತಿಳಿಯಲಿಲ್ಲವೇ? ಅಷ್ಟು ಸಾಮಾನ್ಯ ಜ್ಞಾನ ಇಲ್ಲದಿದ್ದರೆ ಮಾಡಿದ ಕೆಲಸ ವ್ಯರ್ಥವಲ್ಲವೆ?' ಎಂದಳು. ಆಗ ಮಾಲೀಕ ಹೇಳಿದ, 'ನನಗೆ ಇದು ಗೊತ್ತಿಲ್ಲವೆಂದಲ್ಲ. ನನಗೆ ಸೃಷ್ಟಿಸುವ ಶಕ್ತಿ ಇದೆ. ಇಂಥಾ ಇನ್ನೊಂದು ಉಡುಪನ್ನು ಯಾರೂ ಸೃಷ್ಟಿಸಲಾರರು ಎನ್ನುವ ಹೆಮ್ಮೆಯೂ ಇದೆ. ನಾನು ನನ್ನ ಕೆಲಸ ಮಾಡಿ ಮುಗಿಸಿದ್ದೇನೆ. ನಿನಗೆ ಈ ಬಟ್ಟೆ ಆಗದೇ ಇದ್ದದ್ದು ನಿನ್ನದೂ ತಪ್ಪಲ್ಲ- ನಿನಗೆ ಆಗದಂತೆ ಹೊಲಿದ ನನ್ನದೂ ಅಲ್ಲ. ಒಟ್ಟಿನಲ್ಲಿ ಇದು ಮತ್ತೆ ನನ್ನಲ್ಲೇ ಉಳಿಯಿತು' ಎಂದು ಆ ಬಟ್ಟೆಯನ್ನು ಮತ್ತೆ ಒಳಗಿಟ್ಟ.

ಹುಡುಗಿ ಗೊಣಗಿದಳು: 'ವ್ಯಕ್ತಿಗೆ ಒಪ್ಪುವ ಬಟ್ಟೆಯನ್ನು ಹೊಲಿಯುವುದರಲ್ಲಿ ಅರ್ಥವಿದೆ. ಹೊಲಿದ ಬಟ್ಟೆಗೆ ವ್ಯಕ್ತಿಗಳನ್ನು ಹುಡುಕುವುದರಲ್ಲಿ ಮೂರ್ಖತನವಿದೆ. ಬಟ್ಟೆಯಾದರೂ ಅಷ್ಟೇ ಬುದ್ಧಿಯಾದರೂ ಅಷ್ಟೇ- ಉಪಯೋಗಕ್ಕೆ ಬಾರದೇ ಇರುವುದು ಎಷ್ಟಿದ್ದರೂ ವ್ಯರ್ಥವೇ.'

ಗುಂಡಣ್ಣ



ಪದಬಂಧ 6084


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅದಲು ಬದಲು ಅಥವಾ ವಿರೋಧ (3)
3.ಧಣಿ ನೋಡಲು ಸೇರಿದ ಗುಂಪು (3)
5.ಗರುಡನ ಹತ್ತಿರ ಕಾಣುತ್ತಿರುವ ಚರ್ಮವಾದ್ಯ (4)
7.ಭಜನೆ ಮಾಡುತ್ತಲೇ ಬೇರೆಯಾಗುವಿಕೆ! (4)
9.ನಿಜವಾಗಿಯೂ ರಾತ್ರಿಯಿದು (3)
11.ಪೂಜ್ಯಳಾದ ಹೆಂಗಸು (2)
12.ಲಡಾಯಿ ನಡೆಯುವಾಗ ಕಾಣಿಸಿದ ದಾರದ ಉಂಡೆ (2)
13.ವಸತಿ ಹತ್ತಿರ ಉಪಪತ್ನಿ ಬಂದಿದ್ದಾಳೆ (3)
15.ಇದಿನ್ನೂ ಎಳೆ ಮಗು (4)
19.ಕೊಬ್ಬಿದ ಆನೆಯಿದು (4)
20.ಬಣ್ಣ ಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ (3)
21.ಲೀಲಾಜಾಲವಾಗಿ ನಡೆದ ಏಲಂ (3)

ಮೇಲಿಂದ ಕೆಳಕ್ಕೆ

1.ಸನಿಹದಲ್ಲಿರುವವನು ಕೆಟ್ಟ ಚಟವುಳ್ಳವನು (3)
2.ಸರ ತಂದದ್ದಕ್ಕೇ ಈ ಸಂಭ್ರಮ! (4)
4.ಅನುಜನ ಹತ್ತಿರ ರಾಕ್ಷಸ ಬಂದಿದ್ದಾನಲ್ಲ! (3)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ಎಲ್ಲೆ ಹತ್ತರ ತಲೆದೋರಿದ ಶೀತ (3)
10.ವಾಸಸ್ಥಾನ ಇಲ್ಲಿದೆ (3)
11.ಆರೋಹಣದಲ್ಲಿರುವ ಸವಾರ ಕಾಣುತ್ತಿದ್ದಾನೆಯೇ? (3)
14.ಎಳ್ಳು ನೀರು ಬಿಡುವಿಕೆ (4)
16.ಪರ್ಣ ಶಾಲೆಯ ಹತ್ತಿರವಿರುವ ಗರುಡ (3)
17.ಸುಗಮವಾಗಿ ಕಿತ್ತಿರುವ ಹೂ (2)
18.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



6083ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಗಲುಗನಸು 4.ತರತಮ
6.ಗಲಿಬಿಲಿ 8.ಕಟ್ಟಮಸ್ತು
10.ಕಸುಗಾಯಿ 12.ಹಲ್ಲುಪುಡಿ
13.ಅಡಿಪಾಯ 15.ಲಲಾಟಲಿಖಿತ

ಮೇಲಿಂದ ಕೆಳಕ್ಕೆ:
1.ಹದ್ದುಗಣ್ಣು 2.ಸುತ
3.ಧೂಮ 5.ತಥಾಸ್ತು
7.ಬಿಡಿಗಾಸು 8.ಕಡಾಯಿ
9.ಮಕಮಲ್ಲು 10.ಕನ್ನಡಿ
11.ಮಡಿವಂತ 13.ಅನ್ನ
14.ಯಲ

ಸುಡೊಕು 6468

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

6467 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಜೂನ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಮಾವಾಸ್ಯೆ ಗಂ. 16-02 ನಕ್ಷತ್ರ: ಮೃಗಶಿರ ಗಂ. 10-41 **ಯೋಗ:** ಗಂಡ ಗಂ. 6-00 ನಂತರ ವೃದ್ಧಿ ಗಂ 26-39 **ಕರಣ:** ಚತುಷ್ಪದ ಗಂ. 5-29, ಮಿಥುನ ಮಾಸದ 11 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 – 01-30 ಸೂರ್ಯೋದಯ : 06-10 ಸೂರ್ಯಾಸ್ತ : 06-57, **ಮುಸ್ಲಿಂ ದಿನಾಂಕ:** 28 ಜುಲ್‌ಹಿಜಾ , **ದಿನ ವಿಶೇಷ:** ಮಣ್ಣೆತ್ತಿನ ಅಮಾವಾಸ್ಯೆ, ವೃಷಭ ಪೂಜೆ , **ಅದೃಷ್ಟ ಸಂಖ್ಯೆ:** 5, 9

ಮೇಷ: ಕೆಲಸದ ಒತ್ತಡದಿಂದ ದೂರಾಗಿ ಮಿತ್ರರೊಡನೆ ಉಲ್ಲಾಸದಿಂದ ಕಾಲ ಕಳೆಯುವಿರಿ. ಸಂಸಾರದಲ್ಲಿ ಸುಖವನ್ನು ಕಾಣಲಿರುವಿರಿ. ಅರ್ಧದಲ್ಲಿ ಕೈಬಿಟ್ಟಿದ್ದ ಕಾರ್ಯಗಳಿಗೆ ಮರುಚಾಲನೆ ನೀಡುವ ಬಗ್ಗೆ ಗಮನಹರಿಸಿ.

ವೃಷಭ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನ ಪಡಬಹುದು. ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ. ಮಕ್ಕಳ ಜೀವನದ ಹಾದಿ ಬದಲಾಗಲಿದೆ.

ಮಿಥುನ: ಆತ್ಮಸ್ಥೈರ್ಯದಿಂದ ಯೋಚಿಸಿದ ಎಲ್ಲಾ ಕೆಲಸದಲ್ಲಿಯೂ ಜಯ ಕಾಣುವಿರಿ. ವಾಯುಸಂಬಂಧ ಆರೋಗ್ಯ ತೊಂದರೆಗಳು ಕಾಣಿಸಿಕೊಳ್ಳಬಹುದು. ಷೇರು ಮಾರಾಟಗಳಿಂದ ಲಾಭ ಹೊಂದುವಿರಿ.

ಕರ್ಕಾಟಕ: ವೈಯಕ್ತಿಕ ಸಮಸ್ಯೆಗಳ ಇತ್ಯರ್ಥಕ್ಕೆ ಬಂಧುಗಳ ಸಹಕಾರ ಪಡೆಯಲು ನಿರ್ಧರಿಸಿ. ಸಮಾಧಾನದಿಂದ ಯೋಚಿಸಿದರೆ ಸಮಸ್ಯೆ ಉಪಶಮನವಾಗುವುದು. ತಂದೆಯವರ ಆರೋಗ್ಯ ಸುಧಾರಣೆಯಿಂದ ನೆಮ್ಮದಿ.

ಸಿಂಹ: ವೈದ್ಯ ವೃತ್ತಿಯವರಿಗೆ ವಿಶೇಷ ಅನುಭವ ಸಿಗಲಿದೆ. ಉನ್ನತ ಅಧಿಕಾರಿಗಳ ಮೇಲೆ ಇದ್ದ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಸತತ ಪ್ರಯತದಿಂದ ಕೆಲಸ ಕಾರ್ಯ ಆರಂಭಿಸುವಿರಿ.

ಕನ್ಯಾ: ವಿದ್ಯುತ್ ಸಂಬಂಧಿ ವಸ್ತುಗಳ ಬಳಕೆಯನ್ನು ಮಾಡುವಾಗ ಮುಂಜಾಗ್ರತಾ ಕ್ರಮ ವಹಿಸಿ. ಗೃಹಿಣಿಯರು ಉತ್ತಮ ಶಿಫಾರಸ್ಸಿನ, ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು.

ತುಲಾ: ಬಾಡಿಗೆ ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಿಗೆ ಬರುವರು. ಕೋರ್ಟು ಕಚೇರಿ ವ್ಯವಹಾರ ನಿರ್ವಹಣೆ ಬಗ್ಗೆ ದಿಟ್ಟ ನಿರ್ಧಾರ ತೆಗೆದುಕೊಳ್ಳಿರಿ. ಕಚೇರಿ ಕೆಲಸಗಳಿಗೆ ಅಲೆದಾಟ ಇರುತ್ತದೆ.

ವೃಶ್ಚಿಕ: ವೈದ್ಯ ವೃತ್ತಿಯಲ್ಲಿರುವವರಿಗೆ ವಿಕ್ಷಿಪ್ತ ರೋಗಿಯೊಬ್ಬರನ್ನು ಭೇಟಿಯಾಗುವ ಸಾಧ್ಯತೆ. ಸೂಕ್ಷ್ಮಗ್ರಾಹಿಯಾದ ನೀವು ಮುಂದಿನ ಆತಂಕಗಳನ್ನು ಕಂಡುಕೊಳ್ಳಲಿದ್ದೀರಿ. ಪ್ರತಿಭೆ ಸಾಮರ್ಥ್ಯ ಈ ದಿನ ಬೆಳಕಿಗೆ ಬರಲಿದೆ.

ಧನು: ರಾಸಾಯನಿಕ ವಸ್ತುಗಳ ಉತ್ಪಾದನೆಯಲ್ಲಿ ಕೆಲಸ ನಡೆಸುತ್ತಿರುವವರು ಅವಗಢಗಳಿಂದ ಜಾಗರೂಕರಾಗಿ ಇರಿ. ಓಡುತ್ತಿರುವ ಪ್ರಪಂಚದೊಂದಿಗೆ ಓಡಲು ಪ್ರಯತ್ನಿಸುವುದು ಉತ್ತಮ. ವಾಹನ ಚಾಲನೆಯಲ್ಲಿ ಎಚ್ಚರಿಕೆ ವಹಿಸಿ.


ಮಕರ: ಬೆಳವಣಿಗೆಯ ಹಾದಿಯಲ್ಲಿ ದಿಕ್ಕು ತಪ್ಪಿಸುವವರೇ ಹೆಚ್ಚಿರುವುದರಿಂದ ನಿಮ್ಮತನ ಪ್ರದರ್ಶಿಸುವುದು ಸ್ವಲ್ಪ ಕಷ್ಟ. ದುರ್ಜನರಿಂದ ದೂರವಿದ್ದು ಸಜ್ಜನರಲ್ಲಿ ಸ್ನೇಹ ಮತ್ತು ವ್ಯವಹಾರ ಮಾಡಿ.

ಕುಂಭ: ಸುತ್ತಣ ಪರಿಸರದಲ್ಲಿರುವ ಬುದ್ಧಿವಂತ ವ್ಯಕ್ತಿಗಳಿಂದ ಲಾಭ ಉಂಟಾಗುವುದು. ನಿಯಮಿತ ಆಹಾರದಿಂದ ದೇಹದಲ್ಲಿ ವಾತದ ಬಾಧೆ ಕಡಿಮೆಯಾಗಲಿದೆ. ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ.

ಮೀನ: ಉನ್ನತ ಅಧಿಕಾರಿಗಳ ಜತೆಗಿನ ಸಂಬಂಧವನ್ನು ಉತ್ತಮವಾಗಿ ಇಟ್ಟುಕೊಳ್ಳುವುದರಿಂದ ಲಾಭವಾಗುತ್ತದೆ. ಕರ್ತವ್ಯ ಕೊರತೆಯಿಂದಾಗಿ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳಲಿದ್ದೀರಿ.

ವಿನಿಮಯ ದರ: ಡಾಲರ್ 86.05 | ಪೌಂಡ್ 116.98 | ಯುರೊ 99.80 | ಯೆನ್ (100ಕ್ಕೆ) 59

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	24,971
ಇಂದಿನ ಅಂತ್ಯ	25,044
ದಿನದ ಗರಿಷ್ಠ	25,317
	72

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹600
	12 ಕ್ಕೆ	₹80
ಮೈಸೂರು:	100 ಕ್ಕೆ	₹605


ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹345-555
ದ್ವಿತಳಿ (ಬಿ.ವಿ)	₹362-663

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹13000-23000
ಹುಣಸೂರು	₹15000-15000
ತುಮಕೂರು	₹23500-24800

‘ವಿರಳ ಲೋಹಕ್ಕೆ ಸಬ್ಸಿಡಿ, ಶೀಘ್ರ ತೀರ್ಮಾನ’

ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆ, ಪರ್ಯಾಯ ಮೂಲಗಳಿಗೆ ಕೇಂದ್ರ ಪ್ರಯತ್ನ


ಎಚ್.ಡಿ. ಕುಮಾರಸ್ವಾಮಿ

ನವದೆಹಲಿ (ಪಿಟಿಐ): ವಿರಳ ಲೋಹಗಳನ್ನು ಭಾರತದಲ್ಲಿಯೇ ಉತ್ಪಾದಿಸುವುದಕ್ಕೆ ಸಬ್ಸಿಡಿ ನೀಡುವ ಯೋಜನೆ ಆರಂಭಿಸುವ ಬಗ್ಗೆ ಕೇಂದ್ರ ಸರ್ಕಾರವು ಇನ್ನು 15 ರಿಂದ 20 ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಯೋಜನೆಯ ಅಡಿಯಲ್ಲಿ ಎಷ್ಟು ಮೊತ್ತದ ಸಬ್ಸಿಡಿ ಒದಗಿಸಬೇಕು ಎಂಬುದನ್ನು ತೀರ್ಮಾನಿಸಲು ಭಾಗೀದಾರರ ಜೊತೆ ಸಮಾಲೋಚನೆ ನಡೆಯುತ್ತಿದೆ. ಸಬ್ಸಿಡಿ ರೂಪದಲ್ಲಿ ನೀಡುವ ಮೊತ್ತವು ₹1,000 ಕೋಟಿಗಿಂತ ಹೆಚ್ಚಾದರೆ ಆಗ ಯೋಜನೆಯನ್ನು ಸಂಪುಟದ ಅನುಮೋದನೆಗೆ ಕಳುಹಿಸಬೇಕಾಗುತ್ತದೆ ಎಂದು ಬೃಹತ್ ಕೈಗಾರಿಕಾ ಸಚಿವಾಲಯದ ಕಾರ್ಯದರ್ಶಿ ಕಮ್ರನ್ ರಿಜ್ವಿ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಚೀನಾ ನಿರ್ಬಂಧದಿಂದಾಗಿ ಸಮಸ್ಯೆ
- ವಾಹನ, ಸೆಮಿಕಂಡಕ್ಟರ್ ಉದ್ಯಮಕ್ಕೆ ತೊಂದರೆ
- ಜಪಾನ್, ವಿಯೆಟ್ನಾಂನಿಂದ ಆಮದಿಗೆ ಪ್ರಯತ್ನ

‘ಹೈದರಾಬಾದ್ ಮೂಲದ ಒಂದು ಕಂಪನಿಯು ಆಸಕ್ತಿ ತೋರಿಸಿದೆ. ಈ ವರ್ಷದ ಅಂತ್ಯದ ವೇಳೆಗೆ 500 ಟನ್ ಉತ್ಪಾದನೆ ಮಾಡುವುದಾಗಿ ಅವರು ಭರವಸೆ ನೀಡಿದ್ದಾರೆ. ಗಣಿ ಸಚಿವರ ಜೊತೆ ಸಮಾಲೋಚನೆ ನಡೆಸಿದ್ದೇವೆ. ನಮ್ಮ ಕಾರ್ಯದರ್ಶಿ ಹಾಗೂ ನಮ್ಮ ಸಚಿವಾಲಯವು ಒಂದಿಷ್ಟು ಕೆಲಸ ಮಾಡುತ್ತಿದೆ. ಇನ್ನು 15–20 ದಿನಗಳಲ್ಲಿ ಒಂದು ತೀರ್ಮಾನ ಆಗಲಿದೆ’ ಎಂದು ಕುಮಾರಸ್ವಾಮಿ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ವಿರಳ ಲೋಹಗಳ ರಫ್ತಿನ ಮೇಲೆ ಚೀನಾ ಈಚೆಗೆ ನಿರ್ಬಂಧ ವಿಧಿಸಿರುವ ಕಾರಣದಿಂದಾಗಿ ವಾಹನ ಮತ್ತು ಸೆಮಿಕಂಡಕ್ಟರ್ ಚಿಪ್‌ಗಳ ತಯಾರಿಕೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಿದೆ.

ರೇರ್ ಅರ್ಥ್ ಮ್ಯಾಗ್ನೆಟ್‌ಗಳ ಉತ್ಪಾದನೆಗೆ ಅಂದಾಜು ಎರಡು ವರ್ಷಗಳು ಬೇಕಾಗಬಹುದು.

ಅಲ್ಲಿಯವರೆಗೆ ಇವುಗಳನ್ನು ಜಪಾನ್, ವಿಯೆಟ್ನಾಂ ಒಳಗೊಂಡಂತೆ ಇತರ ಮೂಲಗಳಿಂದ ತರಿಸಿಕೊಳ್ಳಲು ಸರ್ಕಾರವು ಉದ್ಯಮ ವಲಯದ ಜೊತೆ ಸೇರಿ ಕೆಲಸ ಮಾಡುತ್ತಿದೆ ಎಂದು ರಿಜ್ವಿ ಹೇಳಿದ್ದಾರೆ.

ಸಬ್ಸಿಡಿ ಮೂಲಕ ಕೊಡುವ ಮೊತ್ತವು ₹1,000 ಕೋಟಿಗಿಂತ ಕಡಿಮೆ ಇದ್ದರೆ ಸಚಿವ ಕುಮಾರಸ್ವಾಮಿ ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹಂತದಲ್ಲಿಯೇ ಅದಕ್ಕೆ ಅನುಮೋದನೆ ಸಿಗಬಹುದು. ಮೊತ್ತವು ಅದಕ್ಕಿಂತ ಜಾಸ್ತಿ ಇದ್ದರೆ ಮಾತ್ರ ಸಂಪುಟದ ಒಪ್ಪಿಗೆ ಬೇಕಾಗುತ್ತದೆ ಎಂದು ರಿಜ್ವಿ ತಿಳಿಸಿದ್ದಾರೆ.

ಇಪಿಎಫ್‌ಒ: ಎಟಿಎಂ, ಯುಪಿಐ ಮೂಲಕ ಹಣ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯ (ಇಪಿಎಫ್‌ಒ) ಸದಸ್ಯರು ತಮ್ಮ ಭವಿಷ್ಯನಿಧಿಯಲ್ಲಿನ (ಇಪಿಎಫ್) ಹಣವನ್ನು ಎಟಿಎಂ ಮೂಲಕ ಹಿಂದಕ್ಕೆ ಪಡೆಯುವ ಸೌಲಭ್ಯವು ಶೀಘ್ರವೇ ಕಾರ್ಯರೂಪಕ್ಕೆ ಬರಲಿದೆ.

ಸದಸ್ಯರು ತಮ್ಮ ಬ್ಯಾಂಕ್ ಖಾತೆಯನ್ನು ಇಪಿಎಫ್ ಖಾತೆಗೆ ಜೋಡಿಸಿ, ಯುಪಿಐ ಮೂಲಕ ಹಣ ಹಿಂಪಡೆಯುವ ಸೌಲಭ್ಯ ಕೂಡ ಜಾರಿಗೆ ಬರಲಿದೆ.

ಇಪಿಎಫ್ ಖಾತೆಯಲ್ಲಿ ಇರುವ ಹಣದಲ್ಲಿ ಒಂದಿಷ್ಟು ಮೊತ್ತವನ್ನು ಹಾಗೆಯೇ ಉಳಿಸಿಕೊಂಡು, ಇನ್ನುಳಿದ ಮೊತ್ತವನ್ನು ಯುಪಿಐ ಅಥವಾ ಎಟಿಎಂ ಕಾರ್ಡ್ ಬಳಸಿ ಬ್ಯಾಂಕ್ ಖಾತೆ ಮೂಲಕ ಹಿಂದಕ್ಕೆ ಪಡೆಯುವ ಸೌಲಭ್ಯವನ್ನು ಜಾರಿಗೆ ತರಲು ಕೇಂದ್ರ ಕಾರ್ಮಿಕ ಸಚಿವಾಲಯ ಅಗತ್ಯ ಕ್ರಮ ಕೈಗೊಳ್ಳುತ್ತಿದೆ ಎಂದು ಉನ್ನತ ಮೂಲಗಳು ಹೇಳಿವೆ.

ಈ ವ್ಯವಸ್ಥೆ ಜಾರಿಗೆ ತರುವಲ್ಲಿ ಕೆಲವು ತಂತ್ರಾಂಶ ಸಂಬಂಧಿ ಸಮಸ್ಯೆಗಳು ಇವೆ. ಈ ಸಮಸ್ಯೆಗಳನ್ನು ಪರಿಹರಿಸುವ ಕೆಲಸ ನಡೆದಿದೆ ಎಂದು ಗೊತ್ತಾಗಿದೆ. ಈಗಿರುವ ವ್ಯವಸ್ಥೆಯಲ್ಲಿ ಇಪಿಎಫ್‌ಒ ಸದಸ್ಯರು ತಮ್ಮ ಹಣವನ್ನು ಹಿಂದಕ್ಕೆ ಪಡೆಯಲು ಅರ್ಜಿಯೊಂದನ್ನು ಸಲ್ಲಿಸಬೇಕು. ಈ ಪ್ರಕ್ರಿಯೆಯು ಬಹಳ ಸಮಯ ತೆಗೆದುಕೊಳ್ಳುತ್ತಿದೆ.

ಇಪಿಎಫ್‌ಒ ಸದಸ್ಯರು ತಮ್ಮ ಪಿಎಫ್ ಖಾತೆಯಿಂದ ಹಣವನ್ನು ನೇರವಾಗಿ ಹಿಂದಕ್ಕೆ ಪಡೆಯುವ ಅವಕಾಶ ಕಲ್ಪಿಸಲು ಆಗದು ಎಂದು ಮೂಲಗಳು ಹೇಳಿವೆ. ಏಕೆಂದರೆ ಈ ಸೌಲಭ್ಯ ಕಲ್ಪಿಸಲು ಅಗತ್ಯವಿರುವ ಬ್ಯಾಂಕಿಂಗ್ ಪರವಾನಗಿಯು ಇಪಿಎಫ್‌ಒ ಬಳಿ ಇಲ್ಲ.

ಮಿತಿ ಏರಿಕೆ

ಸ್ವಯಂಚಾಲಿತ ಇತ್ಯರ್ಥ ವ್ಯವಸ್ಥೆಯ ಅಡಿಯಲ್ಲಿ, ಹಣ ಹಿಂಪಡೆಯುವ ಮನವಿಗಳನ್ನು ಮೂರು ದಿನಗಳಲ್ಲಿ ಇತ್ಯರ್ಥ ಪಡಿಸಲಾಗುತ್ತಿದೆ. ಈ ವ್ಯವಸ್ಥೆಯ ಅಡಿ ₹1 ಲಕ್ಷ ಹಿಂಪಡೆಯಲು ಇದ್ದ ಅವಕಾಶವನ್ನು ಮಂಗಳವಾರದಿಂದ ₹5 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಅಡಿಕೆ ಧಾರಣೆ

ಪುತ್ತೂರು	
ಕೋಕ	20000-30500
ಹೊಸತು	26000-47500
ಹಳತು	39000-52000
ಸಿದ್ದಾಪುರ	
ಬಿಳಿಗೋಟು	24299-30509
ಚಾಲಿ	33489-40100
ಕೋಕ	14769-23369
ಕೆಂಪುಗೋಟು	17399-22199
ರಾಶಿ	41099-45509
ತಟ್ಟಿಬೆಟ್ಟೆ	29319-45299
ಶಿವಮೊಗ್ಗ	
ಬೆಟ್ಟೆ	53509-59299
ಗೊರಬಲು	18010-30089
ರಾಶಿ	45069-56599
ಸರಕು	52000-97400
ಶಿರಸಿ	
ಬೆಟ್ಟೆ	20169-37589
ಬಿಳಿಗೋಟು	15199-31800
ಚಾಲಿ	35600-42299
ಕೆಂಪುಗೋಟು	12699-23121
ರಾಶಿ	41550-47598
ಯಲ್ಲಾಪುರ	
ಅಪಿ	55199-68999
ಬಿಳಿಗೋಟು	15699-32400
ಚಾಲಿ	32719-41001
ಕೋಕ	8609-18912
ಕೆಂಪುಗೋಟು	17710-26699
ರಾಶಿ	39909-53501
ತಟ್ಟಿಬೆಟ್ಟೆ	28000-38169

ಗಾಜಾದಲ್ಲಿ 40 ಸಾವು

ದಾರ್ ಅಲ್–ಬಲಾ (ಗಾಜಾ ಪಟ್ಟಿ) (ಎಪಿ): ಗಾಜಾದ ವಿವಿಧೆಡೆ ಇಸ್ರೇಲ್ ಸೇನೆಯು ಮಂಗಳವಾರ ನಡೆಸಿದ ದಾಳಿಯಲ್ಲಿ 40 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ.

ಮಧ್ಯ ಗಾಜಾದಲ್ಲಿ ನೆರವು ಟ್ರಕ್‌ಗಳಿಂದ ಆಹಾರ ಪಡೆಯಲು ಕಾಯುತ್ತಿದ್ದ ನೂರಾರು ಜನರ ಮೇಲೆ ಇಸ್ರೇಲ್ ಪಡೆಗಳು ಮಂಗಳವಾರ ಮುಂಜಾನೆ ಗುಂಡಿನ ದಾಳಿ ನಡೆಸಿದ್ದು, ಕನಿಷ್ಠ 19 ಜನರು ಮೃತಪಟ್ಟಿದ್ದಾರೆ.

ಗಾಜಾವನ್ನು ಪೂರ್ವ–ಪಶ್ಚಿಮವಾಗಿ ವಿಭಜಿಸುವ ನೆಟ್ಜಾರಿಮ್ ಕಾರಿಡಾರ್‌ಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಜನರು ಗುಂಪಾಗಿ ಜಮಾಯಿಸಿದ್ದ ಸಂದರ್ಭ ಈ ದಾಳಿ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

‘ಇಸ್ರೇಲ್‌ನ ದಾಳಿಯಿಂದ 146 ಪ್ಯಾಲೆಸ್ಟೀನಿಯನ್ನರು ಗಾಯಗೊಂಡಿದ್ದಾರೆ. ಇದರಲ್ಲಿ 62 ಜನರ ಪರಿಸ್ಥಿತಿ ಗಂಭೀರವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮಧ್ಯ ಗಾಜಾದ ವಿವಿಧ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ’ ಎಂದು ಅವ್ದಾ ಆಸ್ಪತ್ರೆ ತಿಳಿಸಿದೆ.

ಸಬ್ರಾ ಎಂಬಲ್ಲಿ ಮನೆಯೊಂದರ ಮೇಲೆ ನಡೆದ ದಾಳಿಯಲ್ಲಿ 10 ಮಂದಿ ಹಾಗೂ, ಖಾನ್ ಯೂನಿಸ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ 11 ಮಂದಿ ಮೃತಪಟ್ಟಿದ್ದಾರೆ.

‘ಇಸ್ರೇಲ್–ಹಮಾಸ್ ನಡುವಿನ ಸಂಘರ್ಷದಲ್ಲಿ ಇದುವರೆಗೂ ಮೃತಪಟ್ಟ ಪ್ಯಾಲೆಸ್ಟೀನಿಯನ್ನರ ಸಂಖ್ಯೆ 56 ಸಾವಿರಕ್ಕೆ ತಲುಪಿದೆ’ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರೂಪಾಯಿ ಮೌಲ್ಯ 73 ಪೈಸೆ ಜಿಗಿತ



ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ತೀವ್ರತೆ ಕಡಿಮೆಯಾಗುವ ಭರವಸೆ ಮೂಡಿರುವ ಪರಿಣಾಮವಾಗಿ, ಡಾಲರ್ ಮೌಲ್ಯ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಕಡಿಮೆಯಾಗಿದೆ. ಇದರಿಂದಾಗಿ, ಮಂಗಳವಾರ ನಡೆದ ವಹಿವಾಟಿನಲ್ಲಿ ಭಾರತದ ರೂಪಾಯಿ ಮೌಲ್ಯ 73 ಪೈಸೆ ಏರಿಕೆಯಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ₹86.05 ಆಗಿದೆ. ಇದು ಕಳೆದ ಐದು ವರ್ಷಗಳಲ್ಲಿ ಏಕ ದಿನದಲ್ಲಿ ಕಂಡ ಅತಿ ಗರಿಷ್ಠ ಏರಿಕೆ ಇದಾಗಿದೆ.

ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆ ಸಹ ರೂಪಾಯಿ ಮೌಲ್ಯ ಹೆಚ್ಚಳವಾಗಲು ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 3.20ರಷ್ಟು ಇಳಿಕೆಯಾಗಿದ್ದು, ಪ್ರತೀ ಬ್ಯಾರೆಲ್‌ಗೆ 69.13 ಡಾಲರ್ ಆಗಿದೆ. ಸೋಮವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 23 ಪೈಸೆ ಇಳಿಕೆಯಾಗಿತ್ತು.

ಸೂಚ್ಯಂಕ ಏರಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 158 ಅಂಶ ಏರಿಕೆಯಾಗಿ, 82,055ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ನಡುವೆ 1,121 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 72 ಅಂಶ ಹೆಚ್ಚಳವಾಗಿ, 25,044ಕ್ಕೆ ಕೊನೆಗೊಂಡಿತು.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1400 (1400)
ಸೋಯಾ (ರಿಫೈನ್ಡ್)	₹1200 (1215)
ಸೂರ್ಯಕಾಂತಿ (ರಿಫೈನ್ಡ್)	₹1340 (1360)
ಪಾಮೋಲಿನ್	₹1190 (1210)

ಮುಂಬೈ ಧಾರಣೆ (ಶೇಂಗಾ) 24-06-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1410)
ಒಂದು ವಾರದ ಡೆಲಿವರಿ	1405 (1405)
ಪಾಮ್ ವಾರದ ಡೆಲಿವರಿ	1188 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,650 (98,800)
ಬೆಳ್ಳಿ ಕೆ.ಜಿಗೆ	1,05,550 (1,06,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಹಲವು ಲೋಪ ಗುರುತಿಸಿದ ಡಿಜಿಸಿಎ



ನವದೆಹಲಿ (ಪಿಟಿಐ): ವಿಮಾನಯಾನ ಕಂಪನಿಗಳು, ವಿಮಾನ ನಿಲ್ದಾಣಗಳು ಹಾಗೂ ವಿಮಾನ ನಿರ್ವಹಣೆ ಕೆಲಸಗಳಲ್ಲಿ ನಿಯಮ ಉಲ್ಲಂಘನೆಯ ಹಲವು ನಿದರ್ಶನಗಳನ್ನು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಪತ್ತೆ ಮಾಡಿದೆ.

ದೇಶದ ಪ್ರಮುಖ ವಿಮಾನ ನಿಲ್ದಾಣಗಳ ತಪಾಸಣೆ ವೇಳೆ, ಲೋಪಗಳು ಮರುಕಳಿಸಿರುವುದನ್ನು ಕೂಡ ಡಿಜಿಸಿಎ ಪತ್ತೆ ಮಾಡಿದೆ. ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಅಪಘಾತಕ್ಕೆ ತುತ್ತಾದ ನಂತರದಲ್ಲಿ ಡಿಜಿಸಿಎ ಈ ಪರಿಶೀಲನೆ ಕೈಗೊಂಡಿತ್ತು.

ಆದರೆ ಯಾವ ವಿಮಾನ ಕಂಪನಿಯಲ್ಲಿ, ಯಾವ ವಿಮಾನ ನಿಲ್ದಾಣದಲ್ಲಿ ನಿಯಮ ಉಲ್ಲಂಘನೆಗಳು ಕಂಡುಬಂದಿವೆ ಎಂಬುದನ್ನು ಡಿಜಿಸಿಎ ಬಹಿರಂಗ ಪಡಿಸಿಲ್ಲ. ವಿಮಾನಗಳ ಕಾರ್ಯಾಚರಣೆ, ವಿಮಾನಗಳು ಹಾರಾಟಕ್ಕೆ ಸುರಕ್ಷಿತವೇ ಎಂಬ ಬಗ್ಗೆ, ವಿಮಾನ ನಿಲ್ದಾಣದ ನಿಯಂತ್ರಣ ಕೇಂದ್ರ (ಎಟಿಸಿ) ಕುರಿತು ಪರಿಶೀಲನೆ ನಡೆಸಲಾಗಿದೆ.

ವಿಮಾನಯಾನ ಸೇವಾ ವಲಯದಲ್ಲಿನ ಲೋಪಗಳ ಪತ್ತೆಗೆ ಮುಂದೆಯೂ ಪರಿಶೀಲನೆ ನಡೆಯಲಿದೆ ಎಂಬುದನ್ನು ಡಿಜಿಸಿಎ ಸ್ಪಷ್ಟಪಡಿಸಿದೆ.

ಈಗ ನಡೆದಿರುವ ಪರಿಶೀಲನೆಯಲ್ಲಿ ಕಂಡುಬಂದಿರುವ ಅಂಶಗಳನ್ನು ಸಂಬಂಧಪಟ್ಟವರಿಗೆ ತಿಳಿಸಲಾಗಿದೆ, ಲೋಪಗಳನ್ನು ತಿದ್ದಿಕೊಳ್ಳುವ ಕ್ರಮಗಳನ್ನು ಏಳು ದಿನಗಳಲ್ಲಿ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಹೇಳಿದೆ.

ಮುಂಬೈ ಹಾಗೂ ದೆಹಲಿ ವಿಮಾನ ನಿಲ್ದಾಣ ಸೇರಿದಂತೆ ದೇಶದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಎರಡು ತಂಡಗಳು ಪರಿಶೀಲನೆ ನಡೆಸಿವೆ. ಕೆಲವು ವಿಮಾನಗಳಲ್ಲಿ ಲೋಪಗಳ ಬಗ್ಗೆ ಮಾಹಿತಿ ನೀಡಿದ ನಂತರವೂ ಅವು ಮತ್ತೆ ಕಾಣಿಸಿಕೊಂಡ ನಿದರ್ಶನಗಳು ಇವೆ.

ವಿಮಾನ ನಿಲ್ದಾಣವೊಂದರಲ್ಲಿ ರನ್‌ವೇ ಮಧ್ಯದ ಗೆರೆಯು ಅಳಿಸಿಹೋಗಿತ್ತು, ಸಣ್ಣ ವಿಮಾನ ನಿಲ್ದಾಣವೊಂದರ ಸುತ್ತ ಹಲವು ಕಟ್ಟಡಗಳ ನಿರ್ಮಾಣ ಆಗಿದ್ದರೂ ಅದರ ಬಗ್ಗೆ ಸಮೀಕ್ಷೆಯನ್ನೇ ನಡೆಸದಿರುವುದು ಕೂಡ ಡಿಜಿಸಿಎ ಗಮನಕ್ಕೆ ಬಂದಿದೆ.

‘ನ್ಯಾ. ವರ್ಮಾ ಪ್ರಕರಣ ಎಫ್‌ಐಆರ್ ಏಕಿಲ್ಲ?’

ಕಾನೂನು ಮತ್ತು ನ್ಯಾಯ ಕುರಿತ ಸಂಸದೀಯ ಸಮಿತಿ ಪ್ರಶ್ನೆ

ನವದೆಹಲಿ(ಪಿಟಿಐ): ‘ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ನಿವಾಸದಲ್ಲಿ ನಗದು ಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಿಲ್ಲ ಏಕೆ’ ಎಂದು ಸಂಸದೀಯ ಸಮಿತಿಯೊಂದು ಮಂಗಳವಾರ ಪ್ರಶ್ನಿಸಿದೆ.

ಬಿಜೆಪಿಯ ರಾಜ್ಯಸಭಾ ಸಂಸದ ಬ್ರಿಜ ಲಾಲ್ ನೇತೃತ್ವದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಮತ್ತು ನ್ಯಾಯ ಕುರಿತ ಸಂಸದೀಯ ಸಮಿತಿ ಮುಂದೆ ಹಾಜರಾಗಿದ್ದ ನ್ಯಾಯ ಇಲಾಖೆಯ ಕಾರ್ಯದರ್ಶಿ, ಪ್ರಕರಣ ಕುರಿತು ವಿವರಣೆ ನೀಡಿದ್ದಾರೆ.

‘ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಹಾಗೂ ಪ್ರಸ್ತಾಪಿಸಿದ ವಿಷಯಗಳಿಗೆ ಸಂಬಂಧಿಸಿ, ಸಮಿತಿಯ ಮುಂದಿನ ಸಭೆಯಲ್ಲಿ ಸಮಗ್ರ ವರದಿ ಮಂಡಿಸುವಂತೆ ಸೂಚಿಸಲಾಯಿತು’ ಎಂದು ಮೂಲಗಳು ತಿಳಿಸಿವೆ.

‘ಈ ಪ್ರಕರಣವು ನ್ಯಾಯಾಂಗ ಕುರಿತಂತೆ ಆತಂಕ ಮೂಡುವಂತೆ ಮಾಡಿದೆ. ನ್ಯಾಯಾಧೀಶರು ಹಾಗೂ ನ್ಯಾಯಮೂರ್ತಿಗಳಿಗೆ ಸಂಬಂಧಿಸಿ ನೀತಿ ಸಂಹಿತೆ ರೂಪಿಸಬೇಕು. ಇದಕ್ಕಾಗಿ ಸಮಗ್ರ ಮಸೂದೆಯೊಂದರ ಅಗತ್ಯವಿದೆ ಎಂಬುದಾಗಿ ಸಮಿತಿ ಸದಸ್ಯರು ಪ್ರತಿಪಾದಿಸಿದರು’ ಎಂದು ಹೇಳಿವೆ.

ನ್ಯಾಯಮೂರ್ತಿ ವರ್ಮಾ ನಿವಾಸದಲ್ಲಿ ನಗದು ವಶಪಡಿಸಿಕೊಂಡಿರುವುದು ಸತ್ಯ ಎಂಬುದಾಗಿ ಸುಪ್ರೀಂ ಕೋರ್ಟ್ ನೇಮಿಸಿದ್ದ ನ್ಯಾಯಮೂರ್ತಿಗಳ ಸಮಿತಿ ಹೇಳಿದೆ. ಹಾಗಾಗಿ, ನ್ಯಾಯಮೂರ್ತಿ ವರ್ಮಾ ಅವರ ಪದಚ್ಯುತಿಗೆ ಸಂಬಂಧಿಸಿ ಸರ್ಕಾರ ಗೊತ್ತುವಳಿ ಮಂಡಿಸಬೇಕಿತ್ತು ಎಂದು ಸಮಿತಿಯ ಕೆಲ ಸದಸ್ಯರು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ವಿವಿಧ ಪಕ್ಷಗಳ ಸಂಸದರು ಸಮಿತಿ ಸದಸ್ಯರಾಗಿದ್ದಾರೆ. ಸಮಿತಿ ಸದಸ್ಯರ ಪೈಕಿ ಒಬ್ಬರಾದ ನಿವೃತ್ತ ಸಿಜೆಐ ರಂಜನ್ ಗೊಗೋಯಿ ಸಭೆಗೆ ಗೈರಾಗಿದ್ದರು.

ಸಮಿತಿ ಮುಂದಿಟ್ಟ ಪ್ರಶ್ನೆಗಳು
- ನ್ಯಾಯಮೂರ್ತಿ ವರ್ಮಾ ಅವರ ನಿವಾಸದಲ್ಲಿ ಲೆಕ್ಕಪತ್ರವಿಲ್ಲದ ನಗದು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೇಕೆ?
- ನ್ಯಾಯಮೂರ್ತಿ ವರ್ಮಾ ಅವರನ್ನು ಪದಚ್ಯುತಗೊಳಿಸುವ ಕುರಿತ ಗೊತ್ತುವಳಿ ಮಂಡನೆ ಮಾಡಿಲ್ಲ ಏಕೆ?
- ಸಣ್ಣ ಪ್ರಮಾಣದ ಭ್ರಷ್ಟಾಚಾರದಲ್ಲಿ ಸರ್ಕಾರಿ ನೌಕರ ತನ್ನ ಉದ್ಯೋಗ ಕಳೆದುಕೊಳ್ಳುತ್ತಾರೆ. ಆದರೆ, ನ್ಯಾಯಾಂಗದ ಅತ್ಯುನ್ನತ ಹುದ್ದೆಯಲ್ಲಿರುವ ವ್ಯಕ್ತಿಯ ನಿವಾಸದಲ್ಲಿ ಲೆಕ್ಕಪತ್ರ ಇಲ್ಲದ ನಗದು ವಶಪಡಿಸಿಕೊಂಡಿದ್ದರೂ, ಕ್ರಮ ಜರುಗಿಸಿಲ್ಲ ಏಕೆ?

ಇರಾನ್–ಇಸ್ರೇಲ್ ಕದನ ವಿರಾಮ

ಒಂದನೇ ಪುಟದಿಂದ...

‘ಸೇನಾ ನೆಲೆಗಳ ಮೇಲಿನ ದಾಳಿಯನ್ನು ಮುಂದಿಟ್ಟುಕೊಂಡೇ ಇಸ್ರೇಲ್ ಅನ್ನು ಕದನ ವಿರಾಮಕ್ಕೆ ಅಮೆರಿಕ ಒಪ್ಪಿಸಿತು’ ಎನ್ನುವ ಮಾತುಗಳು ಕೇಳಿಬರುತ್ತಿವೆ. ಈ ಇಡೀ ಪ್ರಕ್ರಿಯೆಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರ ಪಾತ್ರವೇನು ಎನ್ನುವ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಈ ಬೆಳವಣಿಗೆಗಳ ಮಧ್ಯೆಯೂ, ಮಂಗಳವಾರ ಇಸ್ರೇಲ್ ಹಾಗೂ ಇರಾನ್ ಪರಸ್ಪರರ ಮೇಲೆ ತೀವ್ರ ಪ್ರಮಾಣದ ಕ್ಷಿಪಣಿ ದಾಳಿ ನಡೆಸಿವೆ. ಇಸ್ರೇಲ್ ದಾಳಿಯಲ್ಲಿ ಇರಾನ್‌ನ 9 ಮಂದಿ ಮೃತಪಟ್ಟರೆ, ಇರಾನ್ ದಾಳಿಯಲ್ಲಿ ಇಸ್ರೇಲ್‌ನ ನಾಲ್ವರು ಮೃತಪಟ್ಟಿದ್ದಾರೆ.

ಕದನ ವಿರಾಮಕ್ಕೆ ಒಪ್ಪಿದ್ದು ಯಾರು?

ತಾನು ಪೋಸ್ಟ್ ಮಾಡಿದ ಆರು ತಾಸಿನ ಒಳಗೆ ಎರಡೂ ದೇಶಗಳು ತಮ್ಮ ಅಪೂರ್ಣ ದಾಳಿಯನ್ನು ಪೂರ್ಣ ಮಾಡುತ್ತವೆ ಮತ್ತು ಅಂತಿಮ ದಾಳಿ ನಡೆಸುತ್ತವೆ. ಮುಂದಿನ 12 ತಾಸಿನಲ್ಲಿ ಎಲ್ಲಾ ದಾಳಿಗಳು ಕೊನೆಗೊಳ್ಳುತ್ತವೆ. ಮೊದಲಿಗೆ ಇರಾನ್ ಕದನಕ್ಕೆ ವಿರಾಮ ಘೋಷಿಸುತ್ತದೆ, ಅಲ್ಲಿಂದ 12 ತಾಸಿನ ಬಳಿಕ ಇಸ್ರೇಲ್ ಘೋಷಿಸುತ್ತದೆ ಎಂದು ಟ್ರಂಪ್ ಅವರು ಮಂಗಳವಾರ ಬೆಳಿಗ್ಗೆ 3.34ಕ್ಕೆ (ಭಾರತೀಯ ಕಾಲಮಾನ) ಜಾಲತಾಣಗಳಲ್ಲಿ ತಮ್ಮ ಮೊದಲ ಪೋಸ್ಟ್ ಹಂಚಿಕೊಂಡರು.

ಆದರೆ, ‘ಇಸ್ರೇಲ್ ಸೇನೆಯು ಬೆಳಿಗ್ಗೆ 9ರವರೆಗೆ ದಾಳಿ ನಡೆಸಿದೆ’ ಎಂದು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ.

ಈ ವೇಳೆ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅಬ್ಬಾಸ್ ಅರಾಗ್ಚಿ ಪ್ರತಿಕ್ರಿಯಿಸಿ, ‘ಈ ಹೊತ್ತಿನವರೆಗೆ ಯಾವ ಒಪ್ಪಂದವೂ ಏರ್ಪಟ್ಟಿಲ್ಲ. ಯಾವ ಕದನ ವಿರಾಮವೂ ಇಲ್ಲ, ಸೇನಾ ಕಾರ್ಯಾಚರಣೆ ರದ್ದತಿಯೂ ಇಲ್ಲ. ಒಂದು ವೇಳೆ ಇಸ್ರೇಲ್ ಸರ್ಕಾರ ಬೆಳಿಗ್ಗೆ 6 ಗಂಟೆಯ (ಭಾರತೀಯ ಕಾಲಮಾನ) ಒಳಗೆ ನಮ್ಮ ಮೇಲಿನ ದಾಳಿಯನ್ನು ನಿಲ್ಲಿಸಿದರೆ, ಯುದ್ಧವನ್ನು ಮುಂದುವರಿಸುವ ಯಾವ ಉದ್ದೇಶವೂ ನಮಗಿಲ್ಲ’ ಎಂದರು. ಆದರೆ, ಕದನ ವಿರಾಮಕ್ಕೆ ಒಪ್ಪಿಕೊಂಡಿರುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದರು.

ಕತಾರ್ ಮುಖ್ಯಭೂಮಿಕೆ

‘ಅಮೆರಿಕದ ಕದನ ವಿರಾಮ ಪ್ರಸ್ತಾವಕ್ಕೆ ಇಸ್ರೇಲ್ ಒಪ್ಪಿಕೊಂಡಿದೆ ಎಂದು ಡೊನಾಲ್ಡ್ ಟ್ರಂಪ್ ಅವರು ಕತಾರ್‌ನ ರಾಜ ಶೇಕ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರಿಗೆ ತಿಳಿಸಿದರು. ಇರಾನ್ ಅನ್ನೂ ಕದನ ವಿರಾಮಕ್ಕೆ ಒಪ್ಪಿಸುವಂತೆ ಟ್ರಂಪ್ ಅವರು ರಾಜನನ್ನು ಕೇಳಿಕೊಂಡರು. ಬಳಿಕ, ಕತಾರ್ ಪ್ರಧಾನಿ ಶೇಕ್ ಮೊಹಮ್ಮದ್ ಬಿನ್ ಅಬ್ದುಲ್ ರಹಮಾನ್ ಅಲ್ ಥಾನಿ ಅವರು ಕದನ ವಿರಾಮ ಪ್ರಸ್ತಾವಕ್ಕೆ ಒಪ್ಪಿಕೊಳ್ಳುವಂತೆ ಇರಾನ್ ಮೇಲೆ ಒತ್ತಡ ಹೇರಿದರು’ ಎಂದು ಮೂವರು ರಾಜತಾಂತ್ರಿಕರು ಮಾಹಿತಿ ನೀಡಿದ್ದಾರೆ.

‘ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರೊಂದಿಗೆ ಖುದ್ದು ಟ್ರಂಪ್ ಅವರೇ ಮಾತುಕತೆ ನಡೆಸಿ, ಕದನ ವಿರಾಮಕ್ಕೆ ಒಪ್ಪಿಸಿದ್ದಾರೆ. ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಇರಾನ್‌ನ ಅಧಿಕಾರಿಗಳೊಂದಿಗೆ ಮಾತನಾಡಿದ್ದಾರೆ’ ಎಂದು ಶ್ವೇತಭವನದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇಸ್ರೇಲ್ ಮೇಲೆ ಟ್ರಂಪ್ ಕೋಪ

ಕದನ ವಿರಾಮಕ್ಕೆ ನೀಡಿದ ಗಡುವು ಮುಗಿದ ಬಳಿಕವೂ ಇಸ್ರೇಲ್ ಹಾಗೂ ಇರಾನ್ ಪರಸ್ಪರ ದಾಳಿ ನಡೆಸಿಕೊಂಡಿವೆ ಎಂದು ಡೊನಾಲ್ಡ್ ಟ್ರಂಪ್ ಅವರು ಗುಡುಗಿದ್ದಾರೆ.

‘ಅವರೂ (ಇರಾನ್) ಕದನ ವಿರಾಮ ಉಲ್ಲಂಘಿಸಿದರು. ಇಸ್ರೇಲ್ ಕೂಡ ಉಲ್ಲಂಘಿಸಿತು. ಇಸ್ರೇಲ್ ನಡೆಯ ಬಗ್ಗೆ ನನಗೆ ತೃಪ್ತಿ ಇಲ್ಲ. ನಾವು ಒಪ್ಪಂದ ಮಾಡಿಕೊಂಡ ಬಳಿಕ ಇಸ್ರೇಲ್ ಅದಕ್ಕೆ ಅನುಗುಣವಾಗಿ ನಡೆದುಕೊಂಡಿಲ್ಲ’ ಎಂದು ಟ್ರಂಪ್ ಪತ್ರಕರ್ತರಿಗೆ ಪ್ರತಿಕ್ರಿಯಿಸಿದರು.

ಕೆಲವು ಹೊತ್ತು ಬಳಿಕ, ‘ಇಸ್ರೇಲ್, ಬಾಂಬ್‌ಗಳನ್ನು ಬೀಳಿಸಬೇಡಿ. ನೀವು ಹಾಗೆ ಮಾಡಿದರೆ, ಅದು ಕದನ ವಿರಾಮದ ಗಂಭೀರ ಉಲ್ಲಂಘನೆಯಾಗುತ್ತದೆ. ನಿಮ್ಮ ಪೈಲಟ್‌ಗಳನ್ನು ಈಗಲೇ ಮನೆಗೆ ವಾಪಸು ಕರೆಸಿಕೊಳ್ಳಿ’ ಎಂದು ಪೋಸ್ಟ್ ಹಂಚಿಕೊಂಡರು.

ಭಾರತೀಯರು ವಾಪಸ್

ನವದೆಹಲಿ (ಪಿಟಿಐ): ಇರಾನ್‌ನಿಂದ 292 ಪ್ರಜೆಗಳು ಮತ್ತು ಇಸ್ರೇಲ್‌ನಿಂದ 366 ಜನರು ಮಂಗಳವಾರ ಭಾರತಕ್ಕೆ ವಾಪಸಾದರು.

ಭಾರತವು ‘ಆಪರೇಷನ್ ಸಿಂಧು’ ಕಾರ್ಯಾಚರಣೆಗೆ ಮೂಲಕ ಈವರೆಗೆ ಇರಾನ್‌ನಿಂದ 2,295 ಭಾರತೀಯರನ್ನು ತವರಿಗೆ ಕರೆತಂದಿದೆ.

ಸ್ಥಳಾಂತರ ಕಾರ್ಯ ಸ್ಥಗಿತ (ಟೆಹರಾನ್ ವರದಿ): ಕದನ ವಿರಾಮ ಘೋಷಣೆಯಾಗಿರುವುದರಿಂದ ಇರಾನ್ ಮತ್ತು ಇಸ್ರೇಲ್‌ನಿಂದ ಭಾರತೀಯರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ ಎಂದು ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಹಾನಿಗೀಡಾದ ಘಟಕಗಳ ಪುನರಾರಂಭಿಸಲು ಬೇಕಾದ ಯೋಜನೆ ಮುಂಚಿತವಾಗಿಯೇ ಸಿದ್ಧ: ಇರಾನ್

‘ಪರಮಾಣು ಯೋಜನೆ ಮುಂದುವರಿಸಲು ಕ್ರಮ’

ಟೆಹರಾನ್ (ಎಎಫ್‌ಪಿ): ತನ್ನ ಪರಮಾಣು ಯೋಜನೆ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳಲು ‘ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದು ಇರಾನ್ ಸರ್ಕಾರ ಮಂಗಳವಾರ ಹೇಳಿದೆ.

ಇರಾನ್‌ನ ಫೋರ್ಡೊ, ನಟಾನ್ಜ್ ಹಾಗೂ ಎಸ್‌ಫಹಾನ್‌ನಲ್ಲಿರುವ ಪರಮಾಣು ಘಟಕಗಳನ್ನು ಗುರಿಯಾಗಿಸಿ ಅಮೆರಿಕ ಹಾಗೂ ಇಸ್ರೇಲ್ ದಾಳಿ ನಡೆಸಿತ್ತು. ಇದರಿಂದ ಮೂರು ಪರಮಾಣು ಘಟಕಗಳಿಗೂ ಹಾನಿ ಉಂಟಾಗಿದೆ.

‘ಅಣು ಯೋಜನೆ ಮುಂದುವರಿಸಲು ನಾವು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಮತ್ತು ದಾಳಿಯಿಂದ ಆಗಿರುವ ಹಾನಿಯನ್ನು ಅಂದಾಜು ಮಾಡುತ್ತಿದ್ದೇವೆ’ ಎಂದು ಇರಾನ್‌ನ ಅಣು ಶಕ್ತಿ ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಇಸ್ಲಾಮಿ ಹೇಳಿದ್ದಾರೆ.

‘ಪರಮಾಣು ಘಟಕಗಳನ್ನು ಪುನರಾರಂಭಿಸಲು ಬೇಕಾದ ಯೋಜನೆಗಳನ್ನು ಮುಂಚಿತವಾಗಿಯೇ ಸಿದ್ಧಪಡಿಸಲಾಗಿದೆ ಮತ್ತು ಉತ್ಪಾದನೆಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದು ನಮ್ಮ ಕಾರ್ಯತಂತ್ರವಾಗಿದೆ’ ಎಂದು ತಿಳಿಸಿದ್ದಾರೆ.

ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಸಲಹೆಗಾರರೊಬ್ಬರು, ತಮ್ಮ ದೇಶದಲ್ಲಿ ಶುದ್ಧೀಕರಿಸಿದ ಯುರೇನಿಯಂನ ದಾಸ್ತಾನು ಇದ್ದು, ‘ಆಟ ಇನ್ನೂ ಮುಗಿದಿಲ್ಲ’ ಎಂದಿದ್ದಾರೆ.

ಫೋರ್ಡೊ ಪರಮಾಣು ಘಟಕದ ಮೇಲೆ ಅಮೆರಿಕ ದಾಳಿ ನಡೆಸಿದ ಬೆನ್ನಲ್ಲೇ, ಇಸ್ರೇಲ್ ಕೂಡಾ ದಾಳಿ ಮಾಡಿತ್ತು. ‘ಫೋರ್ಡೊ ಘಟಕವನ್ನು ತಲುಪುವ ದಾರಿಯನ್ನು ಧ್ವಂಸ ಮಾಡಿದ್ದೇವೆ’ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿತ್ತು.

ಹಲವರ ಸಾವು

ಕಾರಾಗೃಹದ ಮೇಲಿನ ದಾಳಿಯಲ್ಲಿ ಸಾಕಷ್ಟು ಸಾವು–ನೋವು ಉಂಟಾಗಿದೆ ಎಂದು ನ್ಯಾಯಾಂಗದ ವಕ್ತಾರ ಅಸ್ಗರ್ ಜಹಾಂಗೀರ್ ಹೇಳಿದ್ದಾರೆ.

‘ಆಡಳಿತ ಮತ್ತು ನ್ಯಾಯಾಂಗದ ಸಿಬ್ಬಂದಿ, ಕೈದಿಗಳ ಕುಟುಂಬ ಸದಸ್ಯರು ಮತ್ತು ಕೈದಿಗಳು ಸೇರಿದಂತೆ ನಮ್ಮ ಹಲವು ನಾಗರಿಕರು ಗಾಯಗೊಂಡಿದ್ದಾರೆ ಹಾಗೂ ಹುತಾತ್ಮರಾಗಿದ್ದಾರೆ’ ಎಂದು ತಿಳಿಸಿದ್ದಾರೆ.

ಕೈದಿಗಳ ಸ್ಥಳಾಂತರ

ಟೆಹರಾನ್‌ನ ಎವಿನ್ ಕಾರಾಗೃಹದಲ್ಲಿರುವ ಕೈದಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ ಎಂದು ಇರಾನ್‌ನ ನ್ಯಾಯಾಂಗ ಮಂಗಳವಾರ ತಿಳಿಸಿದೆ.

ಖಮೇನಿ ಮತ್ತು ಇಲ್ಲಿನ ಸರ್ಕಾರದ ವಿರುದ್ಧ ಇರುವ ರಾಜಕೀಯ ಕೈದಿಗಳನ್ನು ಇರಿಸಿರುವ ಎವಿನ್ ಕಾರಾಗೃಹದ ಮೇಲೆ ಇಸ್ರೇಲ್ ಸೋಮವಾರ ದಾಳಿ ನಡೆಸಿತ್ತು. ಇದರಿಂದ ಜೈಲಿನ ಒಂದು ಭಾಗಕ್ಕೆ ಹಾನಿಯಾಗಿದೆ.

‘ಎವಿನ್ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಗಳನ್ನು ಟೆಹರಾನ್ ಪ್ರಾಂತ್ಯದೊಳಗಿನ ಇತರ ಜೈಲುಗಳಿಗೆ ಸ್ಥಳಾಂತರಿಸಲಾಗಿದೆ. ಕೈದಿಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ರಕ್ಷಣಾ ಕಾರ್ಯಾಚರಣೆ ತಂಡಗಳಿಗೆ ಅನುವು ಮಾಡಿಕೊಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ನ್ಯಾಯಾಂಗದ ಮಿಜಾನ್ ವೆಬ್‌ಸೈಟ್ ತಿಳಿಸಿದೆ.

ಸ್ಥಳಾಂತರ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಆದರೆ ಎಷ್ಟು ಕೈದಿಗಳು ಇದ್ದರು ಎಂಬ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿಲ್ಲ.

ಕ್ಷಿಪಣಿ ನಿಷ್ಕ್ರಿಯ: ‘ಇಸ್ರೇಲ್ ದಾಳಿ ವೇಳೆ ಎವಿನ್ ಕಾರಾಗೃಹದ ಬಳಿ ಬಿದ್ದ ಎರಡು ಕ್ಷಿಪಣಿಗಳು ಸ್ಫೋಟಗೊಳ್ಳದೇ ಇದ್ದು, ಅವುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ’ ಎಂದು ಇರಾನ್‌ನ ಅಧಿಕಾರಿಗಳು ತಿಳಿಸಿದ್ದಾರೆ.



ಸಿನಿ ಸಮ್ಮಾನಕ್ಕೆ ದಿನಗಣನೆ...

ಚಂದನವನದ ಚಂದದ ಘಮಲನ್ನು ಪಸರಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಜೂನ್ 27ರ ಶುಕ್ರವಾರ ಕಾರ್ಯಕ್ರಮ ನಡೆಯಲಿದೆ. 'ಪ್ರಜಾವಾಣಿ'ಯು ತನ್ನ 75ನೇ ವರ್ಷದ ಸಂದರ್ಭದಲ್ಲಿ ಪ್ರಾರಂಭಿಸಿದ್ದ ಈ ಕಾರ್ಯಕ್ರಮವು ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿ ಇದೀಗ ಚಂದನವನದಲ್ಲಿ ಬೇರೂರಿದೆ.

ಈ ವರ್ಣರಂಜಿತ, ಅರ್ಥಗರ್ಭಿತ ಕಾರ್ಯಕ್ರಮದ ಮೊದಲೆರಡು ಆವೃತ್ತಿಗಳು ಅತ್ಯಂತ ಯಶಸ್ವಿಯಾಗಿ, ಅದ್ದೂರಿಯಾಗಿ ನಡೆದಿವೆ. ಮೊದಲ ಆವೃತ್ತಿಯಲ್ಲಿ ಹಿರಿಯ ನಟ ಅನಂತನಾಗ್ ಅವರು ಜೀವಮಾನ ಸಾಧನೆ ಪುರಸ್ಕಾರಕ್ಕೆ ಭಾಜನರಾಗಿದ್ದರು. ಎರಡನೇ ಆವೃತ್ತಿಯಲ್ಲಿ ಚತುರ್ಭಾಷಾ ತಾರೆ ಬಿ.ಸರೋಜಾದೇವಿಯವರ ಮುಡಿಗೆ ಈ ಪುರಸ್ಕಾರ ಸೇರಿತ್ತು. ಎರಡನೇ ಆವೃತ್ತಿಯಲ್ಲಿ ಪ್ರಾರಂಭಗೊಂಡ 'ಕನ್ನಡ ಸಿನಿ ಧ್ರುವತಾರೆ' ಪ್ರಶಸ್ತಿಗೆ ನಟ ಶಿವರಾಜ್‌ಕುಮಾರ್ ಭಾಜನರಾಗಿದ್ದರು. 2024ರಲ್ಲಿ ಪ್ರಾರಂಭವಾದ ಚೊಚ್ಚಲ 'ವರ್ಷದ ಅತ್ಯುತ್ತಮ ಸಾಧನೆ' ಗರಿ ನಟ ಧನಂಜಯ ಮುಡಿಗೇರಿತ್ತು. ನಟರಾದ ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ, ಕಿಶೋರ್, ರಂಗಾಯಣ ರಘು, ಸಂಚಾರಿ ವಿಜಯ್, ಶಿಶಿರ್ ಬೈಕಾಡಿ, ನಿರ್ದೇಶಕರಾದ ತರುಣ್ ಕಿಶೋರ್ ಸುಧೀರ್, ಹೇಮಂತ್ ಎಂ.ರಾವ್, ಕಿರಣ್ ರಾಜ್, ಶಶಾಂಕ್ ಸೋಗಾಲ್, ನಿತಿನ್ ಕೃಷ್ಣಮೂರ್ತಿ, ನಟಿಯರಾದ ಉಮಾಶ್ರೀ, ಗಾನವಿ ಲಕ್ಷ್ಮಣ್, ರುಕ್ಮಿಣಿ ವಸಂತ್, ಸಂಗೀತ ನಿರ್ದೇಶಕರಾದ ವಿ.ಹರಿಕೃಷ್ಣ, ಅಜನೀಶ್ ಲೋಕನಾಥ್ ಮುಂತಾದ ಗಣ್ಯರು 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿಯನ್ನು ಗೆದ್ದಿದ್ದಾರೆ.

ಇದರ ಜೊತೆಗೆ ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳನ್ನು ಗುರುತಿಸುವ ಕೆಲಸವನ್ನೂ 'ಪ್ರಜಾವಾಣಿ' ಮಾಡುತ್ತಿದೆ. ಈ ಮೂಲಕ ತೆರೆಹಿಂದೆ ಕೆಲಸ ಮಾಡುವ ತಂತ್ರಜ್ಞರನ್ನೂ ಶ್ಲಾಘಿಸುತ್ತಿದೆ. 2024ರಲ್ಲಿ ಚಿತ್ರಮಂದಿರಗಳಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗಿದೆ. ಪ್ರಶಸ್ತಿಗೆ ನಾಮನಿರ್ದೇಶಿತರಾದವರ ಹೆಸರು, ವಿವರ ಹಾಗೂ ಸಿನಿಮಾಗಳನ್ನು ಪ್ರಕಟಿಸಲಾಗಿದ್ದು, ಒಟ್ಟು 25 ಪ್ರಶಸ್ತಿಗಳು ಪ್ರತಿಭಾನ್ವಿತರ ಕೈಸೇರಲು ದಿನಗಣನೆ ಆರಂಭವಾಗಿದೆ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.

www.prajavani.net/cinesamman/season3

'ಪ್ರಜಾವಾಣಿ' ಪ್ರಶಸ್ತಿ ಇಂಧನದಂತಿತ್ತು



ದಿಗ್ಗಜರ ನಡುವೆ ಪ್ರಶಸ್ತಿ ಸ್ವೀಕರಿಸಿದ್ದು ನನಗೆ ಖುಷಿ, ಹೆಮ್ಮೆ ಎನಿಸಿತ್ತು. ಅವರ ಜೊತೆ ಸ್ಪರ್ಧಿಸಿ ಗೆದ್ದೆ ಎಂಬ ಅಭಿಮಾನವೂ ಇತ್ತು. ಓರ್ವ ನಟನಿಗೆ ಈ ರೀತಿಯ ಗುರುತಿಸುವಿಕೆ ಬಹಳ ಮುಖ್ಯ. ಇದರಿಂದ ನನಗೆ ಚಿತ್ರರಂಗ ಇನ್ನಷ್ಟು ತೆರೆದುಕೊಂಡಿತು. ಪ್ರಶಸ್ತಿಗಳು ಬೆನ್ನುತಟ್ಟಿ, ನೀನಿನ್ನೂ ಉತ್ತಮ ಸಿನಿಮಾಗಳನ್ನು ನೀಡಬೇಕು ಎಂದು ಹೇಳುತ್ತವೆ. 'ಡೇರ್‌ಡೆವಿಲ್ ಮುಸ್ತಾಫಾ'ಗೆ 'ಪ್ರಜಾವಾಣಿ' ನೀಡಿದ ಪ್ರಶಸ್ತಿ ನನಗೆ ಒಂದು ರೀತಿ ಇಂಧನದಂತಿತ್ತು. ಎಲ್ಲಾ ವಿಭಾಗಗಳಲ್ಲೂ ಬಹಳ ಪಾರದರ್ಶಕವಾದ, ಪ್ರಾಮಾಣಿಕವಾದ ಆಯ್ಕೆ ಪ್ರಕ್ರಿಯೆ ಎದ್ದು ಕಾಣುತ್ತಿತ್ತು. ಪ್ರಶಸ್ತಿ ಕಾರ್ಯಕ್ರಮಗಳ ಪೈಕಿ ಪ್ರಜಾವಾಣಿ ಆಯೋಜಿಸಿದ್ದ ಸಮಾರಂಭ ಬಹಳ ನೈಜವಾಗಿತ್ತು. ಕಾರ್ಯಕ್ರಮವನ್ನು ಆಯೋಜಿಸಿದ್ದ ರೀತಿ ಅತ್ಯಂತ ಅದ್ಭುತವಾಗಿತ್ತು.

ಶಿಶಿರ್ ಬೈಕಾಡಿ, ನಟ

ಇಲ್ಲಿ ಪ್ರಶಸ್ತಿ ಹಂಚಲ್ಲ



'ಪ್ರಜಾವಾಣಿ'ಯು ತನ್ನ ವಿಶ್ವಾಸಾರ್ಹತೆಯಿಂದ ಗುರುತಿಸಿಕೊಂಡಿದೆ. ಇಂತಹ ಸಂಸ್ಥೆ ನೀಡುವ ಪ್ರಶಸ್ತಿಗೂ ಅಷ್ಟೇ ವಿಶ್ವಾಸಾರ್ಹತೆ ಇರುತ್ತದೆ. ಇಲ್ಲಿ ಮುಖ್ಯವಾಗಿ ಪ್ರಶಸ್ತಿಗಳನ್ನು ಹಂಚಲ್ಲ. ಅರ್ಹರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಲಾಗಿದೆ. ಚಿಕ್ಕಂದಿನಿಂದಲೂ ಓದಿಕೊಂಡು ಬಂದ ಪತ್ರಿಕೆ ಇದು. ಇಂತಹ ಪತ್ರಿಕೆಯಿಂದ ನನಗೆ ಪ್ರಶಸ್ತಿ ಸಿಕ್ಕಾಗ ಖುಷಿಯಾಗಿತ್ತು. ಚೊಚ್ಚಲ ಸಿನಿಮಾವನ್ನು ಒಂದೇ ಸಲ ಮಾಡಲು ಸಾಧ್ಯ. ಹೀಗಿರುವಾಗ ನನ್ನ ಮೊದಲ ಸಿನಿಮಾ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ'ಗೆ ಜನಮನ್ನಣೆ, ಪ್ರಶಸ್ತಿ, ವಿಮರ್ಶಕರ ಮೆಚ್ಚುಗೆ ಸಿಕ್ಕಾಗ ಖುಷಿ ದುಪ್ಪಟ್ಟಾಗಿತ್ತು.

ನಿತಿನ್ ಕೃಷ್ಣಮೂರ್ತಿ, ನಿರ್ದೇಶಕ

ಅರ್ಹ ವ್ಯಕ್ತಿಗಳಿಗೆ ಸಮ್ಮಾನ



'ಪ್ರಜಾವಾಣಿ ಸಿನಿ ಸಮ್ಮಾನ'ದ ಮುಖ್ಯ ತೀರ್ಪುಗಾರರ ಮಂಡಳಿಯ ಭಾಗವಾಗಿರುವುದಕ್ಕೆ ತುಂಬ ಖುಷಿಯಿದೆ. ಕಳೆದ ಮೂರು ವರ್ಷಗಳಿಂದ ಬಹಳ ಅರ್ಥಪೂರ್ಣವಾಗಿ ನಡೆಯುತ್ತಿರುವ ಪ್ರಶಸ್ತಿ ಪ್ರದಾನ ಸಮಾರಂಭವಿದು. ನಾನು ಮೊದಲ ಸಲ ಈ ಪ್ರಕ್ರಿಯೆಯ ಭಾಗವಾಗಿರುವೆ. ಆಯ್ಕೆ ಪ್ರಕ್ರಿಯೆ ತುಂಬ ಸ್ಪಷ್ಟತೆಯಿಂದ ಕೂಡಿದೆ. ತೀರ್ಪುಗಾರರ ಆಯ್ಕೆ ಪ್ರಕ್ರಿಯೆಯಿಂದ ಹಿಡಿದು, ತಾಂತ್ರಿಕ ತೀರ್ಪುಗಾರರಿಂದ ಆಯ್ಕೆ, ಓದುಗರ ಆಯ್ಕೆಯನ್ನೂ ಪರಿಗಣಿಸಿರುವುದು ವಿಶಿಷ್ಟ ಪರಿಕಲ್ಪನೆ. ಚಿತ್ರರಂಗದ ಅರ್ಹ ವ್ಯಕ್ತಿಗಳಿಗೆ ಪ್ರಶಸ್ತಿ ನೀಡುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿರುವುದು ಅಭಿನಂದನೀಯ. ಈ ವರ್ಷ ಕೂಡ ಅರ್ಹರಿಗೆ ಪ್ರಶಸ್ತಿ ಸಿಗಲಿದೆ ಎನ್ನುವ ಭರವಸೆ ನನಗಿದೆ.

ಅನು ಪ್ರಭಾಕರ್, ಸದಸ್ಯರು, ಮುಖ್ಯ ತೀರ್ಪುಗಾರ ಮಂಡಳಿ

ಪಾರದರ್ಶಕ ಮತ್ತು ಸ್ಪಷ್ಟ ನಿರ್ಧಾರ



'ಪ್ರಜಾವಾಣಿ ಸಿನಿ ಸಮ್ಮಾನ' 3ನೇ ಆವೃತ್ತಿಗೆ ಹೆಜ್ಜೆ ಇಟ್ಟಿದೆ. ಇಡೀ ಕನ್ನಡ ಚಲನಚಿತ್ರ ಪರಿವಾರಕ್ಕೆ ಖುಷಿ ನೀಡುವ ಚಿತ್ರೋತ್ಸವವಿದು. ಹೊಸಬರಿಗೆ, ತಂತ್ರಜ್ಞರಿಗೆ ಸ್ಫೂರ್ತಿ ನೀಡುವ ಉತ್ಸವ. ಬೇರೆ ಪ್ರಶಸ್ತಿ ಕಾರ್ಯಕ್ರಮಗಳಿಗಿಂತ ಬಹಳ ಭಿನ್ನ. ಇಲ್ಲಿ ಪ್ರಶಸ್ತಿ ಪಡೆದರೆ ಒಂದು ರೀತಿಯ ಗೌರವ. ಏಕೆಂದರೆ ಇಲ್ಲಿನ ಆಯ್ಕೆ ಪ್ರಕ್ರಿಯೆ ಅಷ್ಟು ಪಾರದರ್ಶಕ ಮತ್ತು ಸ್ಪಷ್ಟವಾಗಿದೆ. ನನ್ನದೊಂದು ಮನವಿ, ಕರ್ನಾಟಕದ ಪ್ರಾದೇಶಿಕ ಭಾಷೆಗಳಿಗೆ ಒಂದು ಪ್ರತ್ಯೇಕ ವಿಭಾಗವಿರಬೇಕು. ಪ್ರತಿ ವರ್ಷ ತುಳು, ಬ್ಯಾರಿ, ಕೊಂಕಣಿ, ಕೊಡವ ಭಾಷೆಯಂಥ ಯಾವುದಾದರೂ ಒಂದು ಉಪ ಭಾಷೆಯ ಚಿತ್ರಕ್ಕೂ ಪ್ರಶಸ್ತಿ ನೀಡಬೇಕು. ಇದರಿಂದ ಆ ಭಾಷೆಯ ಚಿತ್ರಗಳಿಗೂ ಮನ್ನಣೆ ಸಿಕ್ಕಂತಾಗುತ್ತದೆ. ಇಂಥ ಪ್ರಕ್ರಿಯೆಯ ಭಾಗವಾಗಿ ಉತ್ತಮ ಚಿತ್ರಗಳನ್ನು ಆಯ್ಕೆ ಮಾಡಿರುವುದಕ್ಕೆ ಖುಷಿಯಿದೆ. ಇದಕ್ಕಾಗಿ 'ಪ್ರಜಾವಾಣಿ' ಬಳಗಕ್ಕೆ ಕೃತಜ್ಞ.

ಶಿವಧ್ವಜ ಶೆಟ್ಟಿ, ಸದಸ್ಯರು, ತಾಂತ್ರಿಕ ತೀರ್ಪುಗಾರ ಮಂಡಳಿ

ಚಿಟಿಕೆ ಸುದ್ದಿ

ಎಂಟರ ಘಟ್ಟಕ್ಕೆ ಕೊಂಕಣ್ ಎಫ್‌ಸಿ



ಬೆಂಗಳೂರು: ಕೊಂಕಣ್ ಎಫ್‌ಸಿ ತಂಡವು ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಲೀಗ್‌ನ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 4–1ರಿಂದ ಆರ್‌ಬಿಐ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಿಳ್ಳಣ್ಣ ಗಾರ್ಡನ್ ಎಫ್‌ಸಿ ತಂಡವು 5–0 ಅಂತರದಿಂದ ಆಫ್ಗನ್ ಎಫ್‌ಸಿ ತಂಡವನ್ನು ಮಣಿಸಿ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆಯಿತು.

ಇಂದಿರಾನಗರ ಎಫ್‌ಸಿ ತಂಡವು ಸಡನ್ ಡೆತ್ ಮೂಲಕ ಮಿಸಾಕಾ ಯುನೈಟೆಡ್ ತಂಡವನ್ನು ಸೋಲಿಸಿ ಹಾಗೂ ಮಹಾರಾಜ ಸೋಷಿಯಲ್ಸ್ ಎಫ್‌ಸಿ ತಂಡವು 5–1ರಿಂದ ಮುಸ್ಲಿಂ ಹೀರೋಸ್ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದವು.

29ಕ್ಕೆ ಚೆಸ್ ಟೂರ್ನಿ



ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಜೂನ್ 29ರಂದು ಮಕ್ಕಳಿಗಾಗಿ ರ್‍ಯಾಪಿಡ್ ಚೆಸ್ ಟೂರ್ನಿ ನಡೆಯಲಿದೆ. 16 ಮತ್ತು 10 ವರ್ಷದೊಳಗಿನವರ ವಿಭಾಗದಲ್ಲಿ ಟೂರ್ನಿ ನಡೆಯಲಿದೆ.

ನೋಂದಾಯಿಸಲು ಕೊನೆಯ ದಿನ ಜೂನ್ 27. ಆರ್.ವಿ.ಕಾಲೇಜು ಬಳಿಯ ಕೃಷ್ಣ ಗಾರ್ಡನ್‌ನಲ್ಲಿ ಟೂರ್ನಿ ನಡೆಯಲಿದೆ. ವಿವರಗಳಿಗೆ 9845466416 ಸಂಪರ್ಕಿಸಬಹುದು.

ವಿವರಗಳನ್ನು balakrishnaprabhu@championschessacademy.com ಇಲ್ಲಿಗೆ ಕಳಿಸಬಹುದು.

ಅಪ್ಪಯ್ಯ ಬಿ.ಸಿ ತಂಡಕ್ಕೆ ಜಯ

ಲಂಡನ್ (ಎಎಫ್‌ಪಿ): ಅಪ್ಪಯ್ಯ ಬಿ.ಸಿ ತಂಡವು ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಪುರುಷರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ 'ಸಿ' ಡಿವಿಷನ್ ಲೀಗ್ ಪಂದ್ಯದಲ್ಲಿ 55–38ರಿಂದ ಹೊಸಕೋಟೆ ಬಿ.ಸಿ ತಂಡವನ್ನು ಮಣಿಸಿತು.



ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ, ಅಪ್ಪಯ್ಯ ಬಿ.ಸಿ ತಂಡದ ವಿನೀತ್ 12 ಅಂಕ ಗಳಿಸಿದರು. ಹೊಸಕೋಟೆ ಬಿ.ಸಿ ತಂಡದ ಧನ್ವೀರ್ 11 ಅಂಕ ಕಲೆಹಾಕಿದರು.

ಫಲಿತಾಂಶಗಳು: ಎಚ್‌ಬಿಆರ್ ಬಿ.ಸಿ 83–54ರಿಂದ ಎ.ವಿ ಬಿ.ಸಿ ವಿರುದ್ಧ; ಹಲಸೂರು ಬಿ.ಸಿ 80–30ರಿಂದ ಓರಿಯನ್ಸ್ ಎಸ್.ಸಿ ವಿರುದ್ಧ; ಅಪ್ಪಯ್ಯ ಬಿ.ಸಿ 55–38ರಿಂದ ಹೊಸಕೋಟೆ ಬಿ.ಸಿ ವಿರುದ್ಧ; ರಾಜ್‌ಕುಮಾರ್ ಬಿ.ಸಿ 67–49ರಿಂದ ಯಂಗ್‌ಬುಲ್ಸ್ ಬಿ.ಸಿ ವಿರುದ್ಧ; ಸಿನ್ಸಿನಾಟೀಸ್ ಬಿ.ಸಿ 81–73ರಿಂದ ಸಿಜೆಸಿ ವಿರುದ್ಧ; ಮೌಂಟ್ಸ್ ಕ್ಲಬ್ ತಂಡವು 46–43ರಿಂದ ಸಹಕಾರನಗರ್ ಬಿ.ಸಿ ವಿರುದ್ಧ ಹಾಗೂ ಡಿಆರ್‌ಡಿಒ ತಂಡವು 69–37ರಿಂದ ಲಕ್ಷ್ಮಣ್ ಬಿ.ಸಿ ವಿರುದ್ಧ ಜಯ ಗಳಿಸಿದವು.

ರುಜುಲಾ ರಾಷ್ಟ್ರೀಯ ದಾಖಲೆ

ರಾಷ್ಟ್ರೀಯ ಈಜು: ಕರ್ನಾಟಕದ ಶ್ರೀಹರಿ ನಟರಾಜ್, ವಿಹಿತಾ ನಯನಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರುಜುಲಾ ಎಸ್. ಅವರು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ 78ನೇ ರಾಷ್ಟ್ರೀಯ ಸೀನಿಯರ್ಸ್ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಕೂಟದ ಮೂರನೇ ದಿನವಾದ ಮಂಗಳವಾರ ನಡೆದ ಸ್ಪರ್ಧೆಯಲ್ಲಿ 17 ವರ್ಷ ವಯಸ್ಸಿನ ರುಜುಲಾ 26.36 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. 2023ರಲ್ಲಿ ರುಜುತಾ ಖಾಡೆ (26.47ಸೆ) ನಿರ್ಮಿಸಿದ್ದ ದಾಖಲೆಯನ್ನು ಮುಳುಗಿಸಿದರು. ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿಯ (ಆರ್‌ಎಸ್‌ಪಿಬಿ) ಅವಂತಿಕಾ ಸುಧೀರ್ ಚವ್ಹಾಣ್ (26.58ಸೆ) ಮತ್ತು ಕರ್ನಾಟಕದ ದಿನಿಧಿ ದೇಸಿಂಗು (26.69ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಪುರುಷರ 50 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ಒಲಿಂಪಿಯನ್ ಶ್ರೀಹರಿ ನಟರಾಜ್ (25.70ಸೆ) ಚಿನ್ನದ ಸಾಧನೆ ಮಾಡಿದರು. ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ವಿಹಿತಾ ನಯನಾ ಲೋಕನಾಥನ್ (29.99ಸೆ) ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ 1500 ಮೀಟರ್ ಫ್ರೀಸ್ಟೈಲ್‌ನಲ್ಲಿ ದೆಹಲಿಯ ಭವ್ಯಾ ಸಚದೇವ್ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. 17ನಿ.35.07 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಅವರು, 2015ರಲ್ಲಿ ಕರ್ನಾಟಕದ ವಿ.ಮಾಳವಿಕಾ (17ನಿ.39.16 ಸೆ.) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

ಪುರುಷರ 4x100 ಮೀ. ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ತಮಿಳುನಾಡು ತಂಡವು ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದಿತು. ಉತ್ಕರ್ಷ್ ಸಂತೋಷ್ ಪಾಟೀಲ್, ಮಣಿಕಂಠ ಎಲ್, ಚಿಂತನ್ ಎಸ್.ಶೆಟ್ಟಿ, ತನಿಶ್ ಜಾರ್ಜ್ ಮ್ಯಾಥ್ಯೂ ಅವರ ತಂಡವು 3ನಿಮಿಷ 45.09 ಸೆಕೆಂಡ್‌ಗಳಲ್ಲಿ ದಡ ಸೇರಿ, ಕಳೆದ ವರ್ಷ ತಮ್ಮದೇ ರಾಜ್ಯ ನಿರ್ಮಿಸಿದ್ದ ದಾಖಲೆಯನ್ನು (3ನಿ.45.66ಸೆ) ಉತ್ತಮ ಪಡಿಸಿತು.

ಫಲಿತಾಂಶಗಳು: ಪುರುಷರು: 400 ಮೀ. ಫ್ರೀಸ್ಟೈಲ್: ಆರ್ಯನ್ ನೆಹ್ರಾ (ಗುಜರಾತ್)–1, ಕುಶಾಗ್ರ ರಾವತ್ (ದೆಹಲಿ)–2, ಅನೀಶ್ ಎಸ್.ಗೌಡ (ಕರ್ನಾಟಕ)–3, ಕಾಲ: 3ನಿ.55.96 ಸೆ.; 200 ಮೀ. ಬಟರ್‌ಫ್ಲೈ: ಸಜನ್ ಪ್ರಕಾಶ್ (ಪೊಲೀಸ್)–1, ವಿಕ್ರಮ್ ಚಾಂಗ್‌ಮೈ (ಆರ್‌ಎಸ್‌ಪಿಬಿ)–2, ದರ್ಶನ್ ಎಸ್. (ಕರ್ನಾಟಕ)–3, ಕಾಲ: 1ನಿ.58.98 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಕರ್ನಾಟಕ)–1, ರಿಷಭ್ ಅನುಪಮ್ ದಾಸ್ (ಮಹಾರಾಷ್ಟ್ರ)–2, ಆಕಾಶ್ ಮಣಿ (ಕರ್ನಾಟಕ)–3, ಕಾಲ: 25.70 ಸೆ.; 4x100 ಮೀ. ಮೆಡ್ಲೆ ರಿಲೆ: ತಮಿಳುನಾಡು–1, ಕರ್ನಾಟಕ (ಉತ್ಕರ್ಷ್ ಸಂತೋಷ್ ಪಾಟೀಲ, ಮಣಿಕಂಠ ಎಲ್, ಚಿಂತನ್ ಎಸ್. ಶೆಟ್ಟಿ, ತನಿಶ್ ಜಾರ್ಜ್ ಮ್ಯಾಥ್ಯೂ)–2, ಆರ್‌ಎಸ್‌ಪಿಬಿ –3, ಕಾಲ: 3ನಿ.45.09 ಸೆ.; ನೂತನ ದಾಖಲೆ, ಹಳೆಯದು: 3ನಿ.45.66 ಸೆ.

ಮಹಿಳೆಯರು: 1,500 ಮೀ. ಫ್ರೀಸ್ಟೈಲ್: ಭವ್ಯಾ ಸಚದೇವ್ (ದೆಹಲಿ)–1, ವೃತ್ತಿ ಅಗರವಾಲ್ (ತೆಲಂಗಾಣ)–2, ತಾನ್ಯಾ ಷಡಕ್ಷರಿ (ಕರ್ನಾಟಕ)–3, ಕಾಲ: 17ನಿ.35.07 ಸೆ., ನೂತನ ದಾಖಲೆ, ಹಳೆಯದು: 17ನಿ.39.16 ಸೆ., ಕರ್ನಾಟಕ ವಿ.ಮಾಳವಿಕಾ; 200 ಮೀ. ಬಟರ್‌ಫ್ಲೈ: ಆಸ್ತಾ ಚೌಧರಿ (ಆರ್‌ಎಸ್‌ಪಿಬಿ)–1 ರೋಶಿನಿ ಬಾಲ-ಸುಬ್ರಮಣಿಯನ್ (ತಮಿಳುನಾಡು)–2, ಸೃಷ್ಟಿ ಉಪಾಧ್ಯಾಯ (ಒಡಿಶಾ)–3, ಕಾಲ: 2ನಿ.20.63 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ ಲೋಕನಾಥನ್ (ಕರ್ನಾಟಕ)–1, ಸಂಜನಾ ಮಂಗೇಶ್ ಪ್ರಭುಗಾಂವಕರ್ (ಗೋವಾ)–2, ಸೌಬ್ರತಿ ಮೊಂಡಲ್ (ಪಶ್ಚಿಮ ಬಂಗಾಳ)–3, ಕಾಲ:29.99 ಸೆ.; 50 ಮೀ. ಫ್ರೀಸ್ಟೈಲ್: ರುಜುಲಾ ಎಸ್. (ಕರ್ನಾಟಕ)–1, ಅವಂತಿಕಾ ಸುಧೀರ್ ಚವ್ಹಾಣ್ (ಆರ್‌ಎಸ್‌ಪಿಬಿ)–2, ದಿನಿಧಿ ದೇಸಿಂಗು (ಕರ್ನಾಟಕ)–3, ಕಾಲ: 26.36 ಸೆ., ನೂತನ ದಾಖಲೆ, ಹಳೆಯದು: 26.47 ಸೆ., ರುಜುತಾ ಖಾಡೆ.



ರಾಷ್ಟ್ರೀಯ ಸೀನಿಯರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ದಾಖಲೆ ನಿರ್ಮಿಸಿದ ಕರ್ನಾಟಕದ ರುಜುಲಾ ಎಸ್ ಪ್ರಜಾವಾಣಿ ಸಂಗ್ರಹ ಚಿತ್ರ



ಚಿನ್ನದ ಪದಕ ಗೆದ್ದ ಶ್ರೀಹರಿ ನಟರಾಜ್



ಸ್ವರ್ಣ ಗೆದ್ದ ವಿಹಿತಾ ನಯನಾ

ನೀರಜ್ ಚೋಪ್ರಾಗೆ ಚಿನ್ನ



ಒಸ್ಟ್ರಾವ (ಝೆಕ್ ರಿಪಬ್ಲಿಕ್) (ಪಿಟಿಐ): ಭಾರತದ ಜಾವೆಲಿನ್ ಥ್ರೊ ದಿಗ್ಗಜ ನೀರಜ್ ಚೋಪ್ರಾ ಅವರು ಮಂಗಳವಾರ ನಡೆದ ಗೋಲ್ಡನ್ ಸ್ಪೈಕ್ ಅಥ್ಲಟಿಕ್ ಕೂಟದಲ್ಲಿ ಚಿನ್ನ ಗೆದ್ದುಕೊಂಡರು. ಇದೇ ಮೊದಲ ಬಾರಿ ಇಲ್ಲಿ ಕಣಕ್ಕಿಳಿದಿದ್ದ ಚೋಪ್ರಾ ಈಗ ಎರಡು ಪ್ರಮುಖ ಕೂಟಗಳಲ್ಲಿ ಸತತವಾಗಿ ಅಗ್ರಸ್ಥಾನ ಪಡೆದಂತಾಗಿದೆ.

ಜೂನ್ 20ರಂದು ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ವಿಜೇತರಾಗಿದ್ದ ಚೋಪ್ರಾ, 9 ಮಂದಿಯಿದ್ದ ಕಣದಲ್ಲಿ 85.29 ಮೀ.ಗಳ ಥ್ರೊದೊಡನೆ ಚಿನ್ನ ಗೆದ್ದರು. ಎರಡನೇ ಸುತ್ತಿನ ನಂತರ ಮೂರನೇ ಸ್ಥಾನದಲ್ಲಿದ್ದ ಅವರು, ಮೂರನೇ ಯತ್ನದಲ್ಲಿ ಈ ದೂರ ಸಾಧಿಸಿ ಅಗ್ರಸ್ಥಾನಕ್ಕೇರಿದರು.

ದಕ್ಷಿಣ ಆಫ್ರಿಕಾದ ಡೊವ್ ಸ್ಮಿತ್ ತಮ್ಮ ಎರಡನೇ ಯತ್ನದಲ್ಲಿ ಭರ್ಚಿಯನ್ನು 84.12 ಮೀ. ದೂರ ಎಸೆದು ಎರಡನೇ ಸ್ಥಾನ ಪಡೆದರು. ಎರಡು ಬಾರಿಯ ವಿಶ್ವ ಚಾಂಪಿಯನ್ ಆಗಿರುವ ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ 83.63 ಮೀ. ದೂರ ಎಸೆದಿದ್ದು ಅವರಿಗೆ ಮೂರನೇ ಸ್ಥಾನ ದೊರೆಯಿತು. ಅವರು ಮೊದಲ ಯತ್ನದಲ್ಲೇ ಈ ದೂರ ದಾಖಲಿಸಿದ್ದರು.

ಒಸ್ಟ್ರಾವ ಕೂಟವು ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್ ಗೋಲ್ಡ್ ಈವೆಂಟ್ ಎಂಬ ಮಾನ್ಯತೆ ಪಡೆದಿದೆ.



ಪ್ರೊ.ಅನಂತಾಚಾರ್ ಸ್ಮರಣಾರ್ಥ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದ ಹೆರಾನ್ಸ್ ಕ್ರಿಕೆಟ್ ಕ್ಲಬ್ ತಂಡ. (ನಿಂತವರು) ಎಡದಿಂದ: ಸಾಯಿ ವಿ. ಅಶೋಕ್, ಶ್ಲೋಕ್ ಚಡಿಚಲ್, ವೈ ದೇವೇಶ್ವರ ರೆಡ್ಡಿ, ಅಕ್ಷೋಭ್ಯ ಹೆಬ್ಬಾರ್, ಆಯುಷ್ ಪಾಟೀಲ್, (ಕುಳಿತವರು) ಅಮಯ್ ಪ್ರಭು, ಎ.ಆರ್. ಆಚಾರ್ಯ, ಎ.ಪಿ. ಆಚಾರ್ಯ, ಶ್ರೀಧರ್ ಎಸ್. (ಕೋಚ್), (ಮಂಡಿಯೂರಿದವರು) ಅಶ್ವತ್ಥ ಎನ್, ಕವಿನ್ ಗೌಡ, ಯೋಜಿತ್ ಡಿ., ಶಶಾಂಕ್ ಆರ್, ಚಯಾಂಕ್ ಎನ್. ರೆಡ್ಡಿ, ಸೈಫುಲ್ ಅಜಂ

ಹೆರಾನ್ಸ್ ಕ್ರಿಕೆಟ್ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ತಂಡವು ಪ್ರೊ. ಅನಂತಾಚಾರ್ ಸ್ಮರಣಾರ್ಥ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಾಗಡಿ ಕ್ರಿಕೆಟ್ ಅಕಾಡೆಮಿಯನ್ನು 27 ರನ್‌ಗಳಿಂದ ಸೋಲಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೊದಲ ಬ್ಯಾಟಿಂಗ್ ಮಾಡಿದ ಹೆರಾನ್ಸ್ ತಂಡವು ಅಶ್ವತ್ಥ್ (52) ಅವರ ಅರ್ಧಶತಕದ ಬಲದಿಂದ 25 ಓವರ್‌ಗಳಲ್ಲಿ 7 ವಿಕೆಟ್‌ಗೆ 145 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮಾಗಡಿ ತಂಡವು 23 ಓವರ್‌ಗಳಲ್ಲಿ 118 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ದೇವೇಶ್ವರ್ ಮತ್ತು ಅಶ್ವತ್ಥ್ ತಲಾ ಎರಡು ವಿಕೆಟ್ ಪಡೆದರು.

ಪಂದ್ಯದ ಆಟಗಾರನಾಗಿ ದೇವೇಶ್ವರ್ (ಹೆರಾನ್ಸ್), ಉತ್ತಮ ಬ್ಯಾಟರ್ ಆಗಿ ಕೀರ್ತನ್ ಆರ್. (ಮಾಗಡಿ), ಉತ್ತಮ ಬೌಲರ್ ಆಗಿ ಇಶಾನ್ (ಮಾಗಡಿ), ಸರಣಿಯ ಆಟಗಾರನಾಗಿ ಕೆವಿನ್ ಜಿ. (ಹೆರಾನ್ಸ್) ಹೊರಹೊಮ್ಮಿದರು. ವಿಜೇತ ತಂಡಕ್ಕೆ ಎಪಿಎಸ್ ಟ್ರಸ್ಟ್‌ನ ಅಜೀವ ಸದಸ್ಯರಾದ ಎ.ಆರ್.ಆಚಾರ್ಯ ಮತ್ತು ಎ.ಪಿ. ಆಚಾರ್ಯ ಪ್ರಶಸ್ತಿ ಪ್ರದಾನ ಮಾಡಿದರು.

ವಿಂಬಲ್ಡನ್: ವಸ್ಸೂನ್‌ಗೆ ನಿರಾಸೆ



ಲಂಡನ್ (ಎಎಫ್‌ಪಿ): ಫ್ರೆಂಚ್ ಓಪನ್‌ನಲ್ಲಿ ಅನಿರೀಕ್ಷಿತವಾಗಿ ಸೆಮಿಫೈನಲ್ ತಲುಪಿದ್ದ ಫ್ರಾನ್ಸ್‌ನ ಲೋಯಿಸ್ ವಸ್ಸೂನ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿ ಕ್ವಾಲಿಫೈಯರ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ಕೆನಡಾದ ಕಾರ್ಸನ್ ಬ್ರಾನ್‌ಸ್ಟೈನ್ 6-2, 6-7 (1/7), 6-4ರಿಂದ ವಿಶ್ವ ಕ್ರಮಾಂಕದಲ್ಲಿ 65ನೇ ಸ್ಥಾನದಲ್ಲಿರುವ ವಸ್ಸೂನ್ ಅವರಿಗೆ ಆಘಾತ ನೀಡಿದರು. ಕಾರ್ಸನ್ 197ನೇ ಕ್ರಮಾಂಕ ಹೊಂದಿದ್ದಾರೆ.

ಫ್ರೆಂಚ್ ಓಪನ್‌ಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ 22 ವರ್ಷ ವಯಸ್ಸಿನ ವಸೂನ್ ಅವರು ಮೂರನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ ಮತ್ತು ಆರನೇ ಶ್ರೇಯಾಂಕದ ಮೀರಾ ಆಂಡ್ರೀವಾ ಅವರಿಗೆ ಆಘಾತ ನೀಡಿದ್ದರು. ಆದರೆ, ಸೆಮಿಫೈನಲ್‌ನಲ್ಲಿ ಅಮೆರಿಕದ ಕೊಕೊ ಗಾಫ್ ಅವರಿಗೆ ಮಣಿದಿದ್ದರು.

ಈ ಸಾಧನೆಯಿಂದಾಗಿ ವಸ್ಸೂನ್, ಜೂನ್ ಎರಡನೇ ವಾರ ಪ್ರಕಟವಾದ ಡಬ್ಲ್ಯುಟಿಎ ರ್‍ಯಾಂಕಿಂಗ್‌ನಲ್ಲಿ 361ನೇ ಸ್ಥಾನದಿಂದ 65ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದರು.

23ನೇ ರಾಷ್ಟ್ರೀಯ ಜೂನಿಯರ್ ಫೆಡರೇಷನ್ ಅಥ್ಲೆಟಿಕ್ಸ್ • ಕರ್ನಾಟಕದ ಭೂಷಣ್, ಅಪೂರ್ವಾಗೆ ಬೆಳ್ಳಿ

ಪಾವನಾ ನಾಗರಾಜ್‌ಗೆ ಲಾಂಗ್‌ಜಂಪ್ ಚಿನ್ನ

ಪ್ರಯಾಗರಾಜ್ (ಪಿಟಿಐ): ಕರ್ನಾಟಕದ ಪಾವನಾ ನಾಗರಾಜ್ ಅವರು ಇಲ್ಲಿ ನಡೆದ 23ನೇ ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಫೆಡರೇಷನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಚಿನ್ನದ ಪದಕ ಗೆದ್ದರು.

ಕೂಟದ ಕೊನೆಯ ದಿನವಾದ ಮಂಗಳವಾರ 19 ವರ್ಷ ವಯಸ್ಸಿನ ಪಾವನಾ 6.29 ಮೀಟರ್ ಸಾಧನೆ ಮೆರೆದರು. ಎನ್‌ಸಿಒಇ ತಿರುವನಂತಪುರದ ಮುಬಸ್ಸಿನಾ ಮೊಹಮ್ಮದ್ (6.15ಮೀ) ಮತ್ತು ಹರಿಯಾಣದ ಪರೀಕ್ಷಾ (5.87ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಪುರುಷರ 400 ಮೀಟರ್ ಹರ್ಡಲ್ಸ್ ಓಟದಲ್ಲಿ ಕರ್ನಾಟಕದ ಭೂಷಣ್ ಸುನಿಲ್ ಪಾಟೀಲ (52.21ಸೆ) ಬೆಳ್ಳಿ ಪದಕ ಜಯಿಸಿದರು. ಗುಜರಾತ್‌ನ ಮುರಾದ್ ಸಿರ್ಮನ್ (50.75ಸೆ) ಅವರು ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. 2012ರಲ್ಲಿ ದುರ್ಗೇಶ್ ಕುಮಾರ್ ಪಾಲ್ ನಿರ್ಮಿಸಿದ್ದ (51.26 ಸೆಕೆಂಡ್) ದಾಖಲೆ ಮುರಿದರು. ಎನ್‌ಸಿಒಇ ಪಟಿಯಾಲದ ಅಮಿತ್ ಕುಮಾರ್ (52.37ಸೆ) ಕಂಚಿನ ಪದಕ ಜಯಿಸಿದರು.

ಮಹಿಳೆಯರ 400 ಮೀಟರ್ ಹರ್ಡಲ್ಸ್‌ನಲ್ಲಿ ಕರ್ನಾಟಕದ ಅಪೂರ್ವಾ ಆನಂದ ನಾಯಕ್ (1ನಿ.01.92ಸೆ) ಬೆಳ್ಳಿಯ ಸಾಧನೆ ಮಾಡಿದರು. ಎನ್‌ಸಿಒಇ ಪಟಿಯಾಲದ ತನು ಚೌಧರಿ (1ನಿ.01.09ಸೆ) ಮತ್ತು ದೆಹಲಿಯ ಹರ್ಷಿತಾ ಗೋಸ್ವಾಮಿ (1ನಿ.02.59ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಜಯಿಸಿದರು.

ಮಹಿಳೆಯರ 5,000 ಮೀಟರ್ ಓಟದಲ್ಲಿ ಎನ್‌ಇಸಿಇ ಬೆಂಗಳೂರಿನ ಪ್ರಿಯಾಂಕಾ ಓಕ್ಸಾ (17ನಿ.07.09ಸೆ) ಚಿನ್ನ ಗೆದ್ದರು. ಗುಜರಾತ್‌ನ ಶಿಲ್ಪಾ ದಿಹೋರಾ (17ನಿ.07.71ಸೆ) ಬೆಳ್ಳಿ ಮತ್ತು ಮಧ್ಯ ಪ್ರದೇಶದ ಸೋನಮ್ ಪರಮಾರ್ (17ನಿ.11.60ಸೆ) ಕಂಚು ಜಯಿಸಿದರು.

ಉತ್ತರ ಪ್ರದೇಶದ ಅನುಷ್ಕಾ ಯಾದವ್ ಅವರು ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ 60.46 ಮೀಟರ್ ಸಾಧನೆಯೊಂದಿಗೆ ಕೂಟ ದಾಖಲೆ ನಿರ್ಮಿಸಿದರು. 2022ರಲ್ಲಿ ತಾನ್ಯಾ ಚೌಧರಿ ಸ್ಥಾಪಿಸಿದ್ದ (57.09 ಮೀಟರ್) ದಾಖಲೆಯನ್ನು ಹಿಂದಿಕ್ಕಿದರು. ಅನುಷ್ಕಾ ಅವರು ಫೆಬ್ರುವರಿಯಲ್ಲಿ ನಡೆದ ಉತ್ತರಾಖಂಡ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಅವರು 62.89 ಮೀಟರ್ ದೂರ ಹ್ಯಾಮರ್ ಎಸೆದು ಜೂನಿಯರ್ ರಾಷ್ಟ್ರೀಯ ದಾಖಲೆ ಬರೆದಿದ್ದರು.



ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕದ ಪಾವನಾ ನಾಗರಾಜ್ ಪ್ರಜಾವಾಣಿ ಸಂಗ್ರಹ ಚಿತ್ರ



ಬೆಳ್ಳಿ ಪದಕ ಗೆದ್ದ ಕರ್ನಾಟಕದ ಭೂಷಣ್ ಸುನಿಲ್ ಪಾಟೀಲ



400 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಗೆದ್ದ ಅಪೂರ್ವಾ ಆನಂದ ನಾಯಕ್

ಯುವ ರಾಷ್ಟ್ರೀಯ ಕುಸ್ತಿ: ರಾಜ್ಯಕ್ಕೆ 5 ಪದಕ

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಕುಸ್ತಿಪಟುಗಳು ನಾಗ್ಪುರದಲ್ಲಿ ಈಚೆಗೆ ನಡೆದ 15 ವರ್ಷದೊಳಗಿನವರ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ ಸೇರಿದಂತೆ ಐದು ಪದಕಗಳನ್ನು ಗೆದ್ದಿದ್ದಾರೆ.



ತಿಮ್ಮೇಶಿ

ಕರ್ನಾಟಕದ ತಿಮ್ಮೇಶಿ ಜಿ.ಎಂ. ಅವರು ಗ್ರೀಕೊ-ರೋಮನ್ 62 ಕೆ.ಜಿ ವಿಭಾಗದ ಫೈನಲ್‌ನಲ್ಲಿ 6–1ರಿಂದ ಮಹಾರಾಷ್ಟ್ರದ ದರ್ಪಣ್ ಚೌಧರಿ ವಿರುದ್ಧ ಗೆದ್ದು, ಚಿನ್ನಕ್ಕೆ ಕೊರಳೊಡ್ಡಿದರು.

ಮಹಿಳಾ ಕುಸ್ತಿ ವಿಭಾಗದಲ್ಲಿ ಸುಶ್ಮಿತಾ ಕಮ್ಮಾರ್ (36 ಕೆ.ಜಿ) ಬೆಳ್ಳಿ ಪದಕ ಗೆದ್ದರು. ಫ್ರೀಸ್ಟೈಲ್ ಕುಸ್ತಿಯಲ್ಲಿ (52 ಕೆ.ಜಿ) ಮೋಹನ್ ರಾಜ್, ಗ್ರೀಕೊ-ರೋಮನ್ (48 ಕೆ.ಜಿ) ವಿಭಾಗದಲ್ಲಿ ಯಂಕಪ್ಪ ಕೂಡಗಿ, ಮಹಿಳಾ ಕುಸ್ತಿ (50 ಕೆ.ಜಿ) ವಿಭಾಗದಲ್ಲಿ ಪುಷ್ಪಾ ನಾಯಕ್ ಅವರು ಕಂಚಿನ ಪದಕ ಜಯಿಸಿದರು.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಆಶ್ರಯದಲ್ಲಿ ಮಹಾರಾಷ್ಟ್ರ ಕುಸ್ತಿಗಿರಿ ಸಂಘವು ಜೂನ್ 20 ರಿಂದ 22ರವರೆಗೆ ಈ ಟೂರ್ನಿಯನ್ನು ನಾಗ್ಪುರದಲ್ಲಿ ಆಯೋಜಿಸಿತ್ತು.

ಇಂಗ್ಲೆಂಡ್ ಗೆಲುವಿನಲ್ಲಿ ಮಿನುಗಿದ ಡಕೆಟ್

ಆತಿಥೇಯ ತಂಡಕ್ಕೆ ಐದು ವಿಕೆಟ್ ಜಯ
● ಕ್ರಾಲಿ, ರೂಟ್ ಅರ್ಧ ಶತಕ

• ಸಿದ್ನಿ ಕಿರಣ್

ಲೀಡ್ಸ್: ಉತ್ತಮ ಮನರಂಜನೆ ಒದಗಿಸಿದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಒಟ್ಟು ಏಳು ಶತಕಗಳು ದಾಖಲಾದವು. ಆದರೆ ಅಂತಿಮ ದಿನದಾಟದಲ್ಲಿ ಬೆನ್ ಡಕೆಟ್ ಅವರ ಸೊಗಸಾದ ಶತಕ ಇಂಗ್ಲೆಂಡ್ ಮುಕುಟದಲ್ಲಿ ಕಂಗೊಳಿಸುವ ವಜ್ರದಂತೆ ಕಂಡಿತು. ಆತಿಥೇಯ ತಂಡ ಮಂಗಳವಾರ ಹೆಡಿಂಗ್ಲೆಯಲ್ಲಿ ಭಾರತದ ವಿರುದ್ಧ ಐದು ವಿಕೆಟ್‌ಗಳ ಅಮೋಘ ಜಯಗಳಿಸಿತು.

ಕೋಚ್ ಬ್ರೆಂಡನ್ ಮೆಕ್ಕಲಂ ಮತ್ತು ನಾಯಕ ಬೆನ್ ಸ್ಟೋಕ್ಸ್ ಅವರ ಆಕ್ರಮಣಕಾರಿ ತಂತ್ರಗಾರಿಕೆಯ ಕ್ರಿಕೆಟ್‌ನಲ್ಲಿ ಡಕೆಟ್ ಅವರದು ಪ್ರಮುಖ ಪಾತ್ರ. ಅವರು ವೈಫಲ್ಯದ ಚಿಂತೆಯಿಲ್ಲದೇ ಆಡಿ ಅಚ್ಚುಕಟ್ಟಾದ 149 ರನ್ (170ಎ, 4x21, 6x1) ಪೋಣಿಸಿದರು. 371 ರನ್‌ಗಳ ದೊಡ್ಡ ಗುರಿಯನ್ನು ಇಂಗ್ಲೆಂಡ್ ಸುಲಭವಾಗಿ (5 ವಿಕೆಟ್‌ಗೆ 373) ದಾಟಿತು.

ಡಕೆಟ್ ನಿರ್ವಿವಾದವಾಗಿ ಪಂದ್ಯದ ಹೀರೊ ಎನಿಸಿದರು. ಸವಾಲಿನ ಪರಿಸ್ಥಿತಿಯಲ್ಲಿ ಅವರು ಭಾರತದ ಬೌಲರ್‌ಗಳನ್ನು ವ್ಯವಸ್ಥಿತವಾಗಿ ಮಟ್ಟಹಾಕಿದರು. ಕೆಚ್ಚು ಮತ್ತು ದೃಢನಿರ್ಧಾರದಿಂದ ಆಡಿದ ಜಾಕ್ ಕ್ರಾಲಿ (65, 126ಎ) ಅವರಿಗೆ ಸಮರ್ಥ ಬೆಂಬಲ ನೀಡಿದರು. ಇವರಿಬ್ಬರು ಮೊದಲ ವಿಕೆಟ್‌ಗೆ ಕೇವಲ 42.2 ಓವರುಗಳಲ್ಲಿ 188 ರನ್ ಸೇರಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿದರು. ಇಂಥ ತುರುಸಿನ ಪೈಪೋಟಿಯ ಪಂದ್ಯದಲ್ಲಿ ಅಗತ್ಯವಿರುವ ಶಿಸ್ತುಬದ್ಧ ದಾಳಿ ಮಾತ್ರ ಭಾರತದ ಬೌಲಿಂಗ್ ಪಡೆಯಲ್ಲಿ ಕಾಣಲಿಲ್ಲ.



ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ

ಕೊನೆಯ ದಿನ ಏಷ್ಯಾ ಉಪಖಂಡದ ಪಿಚ್‌ಗಳ ರೀತಿ ಇಲ್ಲಿನ ಪಿಚ್ ವರ್ತಿಸಲಿಲ್ಲ. ಒಣ ಪಿಚ್‌ನಲ್ಲಿ ಕೆಲವೇ ಕೆಲವು ಎಸೆತಗಳು ಮಾತ್ರ ನಿರೀಕ್ಷೆ ಮೀರಿ ಪುಟಿದೆದ್ದವು. ಅಗ್ರಗಣ್ಯ ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಬಿಗುವಾಗಿಯೇ ಬೌಲಿಂಗ್ ಮಾಡಿದರು. ಅವರು ಬ್ಯಾಟ್ಸಮನ್ನರ ಸಹನೆ ಪರೀಕ್ಷಿಸಿದರು. ಕೆಲವು ಎಸೆತಗಳು ಡಕೆಟ್ ಮತ್ತು ಕ್ರಾಲಿ ಅವರ ಬ್ಯಾಟಿನಂಚಿಗೆ ಮುತ್ತಿಕ್ಕಿದರೂ ದುರದೃಷ್ಟವಶಾತ್ ಭಾರತಕ್ಕೆ ವಿಕೆಟ್ ಸಿಗಲಿಲ್ಲ.

ಆದರೆ ಪ್ರಸಿದ್ಧ ಕೃಷ್ಣ ಮತ್ತು ರವೀಂದ್ರ ಜಡೇಜ ದಾಳಿಗಿಳಿಯುತ್ತಿದ್ದಂತೆ ಇಂಗ್ಲೆಂಡ್ ಆರಂಭಿಕರು ರನ್‌ವೇಗ ಹೆಚ್ಚಿಸತೊಡಗಿದರು. ಲಂಚ್ ವೇಳೆಗೆ ಮೊತ್ತ 30 ಓವರುಗಳಲ್ಲಿ 117/0. ಆತಿಥೇಯರ ಪಾಳೆಯದಲ್ಲಿ ಗೆಲುವಿನ ವಾಸನೆ ಬಡಿಯತೊಡಗಿತು. ಸಾಕಷ್ಟು ಸಮಯವಿದ್ದ ಕಾರಣ ಇಬ್ಬರೂ ಓವರಿಗೆ ನಾಲ್ಕರ ವೇಗದಲ್ಲಿ ರನ್ ಗಳಿಸಿದರು.

ಆದರೆ ಲಂಚ್ ನಂತರ ಓವರಿಗೆ 5.50ರ ವೇಗದಲ್ಲಿ ರನ್‌ಗಳು ಹರಿಯತೊಡಗಿದವು. ಕಟ್, ಪುಲ್, ಸ್ವೀಪ್, ರಿವರ್ಸ್ ಸ್ವೀಪ್ ಹೊಡೆತಗಳು ಕಂಡುಬಂದವು. ಟೆಸ್ಟ್‌ಗೆ ವಿದಾಯ ಹೇಳಿರುವ ವಿರಾಟ್ ಕೊಹ್ಲಿ ಅವರ ಅನುಪಸ್ಥಿತಿಯಲ್ಲಿ ಭಾರತ ತಂಡದ ಉತ್ಸಾಹ ಕುಗ್ಗಿದಂತೆ ಕಂಡಿತು. ಡಕೆಟ್ ಅವರು 97 ರನ್ ಗಳಿಸಿದ್ದಾಗ ಯಶಸ್ವಿ ಜೈಸ್ವಾಲ್ ಕ್ಯಾಚ್ ಬಿಟ್ಟರು.



ಆಕರ್ಷಕ ಶತಕ ಗಳಿಸಿದ ಬೆನ್ ಡಕೆಟ್ ಎಪಿ ಚಿತ್ರ

ಆದರೆ ಹತಾಶೆಯ ಈ ವೇಳೆ, ಪ್ರಸಿದ್ಧ ಕೃಷ್ಣ ನೆರವಿಗೆ ಬಂದರು. ಮೊದಲು ದಂಡನೆಗೊಳಗಾಗಿದ್ದ ಅವರು ನಂತರ ಎರಡು ಓವರುಗಳ ಅಂತರದಲ್ಲಿ ಕ್ರಾಲಿ ಮತ್ತು ಓಲಿ ಪೋಪ್ ಅವರ ವಿಕೆಟ್‌ಗಳನ್ನು ಪಡೆದರು. ಈ ಪಂದ್ಯದಲ್ಲಿ ಸಪ್ಪೆಯಾಗಿದ್ದಂತೆ ಕಂಡ ಶಾರ್ದೂಲ್ ಠಾಕೂರ್ ಅವರು ಬಂಡೆಯಂತೆ ಬೇರೂರಿದ್ದ ಡಕೆಟ್ ಮತ್ತು ಅಪಾಯಕಾರಿ ಆಟಗಾರ ಹ್ಯಾರಿ ಬ್ರೂಕ್ ಅವರ ವಿಕೆಟ್‌ಗಳನ್ನು ಚಹಾ ವಿರಾಮಕ್ಕೆ ಸ್ವಲ್ಪ ಮೊದಲು ಪಡೆದರು.

ನಾಯಕ ಬೆನ್ ಸ್ಟೋಕ್ಸ್ (33) ಅಂತಿಮ ಅವಧಿಯ ಆಟ ಆರಂಭವಾದ ಕೆಲವೇ ಹೊತ್ತಿನಲ್ಲಿ ರಿವರ್ಸ್ ಸ್ವೀಪ್ ಹೊಡೆತಕ್ಕೆ ಹೋಗಿ ದಂಡ ತೆತ್ತರು. ಆದರೆ ಮಾಜಿ ನಾಯಕ, ಸ್ಥಳೀಯ ತಾರೆ ಜೋ ರೂಟ್ ಬೇರೂರಿ 53 ರನ್‌ಗಳೊಡನೆ ಅಜೇಯರಾಗುಳಿದರು.

ಬರ್ಮಿಂಗ್‌ಹ್ಯಾಮ್‌ನಲ್ಲಿ ಎರಡನೇ ಟೆಸ್ಟ್ ಆರಂಭವಾಗಲು ವಾರದ ಅವಧಿಯಿದೆ. ಆದರೆ ಈ ಟೆಸ್ಟ್‌ನಲ್ಲಿ ಉತ್ತಮವಾಗಿ ಆರಂಭ ಮಾಡಿದ ಭಾರತ ಅಂತಿಮವಾಗಿ ಸೋತ ರೀತಿ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಭಾರತದ ಆಟಗಾರರು ಎರಡು ಇನಿಂಗ್ಸ್‌ಗಳಲ್ಲಿ ಐದು ಶತಕಗಳನ್ನು ಹೊಡೆದಿದ್ದನ್ನು ಮರೆಯುವಂತಿಲ್ಲ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 471 (113 ಓವರುಗಳಲ್ಲಿ)
ಇಂಗ್ಲೆಂಡ್: 465 (100.4 ಓವರುಗಳಲ್ಲಿ)
ಎರಡನೇ ಇನಿಂಗ್ಸ್:
ಭಾರತ: 364 (96 ಓವರುಗಳಲ್ಲಿ)
ಇಂಗ್ಲೆಂಡ್: 5ಕ್ಕೆ373 (82 ಓವರುಗಳಲ್ಲಿ)
ಕ್ರಾಲಿ ಸಿ ರಾಹುಲ್ ಬಿ ಪ್ರಸಿದ್ಧ 65 (126ಎ, 4x7)
ಡಕೆಟ್ ಸಿ ಸಬ್ (ರೆಡ್ಡಿ) ಬಿ ಠಾಕೂರ್ 149 (170ಎ, 4x21, 6x1)
ಪೋಪ್ ಬಿ ಪ್ರಸಿದ್ಧ 8 (8ಎ, 4x2)
ರೂಟ್ ಔಟಾಗದೇ 53 (84ಎ, 4x6)
ಬ್ರೂಕ್ ಸಿ ಪಂತ್ ಬಿ ಠಾಕೂರ್ 0 (1ಎ)
ಸ್ಟೋಕ್ಸ್ ಸಿ ಗಿಲ್ ಬಿ ಜಡೇಜ 33 (51ಎ, 4x4)
ಜೇಮಿ ಸ್ಮಿತ್ ಔಟಾಗದೇ 44 (55ಎ, 4x4, 6x2)
ಇತರೆ: 21 (ಬೈ 12, ಲೆಗ್‌ಬೈ 6, ನೋಬಾಲ್ 3)
ವಿಕೆಟ್ ಪತನ: 1–188 (ಜಾಕ್ ಕ್ರಾಲಿ, 42.2), 2–206 (ಓಲಿ ಪೋಪ್ 44.4), 3–253 (ಬೆನ್ ಡಕೆಟ್, 54.3), 4–253 (ಹ್ಯಾರಿ ಬ್ರೂಕ್, 54.4), 5–302 (ಬೆನ್ ಸ್ಟೋಕ್ಸ್, 67.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 19–3–57–0; ಮೊಹಮ್ಮದ್ ಸಿರಾಜ್ 14–1–51–0; ರವೀಂದ್ರ ಜಡೇಜ 24–1–104–1; ಪ್ರಸಿದ್ಧ ಕೃಷ್ಣ 15–0–92–2; ಶಾರ್ದೂಲ್ ಠಾಕೂರ್ 10–0–51–2
ಪಂದ್ಯದ ಆಟಗಾರ: ಬೆನ್ ಡಕೆಟ್

ಫಲಿತಾಂಶ: ಇಂಗ್ಲೆಂಡ್‌ಗೆ 5 ವಿಕೆಟ್‌ಗಳ ಗೆಲುವು, ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

ಎರಡನೇ ಯಶಸ್ವಿ ಅತ್ಯಧಿಕ ರನ್ ಚೇಸ್

- **3ಕ್ಕೆ 373:** ಇದು ಇಂಗ್ಲೆಂಡ್ ಯಶಸ್ವಿಯಾಗಿ ಬೆನ್ನಟ್ಟಿದ ಎರಡನೇ ಅತಿ ದೊಡ್ಡ ಗುರಿ ಎನಿಸಿತು. ಈ ಹಿಂದೆ 2022ರಲ್ಲಿ ಬರ್ಮಿಂಗ್‌ಹ್ಯಾಮ್ ಟೆಸ್ಟ್ ಪಂದ್ಯದಲ್ಲಿ ಭಾರತ ವಿರುದ್ಧವೇ 3 ವಿಕೆಟ್‌ಗೆ 378 ರನ್ ಹೊಡೆದು ಗೆಲುವು ಸಾಧಿಸಿತ್ತು.
- **1673:** ಇದು ಈ ಟೆಸ್ಟ್ ಪಂದ್ಯದಲ್ಲಿ ಉಭಯ ತಂಡಗಳು ಗಳಿಸಿದ ಒಟ್ಟು ರನ್‌ಗಳು. ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಪಂದ್ಯವೊಂದರಲ್ಲಿ ಇದು ಅತಿ ಹೆಚ್ಚಿನ ಒಟ್ಟು ಮೊತ್ತವಾಗಿದೆ.

ರಿಷಭ್ ಪಂತ್‌ಗೆ ವಾಗ್ದಂಡನೆ

ಲೀಡ್ಸ್ (ಎಎಫ್‌ಪಿ): ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನದ ಆಟದ ವೇಳೆ ಅಂಪೈರ್ ತೀರ್ಮಾನದ ವಿರುದ್ಧ ಬಹಿರಂಗ ಅಸಮಾಧಾನ ಸೂಚಿಸಿದ ಭಾರತದ ವಿಕೆಟ್ ಕೀಪರ್ ರಿಷಭ್ ಪಂತ್ ಅವರಿಗೆ ವಾಗ್ದಂಡನೆ ವಿಧಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಮಂಗಳವಾರ ಪ್ರಕಟಿಸಿದೆ.

ಐಸಿಸಿ ನೀತಿಸಂಹಿತೆಯ ಉಲ್ಲಂಘನೆ ಮಾಡಿದ್ದು ಸಾಬೀತಾಗಿದ್ದು, ಅವರ ಶಿಸ್ತು ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆ ಮಾಡಲಾಗಿದೆ.

ಭಾನುವಾರ ಇಂಗ್ಲೆಂಡ್ ಮೊದಲ ಇನಿಂಗ್ಸ್ ಬ್ಯಾಟಿಂಗ್ ವೇಳೆ ಬೆನ್ ಸ್ಟೋಕ್ಸ್ ಮತ್ತು ಹ್ಯಾರಿ ಬ್ರೂಕ್ ಕ್ರೀಸ್‌ನಲ್ಲಿದ್ದರು. ಭಾರತ ತಂಡದ ಉಪನಾಯಕರಾಗಿರುವ ಪಂತ್ ಆ ವೇಳೆ ಚೆಂಡು ಆಕಾರ ಕಳೆದುಕೊಂಡಿದ್ದು ಬದಲಿಸುವಂತೆ ಪಂತ್ ಅಂಪೈರ್‌ಗಳಿಗೆ ಮನವಿ ಮಾಡಿದ್ದರು.

‘ಚೆಂಡಿನ ಗೇಜ್ ಬಳಸಿ ಪರಿಶೀಲಿಸಿದ ಅಂಪೈರ್‌ಗಳು ಬದಲಾವಣೆಗೆ ನಿರಾಕರಿಸಿದ್ದರು. ಆಗ ಪಂತ್ ಅವರು ಅಂಪೈರ್‌ಗಳ ಎದುರೇ ಚೆಂಡನ್ನು ನೆಲಕ್ಕೆ ಕುಕ್ಕಿ ಅಸಮಾಧಾನ ಹೊರಹಾಕಿದ್ದರು ಎಂದು ತಿಳಿಸಿದೆ. ರೆಫ್ರಿ ರಿಚಿ ರಿಚರ್ಡ್‌ಸನ್ ಅವರು ವಿಧಿಸಿದ ಕ್ರಮಕ್ಕೆ ಪಂತ್ ಸಮ್ಮತಿಸಿದ್ದಾರೆ ಎಂದು ಹೇಳಿದೆ.



ಭಾರತದ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ಎರಡು ಶತಕಗಳನ್ನು ಬಾರಿಸಿದರು!

ದಿಲೀಪ್ ದೋಷಿ ಅವರಿಗೆ ಗೌರವ



ಲೀಡ್ಸ್: ಸೋಮವಾರ ಲಂಡನ್‌ನಲ್ಲಿ ನಿಧನರಾದ ಭಾರತ ತಂಡದ ಮಾಜಿ ಸ್ಪಿನ್ನರ್ ದಿಲೀಪ್ ದೋಷಿ ಅವರಿಗೆ ಗೌರವ ಸಲ್ಲಿಸಲು ಭಾರತ ಮತ್ತು ಇಂಗ್ಲೆಂಡ್ ತಂಡಗಳ ಆಟಗಾರರು ಮಂಗಳವಾರ ಅಂತಿಮ ದಿನದಾಟ ಆರಂಭಕ್ಕೆ ಮೊದಲು ಒಂದು ನಿಮಿಷ ಮೌನ ಆಚರಿಸಿದರು. ಎರಡೂ ತಂಡಗಳ ಆಟಗಾರರು ತೋಳಿಗೆ ಕಪ್ಪುಪಟ್ಟಿ ಧರಿಸಿ ಕಣಕ್ಕಿಳಿದರು.

1979ರಿಂದ 1983ರ ಅವಧಿಯಲ್ಲಿ ದೋಷಿ ಅವರು 33 ಟೆಸ್ಟ್ ಮತ್ತು 15 ಏಕದಿನ ಪಂದ್ಯಗಳನ್ನು ಆಡಿದ್ದರು. ಕ್ರಮವಾಗಿ 114 ಮತ್ತು 22 ವಿಕೆಟ್‌ಗಳನ್ನು ಪಡೆದಿದ್ದರು. ಸೌರಾಷ್ಟ್ರ ಮತ್ತು ಬಂಗಾಳ ತಂಡಗಳನ್ನು ದೇಶಿ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ್ದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 898 ವಿಕೆಟ್‌ಗಳನ್ನು ಪಡೆದಿದ್ದರು. ಬಿಷನ್ ಸಿಂಗ್ ಬೇಡಿ ಅವರ ನೆರಳಿನಲ್ಲೇ ದೋಷಿ ತಮ್ಮದೇ ಆದ ಛಾಪು ಮೂಡಿಸಿದ್ದರು.

ಅವರು ನಾಟಿಂಗ್‌ಹ್ಯಾಮ್‌ಶೈರ್ ಮತ್ತು ವಾರ್ವಿಕ್‌ಶೈರ್ ಕೌಂಟಿ ತಂಡಗಳಿಗೂ ಆಡಿದ್ದರು.